ಡಾ|| ರಾಜ್‌ಕುಮಾರ್ ಅಕಾಡೆಮಿ
ಬೆಂಗಳೂರು

ಡಾ|| ರಾಜ್‌ಕುಮಾರ್ ಕುಟುಂಬದವರ ಕೊಡುಗೆ

# ವಾರದ ಸುದ್ದಿ ಸಂಕಲನ

## ಸ್ಪಷ್ಟ ಮತ್ತು ಸಮಗ್ರ ವಿದ್ಯಮಾನಗಳು

**ಜುಲೈ ೫ನೇ ವಾರ**

27-07-2026 TO 01-08-2026




# ಬೆಂಗಳೂರಿನಲ್ಲಿ ಲ್ಯಾಂಕಾಸ್ಟರ್ ವಿ.ವಿ ಕ್ಯಾಂಪಸ್

- ಮೀರಾಗೆ ಹ್ಯಾಟ್ರಿಕ್ ಚಿನ್ನ; ರಿಷಿಗೆ ರಜತ
- ಪಾನ್ ಮಸಾಲಗೆ ಸೆಸ್ ಏಕಪಕ್ಷೀಯ
- ಹೆಚ್ಚುವರಿ ಕಲ್ಲಿದ್ದಲು ಪೂರೈಸಲು ಸಮ್ಮತಿ
- ಪಿಎಂ-ಕಿಸಾನ್: 5 ವರ್ಷ ವಿಸ್ತರಣೆ

**ವಾರದ ಪ್ರಚಲಿತ ಘಟನೆಗಳು - ಪ್ರಜಾವಾಣಿ**

**ದಿನಾಂಕ: 27ನೇ ಜುಲೈ – 01ನೇ ಆಗಸ್ಟ್** 2026


## ❖ ಇನ್ಫೊಸಿಸ್ ಸಹಸಂಸ್ಥಾಪಕ ನಂದನ್ ನಿಲೇಕಣಿ ನೇತೃತ್ವ: ಪರೀಕ್ಷೆ ಸುಧಾರಣೆಗೆ ಕಾರ್ಯಪಡೆ

- ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ನಡೆಸುವ ಪರೀಕ್ಷೆಗಳಲ್ಲಿ ಸುಧಾರಣೆಗಳನ್ನುತರುವ ಕುರಿತು ಶಿಫಾರಸುಗಳನ್ನು ಮಾಡುವುದಕ್ಕಾಗಿ
- ಇನ್ಫೊಸಿಸ್ ಸಹಸಂಸ್ಥಾಪಕ ನಂದನ್ ನಿಲೇಕಣಿ ನೇತೃತ್ವದಲ್ಲಿ ಉನ್ನತಾಧಿಕಾರ ಕಾರ್ಯಪಡೆ ರಚಿಸಿದ್ದಾಗಿ ಪ್ರಧಾನಿ ನರೇಂದ್ರ ಮೋದಿ ಭಾನುವಾರ ಘೋಷಿಸಿದ್ದಾರೆ.
- ಇಸ್ರೋ ಮಾಜಿ ಅಧ್ಯಕ್ಷ ಎಸ್.ಸೋಮನಾಥ್, ಗುಪ್ತಚರ ಸಂಸ್ಥೆ (ಐಬಿ) ಮಾಜಿ ನಿರ್ದೇಶಕ ತಪನ್ ಡೇಕಾ, ಚೆನ್ನೈ ಐಐಟಿ ನಿರ್ದೇಶಕ ವಿ.ಕಾಮಕೋಟಿ, ಮಾಜಿ ಶಿಕ್ಷಣ ಕಾರ್ಯದರ್ಶಿ ಅನಿತಾ ಕರ್ವಾಲ್ ಹಾಗೂ ಲಾಜಿಸ್ಟಿಕ್ ತಜ್ಞ ಅಮೃತ್‌ಲಾಲ್ ಮೀನಾ ಈ ಕಾರ್ಯಪಡೆ ಸದಸ್ಯರಾಗಿದ್ದಾರೆ.
- ತಂತ್ರಜ್ಞಾನವನ್ನು ಗರಿಷ್ಠ ಪ್ರಮಾಣದಲ್ಲಿ ಬಳಸಿಕೊಳ್ಳುವ ಮೂಲಕ ವಿಶ್ವಾಸಾರ್ಹ ಮತ್ತು ಪಾರದರ್ಶಕತೆ ಯಿಂದ ಕೂಡಿದ ಪರೀಕ್ಷಾ ವ್ಯವಸ್ಥೆ ರೂಪಿಸಲಾಗುವುದು. ಈ ಸಂಬಂಧ ಕಾರ್ಯಪಡೆಯ ಸಲಹೆಗಳನ್ನು ಸರ್ಕಾರ ಅನುಷ್ಠಾನಗೊಳಿಸಲಿದೆ ಎಂದು ಅವರು ತಮ್ಮ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಹಂಚಿಕೊಂಡಿರುವ ವಿಡಿಯೊ ಸಂದೇಶದಲ್ಲಿ ಹೇಳಿದ್ದಾರೆ.
- 'ವಿದ್ಯಾರ್ಥಿಗಳ ಭವಿಷ್ಯದೊಂದಿಗೆ ಚೆಲ್ಲಾಟವಾಡಿದವರನ್ನು ಜೈಲಿಗೆ ಅಟ್ಟಲಾಗಿದೆ. ಪ್ರಶ್ನೆಪತ್ರಿಕೆ ಸೋರಿಕೆ ತಡೆ ಗಟ್ಟುವುದಕ್ಕಾಗಿ ಕಠಿಣ ಕಾನೂನುಗಳನ್ನು ತರಲಾಗುವುದು. ಇದಕ್ಕಾಗಿ ಹೊಸ ಮಸೂದೆಯನ್ನು ಸಂಸತ್‌ನಲ್ಲಿ ಸೋಮವಾರ ಮಂಡಿಸಲಾಗುತ್ತಿದೆ' ಎಂದು ಮೋದಿ ಹೇಳಿದ್ದಾರೆ.
- ಇತ್ತೀಚೆಗೆ ನಡೆದ 'ನೀಟ್-ಯುಜಿ' ಪ್ರಶ್ನೆಪತ್ರಿಕೆ ಸೋರಿಕೆ ಬಗ್ಗೆ ಆಕ್ರೋಶ ವ್ಯಕ್ತವಾಗಿತ್ತು. ಕಾಕ್ರೋಚ್ ಜನತಾ ಪಾರ್ಟಿ (ಸಿಜೆಪಿ) ನೇತೃತ್ವದಲ್ಲಿ ಪ್ರತಿಭಟನೆ ಕೂಡ ನಡೆದಿತ್ತು. ವಿದ್ಯಾರ್ಥಿ ಸಮೂಹದ ಆತಂಕ-ಕಳವಳಕ್ಕೆ ಸ್ಪಂದಿಸುವುದಕ್ಕಾಗಿ ಕೇಂದ್ರ ಸರ್ಕಾರ ಈಗ ಮತ್ತೊಂದು ಹೆಜ್ಜೆ ಇಟ್ಟಿದೆ.
- 36 ದಿನಗಳ ಪ್ರತಿಭಟನೆ ಬಳಿಕ ಪ್ರಧಾನಿ ಈ ಘೋಷಣೆ ಮಾಡಿದ್ದಾರೆ. ಸಿಜೆಪಿ ಪ್ರತಿಭಟನೆ ಹಿನ್ನೆಲೆಯಲ್ಲಿ ಧರ್ಮೇಂದ್ರ ಪ್ರಧಾನ್ ಅವರು ಶಿಕ್ಷಣ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

## ❖ ಸಹ್ಯಾದ್ರಿಯ 1,466 ಎಕರೆ ಕಾಡು ಹನನL ಅರಣ್ಯ ಬಳಕೆಗೆ ರೈಲ್ವೆ ಇಲಾಖೆ ಅರ್ಜಿ: ಅರಣ್ಯ ಬಳಕೆಗೆ 'ರೈಲ್ವೆ' ಅರ್ಜಿ

- ಪಶ್ಚಿಮಘಟ್ಟದ ನಿತ್ಯಹರಿದ್ವರ್ಣದ ಕಾಡನ್ನು ಸೀಳಿಕೊಂಡು ನಿರ್ಮಾಣವಾಗಲಿರುವ 'ಹುಬ್ಬಳ್ಳಿ-ಅಂಕೋಲಾ ಬ್ರಾಡ್ ಗೇಜ್ ರೈಲು ಮಾರ್ಗ ಯೋಜನೆ'ಗೆ ರೈಲ್ವೆ ಇಲಾಖೆ ಮರುಜೀವ ನೀಡಿದೆ.
- ಕಬ್ಬಿಣದ ಅದಿರು ಸೇರಿದಂತೆ ಸರಕುಗಳ ಸಾಗಣೆಗೆ ಅನುಕೂಲವಾಗುವ ಈ ಯೋಜನೆಯನ್ನು ಕೇಂದ್ರ ಸರ್ಕಾರ 1997-98ರಲ್ಲಿ ಮಂಜೂರು ಮಾಡಿತ್ತು. ಆಗ ಯೋಜನೆಯ ಅಂದಾಜು ವೆಚ್ಚ ₹483 ಕೋಟಿ ಆಗಿತ್ತು. ಈಗ ರೈಲು ಮಾರ್ಗ ನಿರ್ಮಾಣಕ್ಕೆ ₹16,435 ಕೋಟಿ ಆಗಲಿದೆ ಎಂದು ಇಲಾಖೆ ಅಂದಾಜಿಸಿದೆ.
- ಈ ಕಾರ್ಯಕ್ಕೆ ಸಹ್ಯಾದ್ರಿಯ 1,466 ಎಕರೆ ದಟ್ಟ ಕಾನನ ಬಳಕೆಯಾಗಲಿದೆ. ಯೋಜನೆಗೆ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿಯಿಂದ ಅನುಮೋದನೆ ಹಾಗೂ ಕೇಂದ್ರ ಅರಣ್ಯ ಸಚಿವಾಲಯದಿಂದ ಅರಣ್ಯ ಅನುಮೋದನೆ ಪಡೆಯಲು ರೈಲ್ವೆ ಇಲಾಖೆ ಇದೇ 10ರಂದು ಅರ್ಜಿ ಸಲ್ಲಿಸಿದೆ.
- 'ಹುಬ್ಬಳ್ಳಿ-ಯಲ್ಲಾಪುರದ (75 ಕಿ.ಮೀ) ನಡುವೆ ಬಯಲು ಭೂಮಿ ಇದೆ. ಯಲ್ಲಾಪುರದಿಂದ ಅಂಕೋಲಾದವರೆಗೆ ಕಾಡಿನ ನಡುವೆ ಮಾರ್ಗ ನಿರ್ಮಾಣವಾಗಲಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಶೇ 80ರಷ್ಟು ಅರಣ್ಯ ಪ್ರದೇಶ ಇದೆ. ಹೀಗಾಗಿ, ಅರಣ್ಯ ಪ್ರದೇಶದಲ್ಲೇ ರೈಲು ಮಾರ್ಗ ನಿರ್ಮಾಣ ಮಾಡಬೇಕಿದೆ.

ಅರಣ್ಯ ಪ್ರದೇಶವನ್ನು ಕಡಿಮೆ ಪ್ರಮಾಣದಲ್ಲಿ ಬಳಕೆ ಮಾಡಲು ಅನುವಾಗುವಂತೆ ಹೆಚ್ಚುವರಿ ವಯಡಕ್ಟ್‌ಗಳು ಹಾಗೂ ಸುರಂಗಗಳನ್ನು ನಿರ್ಮಿಸಲು ಪ್ರಸ್ತಾಪಿಸಲಾಗಿದೆ.




- ಪರಿಸರದ ಮೇಲಾಗುವ ಪರಿಣಾಮಗಳನ್ನು ತಗ್ಗಿಸಲು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ನೀಡಿರುವ ಶಿಫಾರಸುಗಳನ್ನು ಸ್ವೀಕರಿಸಲಾಗಿದೆ' ಎಂದು ರೈಲ್ವೆ ಇಲಾಖೆ ಸಮಜಾಯಿಷಿ ನೀಡಿದೆ.
- ವಿನ್ಯಾಸ ಬದಲು: ಯೋಜನೆಗೆ ಅರಣ್ಯ ಅನುಮೋದನೆ ನೀಡುವಂತೆ ಕರ್ನಾಟಕ ಸರ್ಕಾರವು ಕೇಂದ್ರ ಪರಿಸರ ಸಚಿವಾಲಯಕ್ಕೆ 2017ರಲ್ಲಿ ಪ್ರಸ್ತಾವ ಸಲ್ಲಿಸಿತ್ತು. ಈ ಮಾರ್ಗ ನಿರ್ಮಾಣಕ್ಕೆ 595 ಹೆಕ್ಟೇರ್ ಅರಣ್ಯ ಬಳಕೆಯಾಗಲಿದೆ ಎಂದು ಪ್ರಸ್ತಾಪಿಸಿತ್ತು. ಶರಾವತಿ ವನ್ಯಜೀವಿ ಧಾಮ, ಕಾಳಿ ಹುಲಿ ಸಂರಕ್ಷಿತ ಪ್ರದೇಶದ ಮೂಲಕ ಈ ಮಾರ್ಗ ಹಾದು ಹೋಗಲಿದೆ ಎಂದೂ ಉಲ್ಲೇಖಿಸಿತ್ತು. ರೈಲು ಮಾರ್ಗ ನಿರ್ಮಾಣಕ್ಕೆ ಪ್ರಾದೇಶಿಕ ಉನ್ನತಾಧಿಕಾರ ಸಮಿತಿಯು (ಆರ್‌ಇಸಿ) 2017ರ ಜುಲೈನಲ್ಲಿ ಮೊದಲ ಹಂತದ ಅನುಮೋದನೆ ಕೊಟ್ಟಿತ್ತು.
- ರಾಜ್ಯ ವನ್ಯಜೀವಿ ಮಂಡಳಿಯ ಅನುಮೋದನೆ ಪಡೆದಿರಲಿಲ್ಲವಾದರೂ ಯೋಜನೆಗೆ ವನ್ಯಜೀವಿ ಅನುಮೋದನೆ ನೀಡುವಂತೆ ಕೇಂದ್ರ ಸರ್ಕಾರಕ್ಕೆ 2018ರಲ್ಲಿ ಪ್ರಸ್ತಾವ ಸಲ್ಲಿಸಲಾಗಿತ್ತು. ಹೀಗಾಗಿ, ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿಯು ಒಪ್ಪಿಗೆ ಕೊಟ್ಟಿರಲಿಲ್ಲ. ಈ ನಡುವೆ, ಐಐಎಸ್‌ಸಿಯ ಸಲಹೆಗಳನ್ನು ಪಡೆದು ಯೋಜನೆಯ ವಿನ್ಯಾಸ ಬದಲಿಸಿದರಷ್ಟೇ ಒಪ್ಪಿಗೆ ಕೊಡಬಹುದು ಎಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಶಿಫಾರಸು ಮಾಡಿದ್ದರು. ಯೋಜನೆಗೆ ಷರತ್ತುಬದ್ಧ ಅನುಮತಿ ಕೊಡಬಹುದು ಎಂದು ರಾಜ್ಯ ವನ್ಯಜೀವಿ ಮಂಡಳಿ 2020ರಲ್ಲಿ ಶಿಫಾರಸು ಮಾಡಿತ್ತು. ಇದನ್ನು ಪ್ರಶ್ನಿಸಿ ವನ್ಯಜೀವಿ ಸಂರಕ್ಷಣಾವಾದಿ ಗಿರಿಧರ ಕುಲಕರ್ಣಿ ಹಾಗೂ ಪ್ರಾಜೆಕ್ಟ್ ವೃಕ್ಷ ಫೌಂಡೇಷನ್‌ನ ಪದಾಧಿಕಾರಿಗಳು ಹೈಕೋರ್ಟ್ ಮೆಟ್ಟಿಲೇರಿದ್ದರು. ಈ ಯೋಜನೆಯಿಂದ ಎರಡು ಲಕ್ಷ ಮರಗಳ ಹನನವಾಗಲಿದೆ ಎಂದು ಅರ್ಜಿಯಲ್ಲಿ ಕಳವಳ ವ್ಯಕ್ತಪಡಿಸಿದ್ದರು. ರೈಲು ಮಾರ್ಗ ನಿರ್ಮಾಣಕ್ಕೆ ಹೈಕೋರ್ಟ್ 2020ರಲ್ಲಿ ತಡೆ ನೀಡಿತ್ತು.
- ಯೋಜನೆಯಿಂದ ವನ್ಯಜೀವಿಗಳ ಮೇಲಾಗುವ ಪರಿಣಾಮದ ಬಗ್ಗೆ ರಾಷ್ಟ್ರೀಯ ವನ್ಯಜೀವಿ ಮಂಡಳಿ ಅಧ್ಯಯನ ನಡೆಸಬೇಕೆಂದು ಹೈಕೋರ್ಟ್ 2021ರಲ್ಲಿ ಮಧ್ಯಂತರ ಆದೇಶ ಹೊರಡಿಸಿತ್ತು. ಯೋಜನಾ ಸ್ಥಳ ಪರಿಶೀಲನೆಗೆ ತಜ್ಞರ ಸಮಿತಿಯನ್ನು ನನ್ನಜೀವಿ ಮಂಡಳಿ ರಚಿಸಿತ್ತು. ಈ ಸಮಿತಿ 2022ರ ನವೆಂಬರ್‌ನಲ್ಲಿ ವರದಿ ಸಲ್ಲಿಸಿತ್ತು. 'ಈಗಿನ ಸ್ವರೂಪದ ಯೋಜನೆಗೆ ಒಪ್ಪಿಗೆ ನೀಡಲು ಸಾಧ್ಯವಿಲ್ಲ' ಎಂದು ಹೇಳಿದ್ದ ಸಮಿತಿ, ಪರಿಸರಕ್ಕೆ ಹೆಚ್ಚು ಹಾನಿಯಾಗದಂತೆ ನೋಡಿಕೊಳ್ಳಲು ಯೋಜನೆಯ ವಿನ್ಯಾಸ ಬದಲಿಸಬೇಕು ಎಂದೂ ಸಲಹೆ ನೀಡಿತ್ತು.
- ಪರಿಸರಸ್ನೇಹಿ ಸೇತುವೆಗಳು ಹಾಗೂ ಸುರಂಗ ನಿರ್ಮಾಣ ಸೇರಿದಂತೆ ವನ್ಯಜೀವಿ ಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳಲು ಭಾರತೀಯ ವನ್ಯಜೀವಿ ಸಂಸ್ಥೆಯಿಂದ ರೈಲ್ವೆ ಇಲಾಖೆ ವರದಿ ಪಡೆದಿತ್ತು. ಆ ಬಳಿಕ, ಯೋಜನೆಯ ವಿನ್ಯಾಸವನ್ನು ಬದಲಿಸಿತ್ತು. ಹೈಕೋರ್ಟ್ 2023ರಲ್ಲಿ ತಡೆಯಾಜ್ಞೆ ತೆರವುಗೊಳಿಸಿತ್ತು. ರೈಲ್ವೆ ಇಲಾಖೆಯು 2025ರಲ್ಲಿ ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸಿತ್ತು. ಡಿಪಿಆರ್‌ಗೆ ರೈಲ್ವೆ ಮಂಡಳಿ ಇತ್ತೀಚೆಗೆ ಒಪ್ಪಿಗೆ ಕೊಟ್ಟಿತ್ತು.

Dr. Rajkumar IAS/KAS Academy

## ❖ ಮನದ ಮಾತು' ಬಾನುಲಿ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ : 'ರಕ್ಷಣಾ ತಯಾರಿಕೆ: ಉತ್ತುಂಗದತ್ತ ಭಾರತ'

- ರಕ್ಷಣಾ ತಯಾರಿಕೆ ಹಾಗೂ ರಫ್ತಿನಲ್ಲಿ ಭಾರತವು ಉತ್ತಮ ಪ್ರಗತಿ ಕಾಣುತ್ತಿದೆ. ಮಿತ್ರರಾಷ್ಟ್ರಗಳ ಜತೆ ಮತ್ತಷ್ಟು ಬಾಂಧವ್ಯ ಬೆಸೆಯುತ್ತಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಹೇಳಿದರು.
- 'ಮನದ ಮಾತು' ಬಾನುಲಿ ಕಾರ್ಯಕ್ರಮದಲ್ಲಿ ಮೋದಿ ಅವರು, 1999ರ ಕಾರ್ಗಿಲ್ ಯುದ್ಧದಲ್ಲಿ ಹುತಾತ್ಮರಾದ ಯೋಧರಿಗೆ ಗೌರವ ಸಲ್ಲಿಸಿದರು.
- ಜುಲೈ 26ರ 'ಕಾರ್ಗಿಲ್ ವಿಜಯ ದಿವಸ'ದ ಬಗ್ಗೆ ಉಲ್ಲೇಖಿಸಿದ ಪ್ರಧಾನಿ, 'ಜನರ ಜೀವನದಲ್ಲಿ ಕೆಲವು ದಿನಗಳನ್ನು ನೆನಪಿನಲ್ಲಿಟ್ಟುಕೊಳ್ಳಲು ಕ್ಯಾಲೆಂಡರ್ ಅಗತ್ಯವಿಲ್ಲ' ಎಂದು ಹೇಳಿದರು.
- 'ಈ ದಿನ ನಮಗೆ ಹೆಮ್ಮೆಯನ್ನು ತರುತ್ತದೆ. ನಮ್ಮ ವೀರ ಯೋಧರ ಅಸಾಧಾರಣ ಶೌರ್ಯವನ್ನು ನೆನಪಿಸುತ್ತದೆ. ಕಾರ್ಗಿಲ್‌ನ ಎತ್ತರದ ಶಿಖರಗಳು, ಕಠಿಣ ಹವಾಮಾನ, ಶತ್ರುಗಳು ಒಡ್ಡಿದ ಸವಾಲು... ನಮ್ಮ ಯೋಧರು ಅಂತಹ ಪ್ರತಿಯೊಂದು ಸಂದರ್ಭವನ್ನು ಎದುರಿಸಿದ್ದರು. ಅವರ ಉತ್ಸಾಹವು ಪ್ರತಿಯೊಂದು ಸವಾಲಿಗಿಂತ ದೊಡ್ಡದಾಗಿತ್ತು' ಎಂದು ಬಣ್ಣಿಸಿದರು.
- 'ವೀರರ ಸಾಹಸಗಾಥೆಯನ್ನು ಹೊಸ ಪೀಳಿಗೆಗೆ ತಿಳಿಸಲಾಗುತ್ತಿದೆ. ಈ ವರ್ಷ ವಿಶೇಷ ಶೌರ್ಯ ವಿಜಯ ಯಾತ್ರೆಯನ್ನು ಆಯೋಜಿಸಲಾಗಿದೆ' ಎಂದರು.
- 'ಭಾರತವು ರಕ್ಷಣಾ ಕ್ಷೇತ್ರದ ತಾಂತ್ರಿಕ ಸಾಮರ್ಥ್ಯವನ್ನು ನಿರಂತರವಾಗಿ ಬಲಪಡಿಸುತ್ತಿದೆ. ಕೆಲ ದಿನಗಳ ಹಿಂದೆ 'ಐಎನ್‌ಎಸ್ ಮಹೇಂದ್ರಗಿರಿ'ಯನ್ನು ನೌಕಾಪಡೆಗೆ ಸೇರ್ಪಡೆ ಮಾಡಲಾಗಿತ್ತು. ಈ ಆಧುನಿಕ ಯುದ್ಧನೌಕೆಯನ್ನು ಭಾರತದಲ್ಲೇ ವಿನ್ಯಾಸಗೊಳಿಸಿ ನಿರ್ಮಿಸಲಾಗಿದೆ. ಇದರಲ್ಲಿ ಬಳಸಿದ ಶೇ 75ಕ್ಕೂ ಹೆಚ್ಚು ಉಪಕರಣಗಳು ಸ್ಥಳೀಯವಾಗಿ ನಿರ್ಮಿಸಲಾಗಿದೆ. ಇದು 'ಆತ್ಮನಿರ್ಭರ ಭಾರತ'ದ ಸಂಕೇತವಾಗಿದೆ' ಎಂದು ಬಣ್ಣಿಸಿದರು.
- 'ಈ ತಿಂಗಳ ಆರಂಭದಲ್ಲಿ ಇಂಡೊನೇಷ್ಯಾ ಪ್ರವಾಸ ಕೈಗೊಂಡಿದ್ದಾಗ, ಬ್ರಹ್ಮೊಸ್ ಮತ್ತು ಅಸ್ತ್ರ ಕ್ಷಿಪಣಿಗಳಿಗೆ ಸಂಬಂಧಿಸಿದಂತೆ ಪ್ರಮುಖ ಒಪ್ಪಂದ ಮಾಡಿಕೊಳ್ಳಲು ನಿರ್ಧರಿಸಲಾಯಿತು. ಭಾರತದ ರಕ್ಷಣಾ ಉಪಕರಣಗಳು ಮತ್ತು ತಂತ್ರಜ್ಞಾನದ ಬಗ್ಗೆ ಜಾಗತಿಕ ವಿಶ್ವಾಸ ಬೆಳೆಯುತ್ತಿದೆ ಎಂಬುದನ್ನು ಇದು ಪ್ರತಿಬಿಂಬಿಸುತ್ತದೆ' ಎಂದು ಪ್ರಧಾನಿ ತಿಳಿಸಿದರು.

## ❖ ₹25 ಸಾವಿರದವರೆಗೆ ಮಿತಿ * ₹100 ಮುಖಬೆಲೆಗಿಂತ ಹೆಚ್ಚಿನ ನೋಟುಗಳಿಗೆ ವಿಧಿಸಿದ್ದ ನಿರ್ಬಂಧ ತೆರವು: ಭಾರತದ ನೋಟುಗಳ ಬಳಕೆಗೆ ನೇಪಾಳ ಸಮ್ಮತಿ

- ಭಾರತ ಮತ್ತು ನೇಪಾಳದ ಪ್ರಜೆಗಳು 2016 ನವೆಂಬರ್ 9ರ ಬಳಿಕ ಚಲಾವಣೆಗೆ ಬಂದಿರುವ ₹200 ಮತ್ತು ₹500 ಮುಖಬೆಲೆಯ ₹25000ವರೆಗಿನ ನಗದನ್ನು ನೇಪಾಳಕ್ಕೆ ತರಲು ಅಥವಾ ಅಲ್ಲಿಂದ ತೆಗೆದುಕೊಂಡು ಹೋಗಲು ಅನುಮತಿ ನೀಡಲಾಗಿದೆ.
- ಈ ಮೂಲಕ 2016ರಲ್ಲಿ ಭಾರತದಲ್ಲಿ ನೋಟು ರದ್ದುಗೊಂಡ ಬಳಿಕ ನೇಪಾಳದಲ್ಲಿ ಭಾರತದ ₹100 ಮುಖಬೆಲೆಗಿಂತ ಹೆಚ್ಚಿನ ಮುಖಬೆಲೆಯ ನೋಟುಗಳಿಗೆ ವಿಧಿಸಲಾಗಿದ್ದ ನಿರ್ಬಂಧವನ್ನು ತೆಗೆದುಹಾಕಲಾಗಿದೆ.
- ಈ ಬಗ್ಗೆ ಪ್ರಕಟಣೆ ಬಿಡುಗಡೆ ಮಾಡಿರುವ ನೇಪಾಳ ರಾಷ್ಟ್ರ ಬ್ಯಾಂಕ್ (ಎನ್‌ಆರ್‌ಬಿ), '2016 ನವೆಂಬರ್ 9ರ ಮುನ್ನ ಚಲಾವಣೆಗೆ ಬಂದಿರುವ ಭಾರತದ ₹500 ಮತ್ತು ₹1000 ಸಾವಿರ ಮುಖಬೆಲೆಯ ನೋಟುಗಳಿಗೆ ನೇಪಾಳದಲ್ಲಿ ವಿಧಿಸಿರುವ ನಿರ್ಬಂಧವು ಮುಂದುವರಿಯಲಿದೆ' ಎಂದು ತಿಳಿಸಿದೆ.
- ಈ ಬಗ್ಗೆ ಫೆಬ್ರುವರಿ 11ರಂದೇ ನೇಪಾಳವು ಗೆಜೆಟ್ ಅಧಿಸೂಚನೆ ಹೊರಡಿಸಿತ್ತು. ಇದೀಗ ಹೊಸ ನಿಯಮ ಮತ್ತು ಅನುಷ್ಠಾನದ ಕುರಿತ ಸ್ಪಷ್ಟನೆಯೊಂದಿಗೆ ಹೊಸ ಪ್ರಕಟಣೆ ನೀಡಲಾಗಿದೆ. 'ಹೊಸ ನಿಯಮದಿಂದ ಭಾರತದಿಂದ ಬರುವ ಪ್ರವಾಸಿಗರಿಗೆ ಹಾಗೂ ಭಾರತದಲ್ಲಿ ವ್ಯಾಪಾರ ಮತ್ತು ಉದ್ಯಮ ನಡೆಸುತ್ತಿರುವ ನೇಪಾಳದ ಪ್ರಜೆಗಳಿಗೆ ಅನುಕೂಲವಾಗಲಿದೆ' ಎಂದು ಹೇಳಿದರು.




# ಮೀರಾಬಾಯಿಗೆ 'ಹ್ಯಾಟ್ರಿಕ್' ಬಂಗಾರ

## ಸತತ ಮೂರನೇ ಕಾಮನ್‌ವೆಲ್ತ್ ಕೂಟದಲ್ಲಿ ಭಾರತದ ವೇಟ್‌ಲಿಫ್ಟರ್ ಅಮೋಘ ಸಾಧನೆ



ಮೀರಾಬಾಯಿ ಚಾನು

ಗ್ಲಾಸ್ಗೊ (ಪಿಟಿಐ): ಮಣಿಪುರದ ಛಲಗಾತಿ ಸಾಯಿಕೋಮ್ ಮೀರಾಬಾಯಿ ಚಾನು ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಚಿನ್ನದ 'ಹ್ಯಾಟ್ರಿಕ್' ದಾಖಲಿಸಿದರು.

ಭಾನುವಾರ ನಡೆದ ಮಹಿಳೆಯರ 48 ಕೆ.ಜಿ. ವಿಭಾಗದ ಸ್ಪರ್ಧೆಯಲ್ಲಿ ಮೀರಾ ಅವರು ನಿರೀಕ್ಷೆಯಂತೆ ಚಿನ್ನ ಗೆದ್ದರು. 2018ರಲ್ಲಿ ಗೋಲ್ಡ್‌ಕೋಸ್ಟ್ ಮತ್ತು 2022ರಲ್ಲಿ ಬರ್ಮಿಂಗ್‌ಹ್ಯಾಮ್‌ನಲ್ಲಿ ನಡೆದಿದ್ದ ಕಾಮನ್‌ವೆಲ್ತ್ ಕೂಟದಲ್ಲಿ ಚಿನ್ನದ ಸಾಧನೆ ಮಾಡಿದ್ದರು. 2014ರಲ್ಲಿ ಗ್ಲಾಸ್ಗೊದಲ್ಲಿ ನಡೆದಿದ್ದ ಕೂಟದಲ್ಲಿ ಅವರು ಬೆಳ್ಳಿ ಪದಕ ಗೆದ್ದಿದ್ದರು.

31 ವರ್ಷದ ಮೀರಾ ಅವರು ಇಲ್ಲಿ ಒಟ್ಟು 190 ಕೆ.ಜಿ. ಭಾರ ಎತ್ತಿದ ಸಾಧನೆ ಮಾಡಿದರು. ಅದರಲ್ಲಿ ಸ್ನ್ಯಾಚ್‌ನಲ್ಲಿ 85 ಕೆ.ಜಿ., ಕ್ಲೀನ್ ಹಾಗೂ ಜರ್ಕ್‌ನಲ್ಲಿ 105 ಕೆ.ಜಿ ಭಾರ ಎತ್ತುವಲ್ಲಿ ಯಶಸ್ವಿಯಾದರು. ತಮ್ಮ ಪ್ರತಿಸ್ಪರ್ಧಿಗಳಿಂದ ಅವರು ಭಾರಿ ಅಂತರ ಕಾಯ್ದುಕೊಂಡಿದ್ದರು. ನೈಜೀರಿಯಾದ ರುಥ್ ಅಸುಕೊ ಎನ್‌ಯಾಂಗ್ (168 ಕೆ.ಜಿ) ಬೆಳ್ಳಿ ಪದಕ ಜಯಿಸಿದರು.

ಮೀರಾ ಅವರು ಚಾಂಪಿಯನ್‌ಗೆ ತಕ್ಕ ಪ್ರದರ್ಶನವನ್ನು ಇಲ್ಲಿ ನೀಡಿದರು. ಸ್ನ್ಯಾಚ್‌ನಲ್ಲಿ ಅವರ ಮೊದಲ ಪ್ರಯತ್ನ ಶುರುವಾಗಿದ್ದೇ 82 ಕೆ.ಜಿ ಭಾರ ಎತ್ತುವ ಪ್ರಯತ್ನದೊಂದಿಗೆ. ಆದರೆ ಮೊದಲ ಯತ್ನ ವಿಫಲವಾಯಿತು. ಕೂಡಲೇ ತಮ್ಮ ಲಯಕ್ಕೆ ಮರಳಿದ ಅವರು ನಂತರದ ಅವಕಾಶಗಳಲ್ಲಿ ಅಪಾರ ಏಕಾಗ್ರತೆ ಸಾಧಿಸಿದರು. ಉತ್ತಮ ಸಾಧನೆ ಮಾಡಿದರು.

ಆದರೆ ಕ್ಲೀನ್ ಮತ್ತು ಜರ್ಕ್ ಸುತ್ತಿನ ಆರಂಭದಲ್ಲಿ ಅಲ್ಪಸ್ವಲ್ಪ ತಡಬಡಾಯಿಸಿದರು. ಮತ್ತೆ ಸುಧಾರಿಸಿಕೊಂಡು ಯಶಸ್ಸಿನತ್ತ ಸಾಗಿದರು. ತಮ್ಮದೇ ದಾಖಲೆಯನ್ನು ಉತ್ತಮಪಡಿಸಿಕೊಂಡರು. ಪದಕ ಸ್ವೀಕರಿಸಿದ ನಂತರ ರಾಷ್ಟ್ರಗೀತೆಯ ಸಂದರ್ಭದಲ್ಲಿ ಅವರು ಭಾವುಕರಾದರು.

ಒಲಿಂಪಿಕ್ಸ್ ಪದಕವಿಜೇತೆ ಆಗಿರುವ ಮೀರಾ ಅವರು ಇನ್ನೆರಡು ತಿಂಗಳುಗಳ ನಂತರ ನಡೆಯಲಿರುವ ಏಷ್ಯನ್ ಕ್ರೀಡಾಕೂಟದಲ್ಲಿ ಸ್ಪರ್ಧಿಸಲಿದ್ದಾರೆ.

ಕಾಮನ್‌ವೆಲ್ತ್ ಗೇಮ್ಸ್ ಗ್ಲಾಸ್ಗೊ 2026

ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಭಾರತದ ಪದಕಗಳ ಸಂಖ್ಯೆ 3ಕ್ಕೆ ಏರಿಕೆ



ಪುರುಷರ ವೇಟ್‌ಲಿಫ್ಟಿಂಗ್ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಜಯಿಸಿದ ಭಾರತದ ರಿಷಿಕಾಂತ್ ಸಿಂಗ್ ಪಿಟಿಐ ಚಿತ್ರ

## ರಿಷಿಕಾಂತ್ 'ಬೆಳ್ಳಿ ಬೆಡಗು'

ಗ್ಲಾಸ್ಗೊ (ಪಿಟಿಐ): ಎರಡು ಕ್ಲೀನ್ ಮತ್ತು ಒಂದು ಜರ್ಕ್ ಪ್ರಯತ್ನಗಳು ವಿಫಲವಾಗಿದ್ದು ದುಬಾರಿಯಾದವು. ಅದಕ್ಕಾಗಿ ರಿಷಿಕಾಂತ್ ಸಿಂಗ್ ಅವರ ಕೈಯಿಂದ ಚಿನ್ನ ಜಯಿಸುವ ಅವಕಾಶ ತಪ್ಪಿತು. ಆದರೆ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಭಾನುವಾರ ವೇಟ್‌ಲಿಫ್ಟಿಂಗ್ ಸ್ಪರ್ಧೆಯ ಪುರುಷರ 60 ಕೆ.ಜಿ ವಿಭಾಗದಲ್ಲಿ ರಿಷಿಕಾಂತ್ ಬೆಳ್ಳಿ ಗಳಿಸಿದರು.

ಮಣಿಪುರದ ಲಿಫ್ಟರ್ ಒಟ್ಟು 264 ಕೆ.ಜಿ. (ಸ್ನ್ಯಾಚ್ 121 ಕೆ.ಜಿ + ಕ್ಲೀನ್-ಜರ್ಕ್ 143 ಕೆ.ಜಿ) ಭಾರ ಎತ್ತಿದರು. ಅದರೊಂದಿಗೆ ಕಾಮನ್‌ವೆಲ್ತ್ ಕೂಟದ ಸ್ನ್ಯಾಚ್ ದಾಖಲೆಯನ್ನು ಸರಿಗಟ್ಟಿದರು. ಆರಂಭದಲ್ಲಿ ಉತ್ತಮ ಪ್ರದರ್ಶನ ನೀಡಿದರು. ಆದರೆ ಕ್ಲೀನ್ ಮತ್ತು ಜರ್ಕ್‌ನಲ್ಲಿ ಎಡವಿದರು. ಈ ವಿಭಾಗದಲ್ಲಿ ಅವರು ಕೊನೆಯ ಎರಡು ಅವಕಾಶಗಳಲ್ಲಿ 143 ಕೆ.ಜಿ ಭಾರ ಎತ್ತಿದರು. ಮಲೇಷ್ಯಾದ ಮೊಹಮ್ಮದ್ ಅನೀಕ್ ಕಾಸ್ದನ್ ಅವರು ಚಿನ್ನದ ಪದಕ ಜಯಿಸಿದರು.

ಕಾಸ್ದನ್ ಸ್ನ್ಯಾಚ್‌ನಲ್ಲಿ 121 ಕೆ.ಜಿ ಮತ್ತು ಕ್ಲೀನ್ -ಜರ್ಕ್‌ನಲ್ಲಿ ದಾಖಲೆಯ 152 ಕೆ.ಜಿ. ಭಾರ ಎತ್ತಿದರು. ಒಟ್ಟು 273 ಕೆ.ಜಿ. ದಾಖಲೆ ಬರೆದರು.

ಕೆನ್ಯಾದ ಜೊಶುವಾ ಅಮುಂಗಾ ಎಂಬೊಯಾ ಒಟ್ಟು 260 ಕೆ.ಜಿ. ಭಾರ ಎತ್ತಿದ ದಾಖಲೆಯೊಂದಿಗೆ ಕಂಚಿನ ಪದಕ ಪಡೆದರು. ಶ್ರೀಲಂಕಾದ ಎಸ್‌ಡಿಎಸ್ ವಿರಿದುವಾಗ್ಲೆ 244 ಕೆ.ಜಿ (109 + 135) ಎತ್ತಿದರು.

ಸಾಮಾನ್ಯ ಕ್ರೀಡಾಪಟುಗಳ ವಿಭಾಗದಲ್ಲಿ ಭಾರತಕ್ಕೆ ಲಭಿಸಿದ ಮೊದಲ ಪದಕ ಇದಾಗಿದೆ. ಶನಿವಾರ ಪ್ಯಾರಾ ವಿಭಾಗದಲ್ಲಿ ಝುಂಡು ಕುಮಾರ್ ಅವರು ಕಂಚಿನ ಪದಕ ಪಡೆದಿದ್ದರು.

## ಫ್ರೀಸ್ಟೈಲ್ ರಿಲೇ: ಫೈನಲ್‌ಗೆ ಭಾರತದ ಪುರುಷರು

ಗ್ಲಾಸ್ಗೊ (ಪಿಟಿಐ): ಭಾರತದ ಪುರುಷರ 4x200 ಫ್ರೀಸ್ಟೈಲ್ ರಿಲೇ ತಂಡವು ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಪದಕದ ಭರವಸೆ ಮೂಡಿಸಿದೆ. ಭಾನುವಾರ ನಡೆದ ತಮ್ಮ ಹೀಟ್ಸ್‌ನಲ್ಲಿ ಮೂರನೇ ಸ್ಥಾನದೊಂದಿಗೆ ಫೈನಲ್ ತಲುಪಿದೆ.

ಕರ್ನಾಟಕದ ಶ್ರೀಹರಿ ನಟರಾಜ್, ಅನೀಶ್ ಗೌಡ, ದಕ್ಷಣ್ ಶಶಿಕುಮಾರ್ ಮತ್ತು ಗುಜರಾತ್‌ನ ಆರ್ಯನ್ ನೆಹ್ರಾ ಅವರನ್ನು ಒಳಗೊಂಡ ತಂಡವು ಎರಡನೇ ಹೀಟ್ಸ್‌ನಲ್ಲಿ 7 ನಿಮಿಷ 39.48 ಸೆಕೆಂಡ್‌ಗಳಲ್ಲಿ ಗುರಿ ತಲುಪಿತು. ಆಸ್ಟ್ರೇಲಿಯಾ ತಂಡ (7:08.66) ಮತ್ತು ಇಂಗ್ಲೆಂಡ್ (7:18.13) ಕ್ರಮವಾಗಿ ಮೊದಲೆರಡು ಸ್ಥಾನ ಗಳಿಸಿತು.

ಈ ಹೀಟ್ಸ್‌ನಲ್ಲಿ ನಾಲ್ಕೂ ತಂಡಗಳು ಮಾತ್ರ ಸ್ಪರ್ಧಿಸಿದ್ದವು. ಆ ಎಲ್ಲಾ ತಂಡಗಳು ಫೈನಲ್‌ಗೆ ಮುನ್ನಡೆದವು.

ಸ್ಪರ್ಧೆಯ ಆರಂಭದಿಂದ ಕೊನೆಯವರೆಗೂ ಆಸ್ಟ್ರೇಲಿಯಾ ಪ್ರಾಬಲ್ಯ ಸಾಧಿಸಿತು. ಆದರೆ, ಮೂರನೇ ಸ್ಥಾನಕ್ಕಾಗಿ ಭಾರತ ಮತ್ತು ಜರ್ಸಿ ನಡುವೆ ತೀವ್ರ ಪೈಪೋಟಿ ನಡೆಯಿತು. ಒಂದು ಹಂತದಲ್ಲಿ ನಾಲ್ಕನೇ ಸ್ಥಾನದಲ್ಲಿದ್ದ ಭಾರತ ಕೊನೆಯ ಹಂತದಲ್ಲಿ ಜರ್ಸಿ ತಂಡವನ್ನು ಹಿಂದಿಕ್ಕಿ ಗುರಿ ಮುಟ್ಟಿತು.

ಎರಡು ಹೀಟ್ಸ್‌ಗಳಲ್ಲಿ ಭಾರತ ಐದನೇ ಸ್ಥಾನ ಗಳಿಸಿತು. ಆಸ್ಟ್ರೇಲಿಯಾ, ಸ್ಕಾಟ್ಲೆಂಡ್, ಇಂಗ್ಲೆಂಡ್ ಮತ್ತು ವೇಲ್ಸ್ ತಂಡಗಳು ಭಾರತಕ್ಕಿಂತ ವೇಗದ ಸಮಯ ದಾಖಲಿಸಿದವು.


Publication Date
27/07/2026



Presented by

## ❖ ಟಿ20 ರ್ಯಾಂಕಿಂಗ್: ಅಗ್ರಸ್ಥಾನಕ್ಕೆ ಭಾರತ

- ಭಾರತ ಕ್ರಿಕೆಟ್ ತಂಡವು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಟಿ20 ರಾಂಕಿಂಗ್‌ನಲ್ಲಿ ಮತ್ತೆ ಅಗ್ರಸ್ಥಾನಕ್ಕೆ ಮರಳಿದೆ.
- ಜಿಂಬಾಬೆ ಎದುರಿನ ಸರಣಿಯನ್ನು 2-0ಯಿಂದ ಕೈವಶ ಮಾಡಿಕೊಂಡ ನಂತರ ಭಾರತ ತಂಡವು ರಾಂಕಿಂಗ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು. ಈಚೆಗೆ ಇಂಗ್ಲೆಂಡ್ ಮತ್ತು ಐರ್ಲೆಂಡ್ ಎದುರಿನ ಸರಣಿಗಳಲ್ಲಿ ಸತತ ಸೋತಾಗ ಮೊದಲ ಸ್ಥಾನವನ್ನು ಕಳೆದುಕೊಂಡಿತ್ತು.
- ಅಗ್ರಕ್ರಮಾಂಕದ ಬ್ಯಾಟರ್ ಇಶಾನ್ ಕಿಶನ್ ಅವರು ಬ್ಯಾಟರ್‌ಗಳ ಕ್ರಮಾಂಕದಲ್ಲಿ ಅಗ್ರಸ್ಥಾನವನ್ನು ಉಳಿಸಿಕೊಂಡಿದ್ದಾರೆ. ಅವರ ಖಾತೆಯಲ್ಲಿ ಒಟ್ಟು 892 ಅಂಕಗಳು ಇವೆ. ಅವರ ನಂತರದ ಸ್ಥಾನದಲ್ಲಿ ಅಭಿಷೇಕ್ ಶರ್ಮಾ (858 ಅಂಕ) ಇದ್ದಾರೆ. ತಿಲಕ್ ವರ್ಮಾ ಅವರು ಎರಡನೇ ಪಂದ್ಯದಲ್ಲಿ ಅರ್ಧಶತಕ ಹೊಡೆದಿದ್ದರು. ಅವರೂ ಎಂಟನೇ ಸ್ಥಾನ ಪಡೆದುಕೊಂಡಿದ್ದಾರೆ. ಅವರ ಖಾತೆಯಲ್ಲಿ 733 ಅಂಕಗಳಿವೆ.
- ಬೌಲಿಂಗ್ ವಿಭಾಗದಲ್ಲಿ ಸ್ಪಿನ್ನರ್ ವರುಣ್ ಚಕ್ರವರ್ತಿ (683) ಅಗ್ರ ಹತ್ತರಲ್ಲಿ ಸ್ಥಾನ ಉಳಿಸಿಕೊಂಡಿದ್ದಾರೆ. ಗಾಯದಿಂದಾಗಿ ಅವರು ಜಿಂಬಾಬ್ವೆ ಎದುರಿನ ಸರಣಿಯಲ್ಲಿ ಆಡಿಲ್ಲ.



**ವಿಶ್ವ ಜೂನಿಯರ್ ಸ್ಕ್ವಾಷ್: ಚಿನ್ನದ ಪದಕ ಜಯಿಸಿ ಅನಾಹತ್ ಐತಿಹಾಸಿಕ ಸಾಧನೆ**

# ‘ಜಗತ್ತನ್ನೇ ಗೆದ್ದಷ್ಟು ಖುಷಿಯಾಗಿದೆ’

ನವದೆಹಲಿ (ಪಿಟಿಐ): ವಿಶ್ವ ಜೂನಿಯರ್ ಸ್ಕ್ವಾಷ್ ಚಾಂಪಿಯನ್‌ಷಿಪ್‌ನ ಮಹಿಳಾ ಸಿಂಗಲ್ಸ್‌ನಲ್ಲಿ ಚಿನ್ನದ ಪದಕ ಗೆದ್ದು ಇತಿಹಾಸ ನಿರ್ಮಿಸಿರುವ ಭಾರತದ ಅನಾಹತ್ ಸಿಂಗ್ ಅವರು ತಾವಿನ್ನೂ ‘ಕನಸಿನಲ್ಲಿ ತೇಲುತ್ತಿರುವಂತೆ’ ಭಾಸವಾಗುತ್ತಿದೆ ಎಂದು ಪ್ರತಿಕ್ರಿಯಿಸಿದ್ದಾರೆ.

ಕೆನಡಾದ ಒಂಟಾರಿಯೊದಲ್ಲಿ ಶನಿವಾರ ನಡೆದ ಫೈನಲ್‌ನಲ್ಲಿ ಅಗ್ರ ಶ್ರೇಯಾಂಕದ ಅನಾಹತ್ 11–3, 11–7, 11–9ರಿಂದ ಎರಡನೇ ಶ್ರೇಯಾಂಕದ ರುಕಯ್ಯಾ ಸಲೀಂ (ಈಜಿಪ್ಟ್) ಅವರನ್ನು ಮಣಿಸಿದರು. ಇದರೊಂದಿಗೆ ಈ ಪ್ರತಿಷ್ಠಿತ ಪ್ರಶಸ್ತಿ ಗೆದ್ದ ಭಾರತದ ಮೊದಲ ಸ್ಪರ್ಧಿ ಎಂಬ ಹಿರಿಮೆಗೆ ಪಾತ್ರರಾದರು. ಕಳೆದ ಆವೃತ್ತಿಯಲ್ಲಿ ಅವರು ಕಂಚಿನ ಪದಕ ಗೆದ್ದಿದ್ದರು.

‘ಈ ಪ್ರಶಸ್ತಿಯು ನನಗೆ ಅತ್ಯಂತ ಮೌಲ್ಯಯುತವಾದುದು. ಜೂನಿಯರ್ ವಿಭಾಗದಲ್ಲಿ ಸ್ಪರ್ಧಿಸಲು ಇದು ಕೊನೆಯ ಅವಕಾಶವಾಗಿತ್ತು. ಇಂದು ಜಗತ್ತನ್ನೇ ಗೆದ್ದಷ್ಟು ಸಂತಸವಾಗಿದೆ’ ಎಂದು ವಿಶ್ವದ 20ನೇ ರ್‍ಯಾಂಕ್‌ನ ಅನಾಹತ್ ಗೆಲುವಿನ ಬಳಿಕ ಸಂತಸಪಟ್ಟರು.

‘ಕಳೆದ ನಾಲ್ಕು ವರ್ಷಗಳಿಂದ ನಾನು ಸೆಮಿಫೈನಲ್ ಮತ್ತು ಕ್ವಾರ್ಟರ್‌ಫೈನಲ್ ಹಂತದಲ್ಲಿ ಸೋಲುತ್ತಿದ್ದೆ. ಆ ಬಗ್ಗೆ ಯಾರಾದರೂ ಕೇಳಿದರೆ, ‘ಈ ಟೂರ್ನಿ ನನಗೊಂದು ಶಾಪ’ ಎಂದು ಹೇಳುತ್ತಿದ್ದೆ. ಟೂರ್ನಿಯಲ್ಲಿ ಈ ಹಿಂದೆ ಉತ್ತಮವಾಗಿ ಆಡಲು ಸಾಧ್ಯವಾಗಿರಲಿಲ್ಲ’ ಎಂದು ದೆಹಲಿಯ 18 ವರ್ಷದ ಅನಾಹತ್ ಹೇಳಿದರು.

ಜೂನಿಯರ್ ಹಂತದಲ್ಲಿ ಇದು ಅವರ ಕೊನೆಯ ವರ್ಷವಾಗಿದ್ದರಿಂದ ಈ ಗೆಲುವು ಇನ್ನಷ್ಟು ವಿಶೇಷವಾಗಿದೆ. 2005ರ ನಂತರ ಟೂರ್ನಿಯ ಫೈನಲ್ ಪ್ರವೇಶಿಸಿದ ಭಾರತದ ಮೊದಲ ಆಟಗಾರ್ತಿ ಎಂಬ ಗೌರವಕ್ಕೂ ಪಾತ್ರರಾಗಿದ್ದಾರೆ. ಅನುಭವಿ ಜೋಷ್ನಾ ಚಿಣ್ಣಪ್ಪ ಅವರು 21 ವರ್ಷಗಳ ಹಿಂದೆ ಈ ಸಾಧನೆ ಮಾಡಿದ್ದರು.

‘ಎದುರಾಳಿಯ ಮುಂದೆ ಒತ್ತಡಕ್ಕೆ ಒಳಗಾದರೆ ಕೆಟ್ಟದಾಗಿ ಆಡುತ್ತೇನೆ ಎಂದು ನನಗೆ ತಿಳಿದಿತ್ತು. ಆದ್ದರಿಂದ ನಾನು ಕೋರ್ಟ್‌ಗೆ ಇಳಿದು ನನ್ನ ಹೊಡೆತಗಳನ್ನು ಸರಿಯಾಗಿ ಪ್ರಯೋಗಿಸಿದೆ. ವಿಶ್ವ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಆಡುವ ಪ್ರತಿಯೊಂದು ಕ್ಷಣವನ್ನೂ ನಾನು ಆನಂದಿಸಲು ಬಯಸಿದ್ದೆ’ ಎಂದು ತಿಳಿಸಿದರು.

ಅವರನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅಭಿನಂದಿಸಿದ್ದು, ‘ಅನಾಹತ್ ಅವರ ಈ ಸಾಧನೆಯು ಯುವ ಜನರಲ್ಲಿ ಸ್ಕ್ವಾಷ್ ಕ್ರೀಡೆಯನ್ನು ಮತ್ತಷ್ಟು ಜನಪ್ರಿಯಗೊಳಿಸಲಿದೆ’ ಎಂದು ಅಭಿಪ್ರಾಯಪಟ್ಟಿದ್ದಾರೆ.

## ❖ ಶಾಂತಿಯುತ ಪ್ರತಿಭಟನೆ ಪ್ರತಿಯೊಬ್ಬರ ಹಕ್ಕು: ಸುಪ್ರೀಂ ಕೋರ್ಟ್: 'ಬಲಪ್ರಯೋಗದ ಸಮರ್ಥನೆ ಸಲ್ಲ'

- 'ಶಾಂತಿಯುತ ಪ್ರತಿಭಟನೆ ನಡೆಸುವುದು ಪ್ರತಿಯೊಬ್ಬರೂ ಹೊಂದಿರುವ ಪರಿಪೂರ್ಣ ಹಕ್ಕು. ಇದನ್ನು ಸಂವಿಧಾನ ಖಾತರಿಪಡಿಸಿದೆ. ಹೀಗಾಗಿ, ಪೊಲೀಸರಿಂದ 'ಬಲಪ್ರಯೋಗ' 'ಲಾಠಿಪ್ರಹಾರ'ಕ್ಕೆ ಪ್ರತಿಭಟನೆಯೇ ಕಾರಣ ಎಂಬ ಸಮರ್ಥನೆಯನ್ನು ಒಪ್ಪಲಾಗದು ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.
- ಪ್ರತಿಭಟನೆಯ ವೇಳೆ ವಿದ್ಯಾರ್ಥಿ ಗಳು ಹಾಗೂ ಪೊಲೀಸರು ಗಾಯಗೊಂಡಿರುವ ಬಗ್ಗೆ ಕಳವಳ ವ್ಯಕ್ತ ಪಡಿಸಿರುವ ಕೋರ್ಟ್, 'ವ್ಯಕ್ತಿ ಯಾರೇ ಆಗಿರಲಿ, ಪ್ರತಿಯೊಬ್ಬರ ಜೀವವೂ ಮುಖ್ಯ' ಎಂದು ಹೇಳಿದೆ.
- 'ನೀಟ್-ಯುಜಿ' ಪ್ರಶ್ನೆಪತ್ರಿಕೆ ಸೋರಿಕೆ ಹಾಗೂ ವಿವಿಧ ಪರೀಕ್ಷೆಗಳಲ್ಲಿನ ಅಕ್ರಮ ಖಂಡಿಸಿ ದೆಹಲಿಯ ಜಂತರ್ ಮಂತರ್ ಸೇರಿದಂತೆ ದೇಶದ ವಿವಿಧೆಡೆ ಪ್ರತಿಭಟನೆ ನಡೆಸಿದ ವಿದ್ಯಾರ್ಥಿಗಳ ಮೇಲೆ ಪೊಲೀಸರು 'ಮಿತಿಮೀರಿ ಬಲಪ್ರಯೋಗ' ಮಾಡಿದ್ದಾರೆ ಎಂದು ಆರೋಪಿಸಿ ಸಲ್ಲಿಸಲಾದ ಅರ್ಜಿಗಳ ವಿಚಾರಣೆ ವೇಳೆ ನ್ಯಾಯಪೀಠ ಈ ಮಾತು ಹೇಳಿದೆ.
- ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ಪೀಠವು ಅರ್ಜಿಗಳ ವಿಚಾರಣೆ ನಡೆಸಿತು. ನ್ಯಾಯಮೂರ್ತಿಗಳಾದ ಜಾಯ್ ಮಾಲ್ಯಾ ಬಾಗ್ಚಿ ಹಾಗೂ ವಿ.ಮೋಹನಾ ಅವರೂ ಈ ಪೀಠದಲ್ಲಿದ್ದಾರೆ.
- ಹಲ್ಲೆಗೆ ಒಳಗಾಗಿರುವ ಪೊಲೀಸ್ ಸಿಬ್ಬಂದಿಯ ಕುಟುಂಬದ ಸದಸ್ಯರು ಸಲ್ಲಿಸಿರುವ ಪ್ರತ್ಯೇಕ ಅರ್ಜಿಗಳ ವಿಚಾರಣೆಗೂ ಪೀಠ ಒಪ್ಪಿಗೆ ನೀಡಿದೆ.


## ❖ ಮೇಕೆದಾಟು---: ನೆರೆ ರಾಜ್ಯಗಳ ಅನುಮತಿ ಅಗತ್ಯ ಇಲ್ಲ- ಕೇಂದ್ರ

- ಸುಪ್ರೀಂ ಕೋರ್ಟ್ ತೀರ್ಪಿನ ಪ್ರಕಾರ, ಮೇಕೆದಾಟು ಜಲಾಶಯ ನಿರ್ಮಾಣಕ್ಕೆ ಕರ್ನಾಟಕ ಸರ್ಕಾರವು ನೆರೆ ರಾಜ್ಯಗಳ ಸಮ್ಮತಿ ಪಡೆಯುವ ಅಗತ್ಯ ಇಲ್ಲ ಎಂದು ಕೇಂದ್ರ ಜಲಶಕ್ತಿ ಸಚಿವಾಲಯ ಸ್ಪಷ್ಟಪಡಿಸಿದೆ.
- ರಾಜ್ಯಸಭೆಯಲ್ಲಿ ಸೋಮವಾರ ಪ್ರಶ್ನೋತ್ತರ ಅವಧಿಯಲ್ಲಿ ತಮಿಳುನಾಡಿನ ಸದಸ್ಯ ಡಾ. ಎ.ರಾಮದಾಸ್ ಅವರು ಕೇಳಿದ ಪ್ರಶ್ನೆಗೆ, ಜಲಶಕ್ತಿ ಖಾತೆ ರಾಜ್ಯ ಸಚಿವ ರಾಜ್ ಭೂಷಣ್ ಚೌಧರಿ ಈ ಬಗ್ಗೆ ಲಿಖಿತ ಉತ್ತರ ನೀಡಿದ್ದಾರೆ.
- ಕಾವೇರಿ ಜಲವಿವಾದಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ 2018ರಲ್ಲಿ ನೀಡಿದ್ದ ತೀರ್ಪಿನಲ್ಲಿ, ಕಾವೇರಿ ನದಿಗೆ ಅಡ್ಡಲಾಗಿ ಯಾವುದೇ ಅಣೆಕಟ್ಟೆ ನಿರ್ಮಿಸಲು ಕರ್ನಾಟಕವು ನದಿ ತೀರದ ರಾಜ್ಯಗಳಾದ ತಮಿಳುನಾಡು, ಕೇರಳ ಮತ್ತು ಪುದುಚೆರಿಯಿಂದ ಒಪ್ಪಿಗೆ ಪಡೆಯಬೇಕೆಂದು ಯಾವ ಉಲ್ಲೇಖವೂ ಇಲ್ಲ. ಕಾವೇರಿ ನ್ಯಾಯಮಂಡಳಿಯ ತೀರ್ಪು ಸಹ ಇದನ್ನೇ ಸ್ಪಷ್ಟಪಡಿಸಿದೆ ಎಂದಿದ್ದಾರೆ.
- ಮೇಕೆದಾಟು ಜಲಾಶಯ ನಿರ್ಮಿಸುವ ಉದ್ದೇಶದಿಂದ ಕರ್ನಾಟಕವು 2019ರಲ್ಲಿ ವಿಸ್ತೃತ ಯೋಜನಾ ವರದಿಯನ್ನು (ಡಿಪಿಆರ್) ಕೇಂದ್ರ ಜಲ ಆಯೋಗಕ್ಕೆ ಸಲ್ಲಿಸಿತ್ತು. ಆಯೋಗದ ಮಾರ್ಗಸೂಚಿ ಹಾಗೂ ಕಾವೇರಿ ನ್ಯಾಯಮಂಡಳಿಯ ತೀರ್ಪಿನ ಪ್ರಕಾರ, ಪರಿಷ್ಕೃತ ಡಿಪಿಆರ್ ಸಲ್ಲಿಸುವಂತೆ ಸೂಚಿಸಿ, ಡಿಪಿಆರ್ ಅನ್ನು ಕರ್ನಾಟಕಕ್ಕೆ ಮರಳಿಸಲಾಗಿದೆ ಎಂದು ಅವರು ಹೇಳಿದ್ದಾರೆ.
- ಕಾವೇರಿ ನೀರು ಬಿಡುಗಡೆಗೆ ಸಂಬಂಧಿಸಿದಂತೆ ರಾಮದಾಸ್ ಅವರ ಇನ್ನೊಂದು ಪ್ರಶ್ನೆಗೆ ಉತ್ತರ ನೀಡಿರುವ ಸಚಿವರು, ಕರ್ನಾಟಕವು ತಮಿಳುನಾಡಿಗೆ ಈ ವರ್ಷದ ಜೂನ್‌ನಲ್ಲಿ 2.195 ಟಿಎಂಸಿ ಅಡಿ ಹಾಗೂ ಜುಲೈನಲ್ಲಿ 0.45 ಟಿಎಂಸಿ ಅಡಿ ನೀರು ಹರಿಸಿದೆ. ಸುಪ್ರೀಂ ಕೋರ್ಟ್ ತೀರ್ಪಿನ ಪ್ರಕಾರ, ಎರಡು ತಿಂಗಳಲ್ಲಿ 40 ಟಿಎಂಸಿ ಅಡಿ ನೀರು ಹರಿಸಬೇಕಿತ್ತು' ಎಂದು ಹೇಳಿದ್ದಾರೆ.
- ಕರ್ನಾಟಕವು ತಮಿಳುನಾಡಿಗೆ 2023-24ರಲ್ಲಿ 81 ಟಿಎಂಸಿ ಅಡಿ, 2024-25ರಲ್ಲಿ 305 ಟಿಎಂಸಿ ಅಡಿ ಹಾಗೂ 2025-26ರಲ್ಲಿ 330 ಟಿಎಂಸಿ ಅಡಿ ನೀರನ್ನು ಹರಿಸಿತ್ತು. ಪ್ರತಿವರ್ಷ 177.25 ಟಿಎಂಸಿ ಅಡಿ ನೀರು ಬಿಡಬೇಕಿದೆ ಎಂದು ಅವರು ಮಾಹಿತಿ ನೀಡಿದ್ದಾರೆ."

Dr. Rajkumar IAS KAS Academy

## ❖ ಕೃಷ್ಣಾ ಜಲವಿವಾದ: ಅಧಿಸೂಚನೆಗೆ ರಾಜ್ಯ ಆಗ್ರಹ

- ಕೃಷ್ಣಾ ನ್ಯಾಯಮಂಡಳಿ ತೀರ್ಪಿನ ಅಂತಿಮ ಗೆಜೆಟ್ ಅಧಿಸೂಚನೆ ಹೊರಡಿಸುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಬೇಕೆಂದು ಕರ್ನಾಟಕ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಸೋಮವಾರ ಮನವಿ ಮಾಡಿತು.
- ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ತ್ರಿಸದಸ್ಯ ಪೀಠದ ಎದುರು ವಾದ ಮಂಡಿಸಿದ ರಾಜ್ಯ ಸರ್ಕಾರದ ಅಡ್ವಕೇಟ್ ಜನರಲ್ ಶಶಿಕಿರಣ್ ಶೆಟ್ಟಿ, ಹಿರಿಯ ವಕೀಲ ಮೋಹನ್ ಕಾತರಕಿ ಮತ್ತಿತರರು, '2011ರಲ್ಲಿ ನ್ಯಾಯಮಂಡಳಿ ತೀರ್ಪು ನೀಡಿದೆ. ಈವರೆಗೂ ಅಂತಿಮ ಅಧಿಸೂಚನೆ ಹೊರಡಿಸಿಲ್ಲ. ಇದರಿಂದಾಗಿ, ಕೃಷ್ಣಾ ನದಿಯ ಪಾಲಿನ ನೀರನ್ನು ಬಳಸಿಕೊಳ್ಳಲು ಆಗುತ್ತಿಲ್ಲ. ಜತೆಗೆ, ಭೂಸ್ವಾಧೀನ ವೆಚ್ಚ ಹೆಚ್ಚಾಗುತ್ತಿದೆ' ಎಂದರು.
- 'ಕೃಷ್ಣಾ ನದಿ ನೀರಿಗೆ ಸಂಬಂಧಿಸಿದಂತೆ ಆಂಧ್ರಪ್ರದೇಶ ಹಾಗೂ ತೆಲಂಗಾಣದ ನಡುವೆ ವಿವಾದ ಇದೆ. ಈ ಸಮಸ್ಯೆ ಇತ್ಯರ್ಥ ಆಗಬೇಕಿದೆ. ಈ ರಾಜ್ಯಗಳು ವಿವಾದ ಬಗೆಹರಿಸಿಕೊಳ್ಳಲಿ. ಈ ವಿವಾದದಿಂದಾಗಿ ಕರ್ನಾಟಕಕ್ಕೆ ಸಮಸ್ಯೆ ಆಗುತ್ತಿದೆ. ಕೇಂದ್ರ ಸರ್ಕಾರವು ಅಧಿಸೂಚನೆ ಹೊರಡಿಸಲು ಮೀನಮೇಷ ಎಣಿಸುತ್ತಿದೆ. ಈ ಸಂಬಂಧ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಬೇಕು' ಎಂದು ಅವರು ಕೋರಿದರು.
- ತೆಲಂಗಾಣ ಹಾಗೂ ಆಂಧ್ರಪ್ರದೇಶದ ನಡುವಿನ ಜಲವಿವಾದದ ವಿಚಾರಣೆಗೆ ತ್ರಿಸದಸ್ಯ ಪೀಠ ರಚಿಸಲು ಸುಪ್ರೀಂ ಕೋರ್ಟ್ ತೀರ್ಮಾನಿಸಿದೆ. ಈ ಪೀಠವು ಸೆಪ್ಟೆಂಬರ್ ಮೊದಲ ವಾರದಿಂದ ವಿಚಾರಣೆ ಆರಂಭಿಸಲಿದೆ.



# ಪಾಲಿಮರ್ ನೋಟಿನತ್ತ ದೇಶದ ನೋಟ...

• ನಾಗೇಶ್ ಶೆಣೈ ಪಿ.

ದೇಶದಲ್ಲಿ ಪಾಲಿಮರ್ (ಪ್ಲಾಸ್ಟಿಕ್) ನೋಟುಗಳನ್ನು ಚಲಾವಣೆಗೆ ತರಲು ಕೇಂದ್ರ ಸರ್ಕಾರ, ಆರ್‌ಬಿಐ ಮುಂದಡಿ ಇಟ್ಟಿವೆ. 14 ವರ್ಷಗಳ ಹಿಂದೆಯೇ ಇಂತಹ ನೋಟುಗಳನ್ನು ಮುದ್ರಿಸುವ ಯೋಜನೆಯನ್ನು ಕೇಂದ್ರ ಹಾಕಿಕೊಂಡಿತ್ತು. ಆದರೆ, ಅದು ಕಾರ್ಯರೂಪಕ್ಕೆ ಬಂದಿರಲಿಲ್ಲ. ಕಾಗದದ ನೋಟುಗಳು ಬೇಗ ಹಾಳಾಗುವ ಕಾರಣದಿಂದ, ಹೆಚ್ಚು ಸಮಯ ಬಾಳಿಕೆ ಬರುವ ಪಾಲಿಮರ್ ನೋಟುಗಳನ್ನು ಚಲಾವಣೆಗೆ ತರಲು ಆರ್‌ಬಿಐ ಯೋಜಿಸಿದೆ. 60ಕ್ಕೂ ಹೆಚ್ಚು ರಾಷ್ಟ್ರಗಳು ಪಾಲಿಮರ್ ನೋಟುಗಳನ್ನು ಹೊಂದಿವೆ. ಈ ನೋಟುಗಳ ಕುರಿತ ಮಾಹಿತಿ ಇಲ್ಲಿದೆ

## 60ಕ್ಕೂ ಹೆಚ್ಚು ದೇಶಗಳಲ್ಲಿ

## ಪಾಲಿಮರ್ ನೋಟಿನ ಇತಿಹಾಸ

## ಕಾರಣ ಏನು?

## ಏರುತ್ತಿರುವ ಮುದ್ರಣ ವೆಚ್ಚ

## ವಿಷಯ ವೈವಿಧ್ಯ

10 ಪೌಂಡ್ ಮುಖಬೆಲೆಯ ಇಂಗ್ಲೆಂಡ್‌ನ ಪಾಲಿಮರ್ ನೋಟು

## ರಾಷ್ಟ್ರೀಯ

## ಸರ್ಕಾರಿ ನೌಕರಿ ಆದೇಶ ರದ್ದುಗೊಳಿಸಿದ ಹೈಕೋ...

## 'ಎಸ್‌ಸಿ ಸ್ಥಾನಮಾನ' ನ... ಮರುಪರಿಶೀಲನೆ ಅರ್ಜಿ ...

## ಹಡಗಿನ ಮೇಲೆ ದಾಳಿ: ಉ... ಎದುರು ಪ್ರತಿಭಟನೆ ದಾಖ...

# ಶತಕೋಟ್ಯಧೀಶರ ಸಂಖ್ಯೆ ಏರಿಕೆ

## ಆದಾಯ ತೆರಿಗೆ ವಿವರ ಸಲ್ಲಿಕೆ ಆಧಾರದಲ್ಲಿ ಕೇಂದ್ರ ಸರ್ಕಾರದ ಮಾಹಿತಿ

ನವದೆಹಲಿ (ಪಿಟಿಐ): ವಾರ್ಷಿಕ ಒಟ್ಟು ಆದಾಯವು ₹100 ಕೋಟಿ ಅಥವಾ ಅದಕ್ಕಿಂತ ಹೆಚ್ಚು ಎಂಬುದಾಗಿ ಹೇಳಿಕೊಂಡವರ ಸಂಖ್ಯೆಯು 2025–26ನೆಯ ತೆರಿಗೆ ಮೌಲ್ಯಮಾಪನ ವರ್ಷದಲ್ಲಿ 576ಕ್ಕೆ ಹೆಚ್ಚಾಗಿದೆ ಎಂದು ಕೇಂದ್ರ ಸರ್ಕಾರವು ಸಂಸತ್ತಿಗೆ ಸೋಮವಾರ ತಿಳಿಸಿದೆ.



₹100 ಕೋಟಿ ಅಥವಾ ಅದಕ್ಕಿಂತ ಹೆಚ್ಚಿನ ವಾರ್ಷಿಕ ಆದಾಯ ಹೊಂದಿದವರ ಸಂಖ್ಯೆಯು ಕಳೆದ ಐದು ವರ್ಷಗಳ ಅವಧಿಯಲ್ಲಿ ನಾಲ್ಕು ಪಟ್ಟು ಹೆಚ್ಚಾಗಿದೆ ಎಂದು ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ನೀಡಿರುವ ಉತ್ತರದಲ್ಲಿ ಹೇಳಲಾಗಿದೆ.

ದೇಶದಲ್ಲಿ ಶತಕೋಟ್ಯಧೀಶರ ಸಂಖ್ಯೆಯಲ್ಲಿ ಗಣನೀಯ ಹೆಚ್ಚಳ ಆಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬ ಪ್ರಶ್ನೆಗೆ ಉತ್ತರವಾಗಿ ಚೌಧರಿ ಈ ಮಾಹಿತಿ ನೀಡಿದ್ದಾರೆ.

**ಮುಖ್ಯಾಂಶಗಳು**

- ಐದು ವರ್ಷದಲ್ಲಿ ಶತಕೋಟ್ಯಧೀಶರ ಸಂಖ್ಯೆ 142ರಿಂದ 576ಕ್ಕೆ ಏರಿಕೆ
- ಶತಕೋಟ್ಯಧೀಶ ಪದಕ್ಕೆ ವ್ಯಾಖ್ಯಾನ ಇಲ್ಲ: ಕೇಂದ್ರ

'ಶತಕೋಟ್ಯಧೀಶ' ಎಂಬ ಪದಕ್ಕೆ ಆದಾಯ ತೆರಿಗೆ ಕಾಯ್ದೆ – 2025ರ ಅಡಿಯಲ್ಲಿ ಅಥವಾ ಹಿಂದೆ ಜಾರಿಯಲ್ಲಿದ್ದ ಆದಾಯ ತೆರಿಗೆ ಕಾಯ್ದೆ – 1961ರ ಅಡಿಯಲ್ಲಿ ಯಾವುದೇ ವ್ಯಾಖ್ಯಾನ ಇಲ್ಲ ಎಂದು ಚೌಧರಿ ಅವರು ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

2021–22ರ ಮೌಲ್ಯಮಾಪನ ವರ್ಷದಲ್ಲಿ ₹100 ಕೋಟಿಗಿಂತ ಹೆಚ್ಚಿನ ಒಟ್ಟು ವಾರ್ಷಿಕ ಆದಾಯವನ್ನು ಘೋಷಿಸಿದ್ದವರ ಸಂಖ್ಯೆಯು 142 ಆಗಿತ್ತು.

**ಎಥೆನಾಲ್ ವಾಹನ–ಮಾಹಿತಿ ಇಲ್ಲ:** ಶೇ 20ರಷ್ಟು ಎಥೆನಾಲ್ ಮಿಶ್ರಣ ಇರುವ ಪೆಟ್ರೋಲ್ (ಇ20) ಬಳಕೆಗೆ ಪೂರ್ಣವಾಗಿ ಹೊಂದಿಕೆ ಆಗುವ ವಾಹನಗಳ ಪ್ರಮಾಣವು ದೇಶದಲ್ಲಿ ಎಷ್ಟಿದೆ ಎಂಬ ವಿವರವು ತನ್ನಲ್ಲಿ ಇಲ್ಲ ಎಂದು ಕೇಂದ್ರ ಸರ್ಕಾರವು ಸಂಸತ್ತಿಗೆ ತಿಳಿಸಿದೆ.

ಆದರೆ ಇ20 ಪೆಟ್ರೋಲ್ ಬಳಕೆಯು ನಿಗದಿತ ಮಾನದಂಡಗಳನ್ನು ಪಾಲಿಸಿದಾಗ ಸುರಕ್ಷಿತ ಎಂದು ಸ್ಪಷ್ಟಪಡಿಸಿದೆ.

ಎಂಜಿನ್ ಬಾಳಿಕೆ, ಚಾಲನೆ, ಸವಕಳಿ ನಿರೋಧಕತ್ವ, ವಾಹನಗಳಲ್ಲಿ ಬಳಕೆಯಾಗಿರುವ ವಸ್ತುಗಳ ಹೊಂದಾಣಿಕೆ, ಹೊಗೆ ಉಗುಳುವಿಕೆ ಮತ್ತು ಇಂಧನ ದಕ್ಷತೆ ಕುರಿತಾಗಿ ಪ್ರಯೋಗಾಲಯಗಳಲ್ಲಿ ಹಾಗೂ ಹೊರಗಡೆ ವಿಸ್ತೃತವಾಗಿ ಪರೀಕ್ಷೆ ನಡೆಸಲಾಗಿದೆ. ಈ ಪರೀಕ್ಷೆಗಳು ಇ20 ಪೆಟ್ರೋಲ್ ಬಳಕೆಯು ಸುರಕ್ಷಿತ ಎಂಬುದನ್ನು ತಿಳಿಸಿವೆ ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಖಾತೆ ರಾಜ್ಯ ಸಚಿವ ಸುರೇಶ್ ಗೋಪಿ ಅವರು ರಾಜ್ಯಸಭೆಗೆ ನೀಡಿರುವ ಲಿಖಿತ ಉತ್ತರದಲ್ಲಿ ಹೇಳಿದ್ದಾರೆ.

ಇ15 ಪೆಟ್ರೋಲ್ ಬಳಕೆಯು ಮೂರೂವರೆ ವರ್ಷಗಳಿಗೂ ಹೆಚ್ಚಿನ ಅವಧಿಯಿಂದ ಇದೆ, ಇ19–ಇ20 ಪೆಟ್ರೋಲ್ ಬಳಕೆಯು ಎರಡೂವರೆ ವರ್ಷಗಳಿಗೂ ಹೆಚ್ಚಿನ ಅವಧಿಯಿಂದ ಇದೆ. 20 ಕೋಟಿಗಿಂತ ಹೆಚ್ಚು ದ್ವಿಚಕ್ರ ವಾಹನಗಳು ಹಾಗೂ ಮೂರು ಕೋಟಿಗಿಂತ ಹೆಚ್ಚು ಕಾರುಗಳು ಈ ಇಂಧನ ಬಳಸುತ್ತಿವೆ ಎಂದು ಗೋಪಿ ಅವರು ತಿಳಿಸಿದ್ದಾರೆ.

'ಎಥೆನಾಲ್ ಮಿಶ್ರಣ ಇರುವ ಪೆಟ್ರೋಲ್ ಬಳಕೆಯಿಂದಾಗಿ ವ್ಯಾಪಕವಾದ ಎಂಜಿನ್ ವೈಫಲ್ಯ ಆಗಿದೆ ಎನ್ನಲು ಅಥವಾ ವಾಹನ ಹಾಳಾಗಿದೆ ಎನ್ನಲು ಪರಿಶೀಲಿಸಿ ನೋಡಬಹುದಾದ ಆಧಾರ ಇಲ್ಲ' ಎಂದು ಹೇಳಿದ್ದಾರೆ. ವಾಹನ ತಯಾರಿಕಾ ಕಂಪನಿಗಳು ವಾರಂಟಿ ಹೊಣೆಗಾರಿಕೆಗಳನ್ನು ಮಾನ್ಯ ಮಾಡುವುದು ಮುಂದುವರಿದಿದೆ ಎಂದಿದ್ದಾರೆ.

Publication Date
28/07/2026

Presented by ಪ್ರಜಾವಾಣಿ

## ❖ ಪಾನ್ ಮಸಾಲಗೆ ಸೆಸ್ ಏಕಪಕ್ಷೀಯ: ಹೈಕೋರ್ಟ್

- 'ಪಾನ್ ಮಸಾಲಾ ಮೇಲೆ ಆರೋಗ್ಯ ಮತ್ತು ರಾಷ್ಟ್ರೀಯ ಭದ್ರತಾ ಸೆಸ್ ವಿಧಿಸಿರುವ ಕೇಂದ್ರ ಸರ್ಕಾರದ ಕ್ರಮ ಏಕಪಕ್ಷೀಯವಾಗಿದೆ' ಎಂದು ಅದನ್ನು ರದ್ದುಗೊಳಿಸಿರುವ ಹೈಕೋರ್ಟ್, ಇದೇ ವೇಳೆ ಸಂಸತ್ತಿಗಿರುವ ಸೆಸ್ ವಿಧಿಸುವ ಅಧಿಕಾರವನ್ನು ಎತ್ತಿಹಿಡಿದಿದೆ.
- ಆರೋಗ್ಯ ಭದ್ರತಾ ರಾಷ್ಟ್ರೀಯ ಭದ್ರತಾ ಸೆಸ್ ಕಾಯ್ದೆ-2025ರ ಸಿಂಧುತ್ವವನ್ನು ಪ್ರಶ್ನಿಸಿ ಪಾನ್ ಮಸಾಲಾ ತಯಾರಕರಾದ 'ಮೆಸರ್ಸ್ ಧರಿವಾಲ್ ಇಂಡಸ್ಟ್ರೀಸ್ ಪ್ರೈವೇಟ್ ಲಿಮಿಟೆಡ್ ಕಂಪನಿ' ಮತ್ತಿತರರು ಸಲ್ಲಿಸಿದ್ದ ರಿಟ್ ಅರ್ಜಿಗಳ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪ್ರಕಟಿಸಿದೆ.
- 'ತೆರಿಗೆ, ಸರ್‌ಚಾರ್ಜ್ (ಹೆಚ್ಚುವರಿ ಶುಲ್ಕ) ಅಥವಾ ಸೆಸ್ (ಉಪ-ತೆರಿಗೆ) ವಿಧಿಸಲು ಮತ್ತು ಇದರ ಕಾನೂನನ್ನು ಜಾರಿಗೊಳಿಸಲು ಕೇಂದ್ರ ಸರ್ಕಾರಕ್ಕೆ ಎಲ್ಲಾ ಅಧಿಕಾರವಿದೆ. ಆದರೆ, ಈ ಪ್ರಕರಣದಲ್ಲಿ ಕಾಯ್ದೆ ಮತ್ತು ನಿಯಮಗಳಡಿ ಸೆಸ್ ವಿಧಿಸಿರುವ ವಿಧಾನವು ಅವಿವೇಕಯುತ ಮತ್ತು ಅಸ್ಪಷ್ಟತೆಯಿಂದ ಕೂಡಿದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.
- 'ಇದು ಉತ್ಪಾದನೆಯಾದ ವಾಸ್ತವಿಕ ಪ್ರಮಾಣದ ಬದಲಿಗೆ, ಉತ್ಪಾದನೆಯಾದ ಪ್ರಮಾಣದ ಬಗೆಗಿನ ಊಹೆಯ ಮೇಲೆ ಆಧರಿಸಿ ವಿಧಿಸಲಾದ ಸೆಸ್ ಆಗಿದೆ. ಇದು ಸಂವಿಧಾನದ 14ನೇ ವಿಧಿಯ ತತ್ವಗಳಿಗೆ ವಿರುದ್ಧವಾಗಿದೆ. ಪರಿಣಾಮ ಇದಕ್ಕೆ ಸಂಬಂಧಿಸಿದ ನಿಯಮಗಳು ಕೂಡಾ ಅಸಂವಿಧಾನಿಕ ಎಂದು ಪರಿಗಣಿಸಬೇಕಾಗುತ್ತದೆ. ಆದ್ದರಿಂದ, 2025ರ ಡಿಸೆಂಬರ್ 16 ಮತ್ತು 31 ಹಾಗೂ 2026ರ ಜನವರಿ 1 ಹಾಗೂ 30ರಂದು ಹೊರಡಿಸಿರುವ ಅಧಿ ಸೂಚನೆಗಳನ್ನು ರದ್ದು ಮಾಡಲಾಗಿದೆ' ಎಂದು ನ್ಯಾಯಪೀಠ ತಿಳಿಸಿದೆ.

### ಹೊರ್ಮುಜ್ ಜಲಸಂಧಿ ನಿರ್ವಹಣೆ: ಇರಾನ್-ಒಮಾನ್ ಚರ್ಚೆ

# ಸಂಧಾನ ಮಾತುಕತೆ: ಮೂಡಿದ ಭರವಸೆ

ಕೈರೊ (ಎಪಿ): 'ಪಶ್ಚಿಮ ಏಷ್ಯಾ ಸಂಘರ್ಷವನ್ನು ಕೊನೆಗೊಳಿಸಲು ಮತ್ತು ಅಮೆರಿಕ ಹಾಗೂ ಇರಾನ್ ಅನ್ನು ಮತ್ತೆ ಮಾತುಕತೆಯ ಹಾದಿಗೆ ತರುವ ಪ್ರಯತ್ನದಲ್ಲಿ ಸಂಧಾನಕಾರರು ಅಲ್ಪ ಪ್ರಗತಿ ಸಾಧಿಸಿದ್ದಾರೆ' ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಅಮೆರಿಕ ಮತ್ತು ಇರಾನ್ ಪರಸ್ಪರ ದಾಳಿ ನಿಲ್ಲಿಸಿ ಮೂರು ದಿನಗಳು ಕಳೆದಿರುವ ಸಂದರ್ಭದಲ್ಲಿ ಈ ಹೇಳಿಕೆ ಹೊರಬಿದ್ದಿದೆ. ಇರಾನ್ ಮೇಲೆ ಸತತ ಎರಡು ವಾರ ಭಾರಿ ದಾಳಿ ನಡೆಸಿದ್ದ ಅಮೆರಿಕವು ಕಳೆದ ಶುಕ್ರವಾರ ಕಾರ್ಯಾಚರಣೆ ನಿಲ್ಲಿಸಿತ್ತು. ಆ ಬಳಿಕ ಹೊಸದಾಗಿ ದಾಳಿ ವರದಿಯಾಗಿಲ್ಲ. ಅಮೆರಿಕವು ದಾಳಿ ನಿಲ್ಲಿಸಿರುವುದರಿಂದ ಪ್ರತೀಕಾರದ ದಾಳಿ ನಿಲ್ಲಿಸಲಾಗಿದೆ ಎಂದು ಇರಾನ್ ಕೂಡಾ ಹೇಳಿದೆ.

ಕತಾರ್ ಮತ್ತು ಪಾಕಿಸ್ತಾನದ ನೇತೃತ್ವದ ಸಂಧಾನಕಾರರು ಅಮೆರಿಕ ಹಾಗೂ ಇರಾನ್ ನಡುವೆ ಮೂಡಿರುವ ಅಪನಂಬಿಕೆಯನ್ನು ಹೋಗಲಾಡಿಸಲು ಶ್ರಮಿಸುತ್ತಿದ್ದಾರೆ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಇಬ್ಬರು ಅಧಿಕಾರಿಗಳು ಹೇಳಿದ್ದಾರೆ. ಈಚೆಗಿನ ದಾಳಿಯಿಂದಾಗಿ ಮುರಿದುಬಿದ್ದಿರುವ ಕದನ ವಿರಾಮ ಒಪ್ಪಂದವನ್ನು ಪುನಃಸ್ಥಾಪಿಸುವ ನಿಟ್ಟಿನಲ್ಲಿ ಈ ಪ್ರಯತ್ನ ನಡೆದಿದೆ.

ಹೊರ್ಮುಜ್ ಜಲಸಂಧಿ ಮೂಲಕ ಹಡಗುಗಳ ಸಂಚಾರವನ್ನು ನಿರ್ವಹಿಸುವ ಕಾರ್ಯವಿಧಾನವೊಂದರ ಕುರಿತು ಇರಾನ್ ಮತ್ತು ಒಮಾನ್‌ನೊಂದಿಗೆ ಸಂಧಾನಕಾರರು ಕೆಲಸ ಮಾಡುತ್ತಿದ್ದಾರೆ ಎಂದು ಒಬ್ಬರು ಅಧಿಕಾರಿ ತಿಳಿಸಿದ್ದಾರೆ. ಇರಾನ್ ಮತ್ತು ಅಮೆರಿಕ ನಡುವಿನ ಇತ್ತೀಚಿನ ದಾಳಿ ಹಾಗೂ ಪ್ರತಿದಾಳಿಗೆ ಹೊರ್ಮುಜ್ ಜಲಸಂಧಿಯ ವಿಚಾರವೇ ಪ್ರಮುಖ ಕಾರಣವಾಗಿತ್ತು.

'ಈ ಪ್ರದೇಶದಲ್ಲಿ ನಡೆಯುತ್ತಿರುವ ಬೆಳವಣಿಗೆಗಳಿಗೆ ಸಂಬಂಧಿಸಿದಂತೆ ಸಂಧಾನಕಾರರು ಅಮೆರಿಕದ ಕಡೆಯಿಂದ ನಮಗೆ ಸಂದೇಶಗಳನ್ನು ತಲುಪಿಸಬಹುದು. ಆದರೆ ಸದ್ಯಕ್ಕೆ, ಅಮೆರಿಕದೊಂದಿಗೆ ನಮ್ಮ ಯಾವುದೇ ನೇರ ಮಾತುಕತೆಗಳು ನಡೆಯುತ್ತಿಲ್ಲ' ಎಂದು ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ಇಸ್ಮಾಯಿಲ್ ಬಖಾಯಿ ಸೋಮವಾರ ಟೆಹರಾನ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಹೊರ್ಮುಜ್ ಜಲಸಂಧಿಯನ್ನು ನಿರ್ವಹಿಸುವ ಕಾರ್ಯವಿಧಾನಕ್ಕೆ ಸಂಬಂಧಿಸಿದಂತೆ ಇರಾನ್ ಹಾಗೂ ಒಮಾನ್ ನಡುವೆ ಹಲವು ಸುತ್ತುಗಳು ಮಾತುಕತೆಗಳು ನಡೆದಿವೆ ಎಂದು ಅವರು ಹೇಳಿದ್ದಾರೆ.

**ಯುದ್ಧ ಸಾಮಗ್ರಿ ಕೊರತೆ, ಅಲ್ಲಗಳೆದ ಅಮೆರಿಕ:** ವಾಯು ರಕ್ಷಣಾ ವ್ಯವಸ್ಥೆ ಸೇರಿದಂತೆ ಯುದ್ಧ ಸಾಮಗ್ರಿಗಳ ಕೊರತೆಯಿಂದಾಗಿ ಇರಾನ್ ಮೇಲಿನ ದಾಳಿಯನ್ನು ಅಮೆರಿಕ ನಿಲ್ಲಿಸಿದೆ ಎಂಬ ವರದಿಗಳನ್ನು ಅಮೆರಿಕ ಅಲ್ಲಗಳೆದಿದೆ. ಇರಾನ್ ದಾಳಿಯನ್ನು ಎದುರಿಸಲು ನಿರ್ಣಾಯಕ ಎನಿಸಿರುವ ಇಂಟರ್‌ಸೆಪ್ಟರ್‌ಗಳ ಸಂಗ್ರಹ ಕಡಿಮೆಯಾಗುತ್ತಿದೆ ಎಂಬ ವರದಿಗಳು ಪ್ರಕಟವಾಗಿದ್ದವು. ವಿಶ್ವಸಂಸ್ಥೆಗೆ ಅಮೆರಿಕದ ರಾಯಭಾರಿಯಾಗಿರುವ ಮೈಕ್ ವಾಲ್ಟ್ಜ್ ಅವರು ಇಂತಹ ವರದಿಗಳನ್ನು ತಳ್ಳಿಹಾಕಿದ್ದಾರೆ.

## ಸೌದಿ ಮೇಲೆ ದಾಳಿ: ಹೂಥಿ

ಸನಾ (ಎಎಫ್‌ಪಿ): ಸೌದಿ ಅರೇಬಿಯಾದ ತೈಲ ಮೂಲಸೌಕರ್ಯಗಳ ಮೇಲೆ ಸೋಮವಾರ ದಾಳಿ ನಡೆಸಲಾಗಿದೆ ಎಂದು ಯೆಮನ್‌ನ ಹೂಥಿ ಬಂಡುಕೋರರು ಹೇಳಿದ್ದಾರೆ.

'ಸೌದಿ ಅರೇಬಿಯಾದ ಪೂರ್ವ ಭಾಗದಿಂದ ಯಾಂಬು ನಗರಕ್ಕೆ ಕಚ್ಚಾ ತೈಲ ಪೂರೈಕೆಗೆ ಸಂಬಂಧಿಸಿದ ಹಲವು ಸ್ಥಳಗಳ ಮೇಲೆ ಡ್ರೋನ್ ಬಳಸಿ ದಾಳಿ ನಡೆಸಲಾಗಿದೆ' ಎಂದು ಹೂಥಿ ಸೇನಾ ವಕ್ತಾರ ಯಾಹ್ಯಾ ಸಾರೀ ತಿಳಿಸಿದ್ದಾರೆ.

ಇದೇ ವೇಳೆ, ಇರಾನ್ ಬೆಂಬಲಿತ ಬಂಡುಕೋರರು ಇರಾಕ್‌ನಿಂದ ಹಾರಿಸಿದ ಡ್ರೋನ್‌ಗಳನ್ನು ಹೊಡೆದುರುಳಿಸಿರುವುದಾಗಿ ಸೌದಿ ಅರೇಬಿಯಾ ರಕ್ಷಣಾ ಸಚಿವಾಲಯ ತಿಳಿಸಿದೆ.

## ಉಕ್ರೇನ್‌ಗೆ ಇರಾನ್ ಎಚ್ಚರಿಕೆ

ಕ್ಯಾಸ್ಪಿಯನ್ ಸಮುದ್ರದಲ್ಲಿ ತನ್ನ ಹಡಗಿನ ಮೇಲೆ ದಾಳಿ ನಡೆಸಿರುವ ಉಕ್ರೇನ್‌ಗೆ ತಕ್ಕ ಪ್ರತ್ಯುತ್ತರ ನೀಡಲಾಗುವುದು ಎಂದು ಇರಾನ್ ಎಚ್ಚರಿಸಿದೆ.

'ಉಕ್ರೇನ್‌ನ ಈ ಕ್ರಮವು ಸಂಪೂರ್ಣವಾಗಿ ಕಾನೂನುಬಾಹಿರ ಮತ್ತು ವಿಶ್ವಸಂಸ್ಥೆಯ ಸನ್ನದಿಗೆ ವಿರುದ್ಧವಾಗಿದೆ. ಈ ಅಪಾಯಕಾರಿ ನಡೆಗೆ, ನಾವು ಖಂಡಿತವಾಗಿಯೂ ಪ್ರತ್ಯುತ್ತರ ನೀಡುತ್ತೇವೆ' ಎಂದು ಇಸ್ಮಾಯಿಲ್ ಬಖಾಯಿ ಹೇಳಿದ್ದಾರೆ.

'ಇರಾನ್‌ನ ಸಹಭಾಗಿತ್ವದಲ್ಲಿ ಮಿಲಿಟರಿ ಸರಕುಗಳನ್ನು ಸಾಗಿಸುತ್ತಿದ್ದ ನೌಕೆಗಳ ಮೇಲೆ ಕ್ಯಾಸ್ಪಿಯನ್ ಸಮುದ್ರದಲ್ಲಿ ದಾಳಿ ನಡೆಸಿದ್ದೇವೆ' ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಶನಿವಾರ ಹೇಳಿದ್ದರು. ದಾಳಿಯಲ್ಲಿ ಒಬ್ಬ ನಾವಿಕ ಮೃತಪಟ್ಟು, ಹಲವರು ಗಾಯಗೊಂಡಿದ್ದಾರೆ ಎಂದು ಇರಾನ್ ಹೇಳಿದೆ.

Publication Date
28/07/2026

Presented by ಪ್ರಜಾವಾಣಿ

# ಸಿಜೆಪಿ ಬಳಿಕ 'ಇ20 ಜನತಾ ಪಾರ್ಟಿ' ಮುನ್ನೆಲೆಗೆ

## ಇ20 ಪೆಟ್ರೋಲ್ ಬಳಕೆ ಕಡ್ಡಾಯದ ವಿರುದ್ಧ ಆಂದೋಲನ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾಕ್ರೋಚ್ ಜನತಾ ಪಾರ್ಟಿ (ಸಿಜೆಪಿ) ದೇಶದಾದ್ಯಂತ ಸದ್ದು ಮಾಡಿದ ಬಳಿಕ ಇದೀಗ ಎಥೆನಾಲ್ ಹೊಂದಿರುವ ಪೆಟ್ರೋಲ್ (ಇ20) ಬಳಕೆ ಕಡ್ಡಾಯಗೊಳಿಸಿರುವ ವಿರುದ್ಧ ಆಂದೋಲನಕ್ಕೆ ಸಾಮಾಜಿಕ ಜಾಲತಾಣದಲ್ಲಿ 'ಇ20 ಜನತಾ ಪಾರ್ಟಿ' ಮುನ್ನೆಲೆಗೆ ಬಂದಿದೆ.

ಅದರ ಖಾತೆಗಳು ಸೋಮವಾರ ಸಂಜೆಯ ವೇಳೆಗೆ 'ಎಕ್ಸ್'ನಲ್ಲಿ 53 ಸಾವಿರ, ಇನ್‌ಸ್ಟಾಗ್ರಾಮ್‌ನಲ್ಲಿ 3.28 ಲಕ್ಷ ಫಾಲೋವರ್‌ಗಳನ್ನು ಹೊಂದಿದೆ.

'ಇದು ರಾಜಕೀಯ ಪಕ್ಷವಲ್ಲ, ಸಾಮಾನ್ಯ ನಾಗರಿಕರ ಸಮಸ್ಯೆಗಳ ಬಗ್ಗೆ ಧ್ವನಿ ಎತ್ತುವ ಮತ್ತು ಇ20 ಪೆಟ್ರೋಲ್ ಪರಿಣಾಮದ ಕುರಿತ ಚರ್ಚೆಗೆ ಪ್ರೋತ್ಸಾಹಿಸುವ ಸ್ವತಂತ್ರ ನಾಗರಿಕ ಆಂದೋಲನವಾಗಿದೆ' ಎಂದು ಇ20 ಜನತಾ ಪಾರ್ಟಿ ಹೇಳಿಕೊಂಡಿದೆ.

ಶಿಕ್ಷಣ ಸಚಿವ ಸ್ಥಾನಕ್ಕೆ ಧರ್ಮೇಂದ್ರ




ಇ20 ಜನತಾ ಪಾರ್ಟಿಯ 'ಎಕ್ಸ್' ಖಾತೆ

ಪ್ರಧಾನ್ ಅವರು ರಾಜೀನಾಮೆ ನೀಡಿದ ಕಾರಣ ಸಿಜೆಪಿ ತನ್ನ ಪ್ರತಿಭಟನೆಯನ್ನು ಕೈಬಿಟ್ಟ ಮರುದಿನವೇ ಇ20 ಜನತಾ ಪಾರ್ಟಿ ಹೆಸರಲ್ಲಿ 'ಎಕ್ಸ್' ಖಾತೆ ಆರಂಭಗೊಂಡಿದೆ.

'ಇ20 ಜನತಾ ಪಾರ್ಟಿ ಎಂದರೆ ಶೇ 100ರಷ್ಟು ಶುದ್ಧ ಪೆಟ್ರೋಲ್ ಪಡೆಯುವ ಪ್ರತಿಯೊಬ್ಬ ನಾಗರಿಕನ ಹಕ್ಕಿಗಾಗಿ ನಡೆಯುವ ಹೋರಾಟ. ಪೆಟ್ರೋಲ್ ಬಂಕ್‌ಗಳಲ್ಲಿ ಜನರು ಸ್ವಯಂ ಪ್ರೇರಿತವಾಗಿ ಇ0, ಇ20 ಅಥವಾ ಇ85 ಪೆಟ್ರೋಲ್‌ಗಳನ್ನು ಆಯ್ಕೆ ಮಾಡಲು ಅವಕಾಶ ಕಲ್ಪಿಸುವಂತೆ ಮಾಡಬೇಕು. ಯಾರಾದರೂ ಎಥೆನಾಲ್ ರಹಿತ ಪೆಟ್ರೋಲ್ ಬಳಸಲು ಬಯಸಿದರೆ ಅವರಿಗೆ ಅದನ್ನು ನೀಡಿ, ಬಲವಂತವಾಗಿ ಇ20 ನೀಡುವುದನ್ನು ನಿಲ್ಲಿಸಿ' ಎಂದು 'ಎಕ್ಸ್'ನಲ್ಲಿ ಪೋಸ್ಟ್ ಮಾಡಲಾಗಿದೆ.

ಮತ್ತೊಂದು ಪೋಸ್ಟ್‌ನಲ್ಲಿ, ಕೇಂದ್ರ ರಸ್ತೆ ಸಾರಿಗೆ ಸಚಿವ ನಿತೀನ್ ಗಡ್ಕರಿ ಅವರ ರಾಜೀನಾಮೆಗೆ ಆಗ್ರಹಿಸಲಾಗಿದೆ.

'ನಾವು ಯಾವುದೇ ರಾಜಕೀಯ ಪಕ್ಷವನ್ನು ಬೆಂಬಲಿಸುವುದಿಲ್ಲ. ನಮ್ಮ ಬೆಂಬಲ ಯಾವುದೇ ರಾಜಕೀಯ ಸಿದ್ಧಾಂತ ಹೊಂದಿರದ ಜನರಿಗೆ. ಈ ಆಂದೋಲನದ ಬಗೆಗಿನ ವದಂತಿಗಳಿಂದ ವಿಚಲಿತರಾಗಬೇಡಿ. ಇಂತಹ ವದಂತಿಗಳು ನೈಜ ವಿಚಾರಗಳ ಕಡೆಗೆ ಗಮನಹರಿಸಲು ಬಿಡುವುದಿಲ್ಲ' ಎಂದು ತಿಳಿಸಲಾಗಿದೆ.

## ಆ.1ರಂದು ಎಎಪಿಯಿಂದ ಸಭೆ

ಇ20 ಪೆಟ್ರೋಲ್ ವಿರೋಧಿಸುವ ಎಲ್ಲರನ್ನೂ ಒಂದೆಡೆ ಸೇರಿಸುವ ಸಲುವಾಗಿ ಆಮ್ ಆದ್ಮಿ ಪಕ್ಷ (ಎಎಪಿ) ಆಗಸ್ಟ್ 1ರಂದು ದೆಹಲಿಯಲ್ಲಿ ಸಭೆ ಆಯೋಜಿಸಿದೆ ಎಂದು ಪಕ್ಷದ ರಾಷ್ಟ್ರೀಯ ಸಂಯೋಜಕ ಅರವಿಂದ ಕೇಜ್ರಿವಾಲ್ ಸೋಮವಾರ ಹೇಳಿದರು.



ಅರವಿಂದ ಕೇಜ್ರಿವಾಲ್

'ಇ20 ಪೆಟ್ರೋಲ್ ಬಳಕೆ ಕಡ್ಡಾಯಗೊಳಿಸಿರುವುದನ್ನು ಕೈಬಿಡಲು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರುವ ಕುರಿತು 'ಕಾನ್ಸ್ಟಿಟ್ಯೂಷನ್ ಕ್ಲಬ್ ಆಫ್ ಇಂಡಿಯಾ'ದಲ್ಲಿ ನಡೆಯಲಿರುವ ಸಭೆಯಲ್ಲಿ ಚರ್ಚಿಸಲಾಗುತ್ತದೆ. ತಜ್ಞರು ಮತ್ತು ತೊಂದರೆ ಅನುಭವಿಸುತ್ತಿರುವ ಜನರು ಭಾಗವಹಿಸಿ' ಎಂದು ಕರೆ ನೀಡಿದರು.

ಸಭೆಯಲ್ಲಿ ವರ್ಚುವಲ್ ಆಗಿ ಭಾಗವಹಿಸಲು ಬಯಸುವವರು 8588833212 ಸಂಖ್ಯೆಗೆ ಸಂದೇಶ ಕಳುಹಿಸಿದರೆ ಆನ್‌ಲೈನ್ ಲಿಂಕ್ ಅನ್ನು ಕಳುಹಿಸಲಾಗುವುದು ಎಂದು ಮಾಹಿತಿ ನೀಡಿದರು.

ಇ20 ಪೆಟ್ರೋಲ್ ಬಳಕೆ ಕಡ್ಡಾಯಗೊಳಿಸಿರುವುದನ್ನು ಕೈಬಿಡುವಂತೆ ಆಗ್ರಹಿಸಿ ದೆಹಲಿ ಟ್ಯಾಕ್ಸಿ, ಟೂರಿಸ್ಟ್ ನಿರ್ವಹಣೆ ಮಾಡುವವರ ಮತ್ತು ಪ್ರವಾಸ ನಿರ್ವಹಣಕಾರರ ಸಂಘವು ಆಗಸ್ಟ್ 4ರಂದು ಸಂಸತ್ ಭವನದವರೆಗೆ ಪ್ರತಿಭಟನಾ ಮೆರವಣಿಗೆಗೆ ಕರೆ ನೀಡಿದೆ.

## ಇ–20 ಪೆಟ್ರೋಲ್: ವಾಹನಗಳಿಗೆ ಹಾನಿ ಇಲ್ಲ

ನವದೆಹಲಿ (ಪಿಟಿಐ): 'ಎಥೆನಾಲ್ ಮಿಶ್ರಿತ ಪೆಟ್ರೋಲ್ (ಇ–20) ಬಳಸುತ್ತಿರುವ ವಾಹನಗಳ ಅನುಪಾತವನ್ನು ಸರ್ಕಾರವು ಪರಿಶೀಲಿಸಿಲ್ಲ; ವ್ಯಾಪಕ ಅಧ್ಯಯನಗಳು ಹಾಗೂ ಕ್ಷೇತ್ರ ಪ್ರಯೋಗದ ಅಡಿಯಲ್ಲಿ ನಿರ್ದಿಷ್ಟ ಮಾನದಂಡದ ಅನ್ವಯ ಇ–20 ಇಂಧನ ಬಳಸುವುದು ಸುರಕ್ಷಿತ ಎಂದು ದೃಢಪಟ್ಟಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ರಾಜ್ಯಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಲಿಖಿತ ಉತ್ತರ ನೀಡಿದ ಕೇಂದ್ರ ಪೆಟ್ರೋಲಿಯಂ ಹಾಗೂ ನೈಸರ್ಗಿಕ ಅನಿಲ ರಾಜ್ಯ ಸಚಿವ ಸುರೇಶ್ ಗೋಪಿ, 'ವಾಹನಗಳ ಅನುಪಾತವನ್ನು ಪರಿಶೀಲಿಸಿಲ್ಲ ಎಂದು ಕೇಂದ್ರ ಬೃಹತ್ ಕೈಗಾರಿಕಾ ಸಚಿವಾಲಯವು ತಿಳಿಸಿದೆ. ಎಥೆನಾಲ್ ಮಿಶ್ರಿತ ಪೆಟ್ರೋಲ್ (ಎಬಿಪಿ) ಅನ್ನು ಹಂತ ಹಂತವಾಗಿ ವೈಜ್ಞಾನಿಕ ಮಾದರಿಯಲ್ಲಿ ನೀತಿ ಆಯೋಗ, ವಾಹನಗಳ ಉತ್ಪಾದಕರು, ತೈಲ ಮಾರುಕಟ್ಟೆ ಕಂಪನಿಗಳು, ಆಟೋಮೋಟಿವ್ ರೀಸರ್ಚ್ ಅಸೋಸಿಯೇಷನ್ ಆಫ್ ಇಂಡಿಯಾ (ಎಆರ್‌ಎಐ) ಹಾಗೂ ಸೊಸೈಟಿ ಆಫ್ ಆಟೊಮೊಬೈಲ್ ಮ್ಯಾನ್ಯುಫ್ಯಾಕ್ಚರ್ಸ್ ಹಾಗೂ ಭಾರತೀಯ ಪೆಟ್ರೋಲಿಯಂ ಸಂಸ್ಥೆ (ಐಐಪಿ) ಹಾಗೂ ಇತರೆ ತಾಂತ್ರಿಕ ಸಂಸ್ಥೆಗಳ ನೆರವಿನೊಂದಿಗೆ ಜಾರಿಗೆ ತರಲಾಗಿದೆ' ಎಂದು ಮಾಹಿತಿ ನೀಡಿದ್ದಾರೆ.

Publication Date
28/07/2026

Presented by ಪ್ರಜಾವಾಣಿ

## ❖ ಡೀಪ್‌ಫೇಕ್ ಪೋಸ್ಟ್: ಪ್ರಕರಣ ದಾಖಲಿಸಲು ಅನುಮತಿ

- 'ಇ20 ಯೋಜನೆ ಜಾರಿಗೆ ನಾನೇ ಕಾರಣ. ಇದರಿಂದ ನನಗೆ, ನನ್ನ ಕುಟುಂಬಕ್ಕೆ ಆರ್ಥಿಕವಾಗಿ ಅನುಕೂಲವಾಗಿದೆ ಎಂಬ ಡೀಪ್‌ಫೇಕ್ ಪೋಸ್ಟ್‌ಗಳನ್ನು ಹಂಚಿಕೊಳ್ಳಲಾಗುತ್ತಿದೆ. ಆದ್ದರಿಂದ, ಮೆಟಾ, 'ಎಕ್ಸ್', ಗೂಗಲ್ ವಿರುದ್ಧ ಪ್ರಕರಣ ದಾಖಲಿಸಲು ಅನುಮತಿ ನೀಡಿ' ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರು ಸಲ್ಲಿಸಿದ್ದ ಅರ್ಜಿಯನ್ನು ಪರಿಗಣಿಸಿರುವ ಬಾಂಬೆ ಹೈಕೋರ್ಟ್, ಪ್ರಕರಣ ದಾಖಲಿಸಲು ಒಪ್ಪಿಗೆ ನೀಡಿದೆ.

- ಗಡ್ಕರಿ ಅವರ ವಿಶೇಷ ಕೋರಿಕೆ ಅರ್ಜಿಯನ್ನು ಹೈಕೋರ್ಟ್ ಪರಿಗಣಿಸಿತು. ನ್ಯಾಯಮೂರ್ತಿ ಅಭಯ್ ಅಹುಜಾ ಅವರಿದ್ದ ಪೀಠವು ಅರ್ಜಿಯ ವಿಚಾರಣೆ ನಡೆಸಿತು. ಗಡ್ಕರಿ ಪರ ವಕೀಲ ಸಂದೀಪ್ ಎಸ್. ಲಡ್ಡ ಅರ್ಜಿ ಸಲ್ಲಿಸಿದರು.
- 'ಜಾಲತಾಣಗಳಲ್ಲಿ ಹಂಚಿಕೆ ಆಗುತ್ತಿರುವ ಪೋಸ್ಟ್‌ಗಳಲ್ಲಿ ಸತ್ಯವಿಲ್ಲ. ಸ್ವಂತ ಲಾಭಕ್ಕಾಗಿ ನನ್ನ ಹುದ್ದೆಯನ್ನು ನಾನು ದುರ್ಬಳಕೆ ಮಾಡಿಕೊಂಡಿದ್ದೇನೆ ಎಂಬಂತೆ ಪೋಸ್ಟ್‌ಗಳನ್ನು ಸೃಷ್ಟಿಸಲಾಗಿದೆ. ಇದು ನನ್ನ ಗೌರವಕ್ಕೆ ಹಾನಿಯುಂಟು ಮಾಡಿದೆ' ಎಂದು ಗಡ್ಕರಿ ಅವರು ಅರ್ಜಿಯಲ್ಲಿ ಹೇಳಿದ್ದಾರೆ.
- 'ಜಾಲತಾಣಗಳಲ್ಲಿನ ಪೋಸ್ಟ್ ಗಳು, ಟ್ವೀಟ್‌ಗಳು, ರೀಲ್ಸ್ ಗಳು, ಡೀಪ್ ಫೇಕ್ ವಿಡಿಯೊಗಳಲ್ಲಿರುವ ಭಾಷೆಯು ಅಶ್ಲೀಲ ವಾಗಿದೆ. ಇವು ಗಳಲ್ಲಿ ನನ್ನ ಹೇಳಿಕೆಗಳನ್ನು ತಪ್ಪಾಗಿ ಕೋಟ್ ಮಾಡಲಾಗಿವೆ. ನನ್ನ ಮುಖ, ಧ್ವನಿ, ಭಾವಚಿತ್ರಗಳನ್ನು ನನ್ನ ಒಪ್ಪಿಗೆ ಇಲ್ಲದೆ ಕೃತಕ ಬುದ್ಧಿಮತ್ತೆ ಮೂಲಕ ಸೃಷ್ಟಿಸಿ ಅನುಚಿತವಾಗಿ ಬಳಸಿ ಕೊಳ್ಳಲಾಗಿದೆ' ಎಂದು ದೂರಿದ್ದಾರೆ.

## ❖ ಸ್ಪರ್ಧಾತ್ಮಕ ಪರೀಕ್ಷೆಗಳ (ಅಕ್ರಮಗಳ ತಡೆ) ತಿದ್ದುಪಡಿ ಮಸೂದೆ- 2026ರ ಪ್ರಕಾರ, ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಗಳ ತನಿಖೆಯನ್ನು ಎರಡು ತಿಂಗಳೊಳಗೆ ಪೂರ್ಣಗೊಳಿಸಬೇಕು.

- ಪ್ರಶ್ನೆಪತ್ರಿಕೆ ಸೋರಿಕೆ ಅಥವಾ ಪರೀಕ್ಷಾ ಅಕ್ರಮಗಳಲ್ಲಿ ಭಾಗಿಯಾದ ವ್ಯಕ್ತಿಗಳಿಗೆ ಕನಿಷ್ಠ 5 ವರ್ಷ ಮತ್ತು ಗರಿಷ್ಠ 10 ವರ್ಷ ಜೈಲು ಶಿಕ್ಷೆ ಹಾಗೂ ₹50 ಲಕ್ಷದವರೆಗೆ ದಂಡ ವಿಧಿಸಲಾಗುವುದು. ಸಂಘಟಿತ ಅಪರಾಧಗಳಿಗೆ ಕನಿಷ್ಠ ಏಳು ವರ್ಷಗಳ ಶಿಕ್ಷೆ, ₹10 ಕೋಟಿಯವರೆಗೆ ದಂಡ ವಿಧಿಸಲು ಅವಕಾಶ ಇದೆ.
- ಮಸೂದೆ ಪ್ರಕಾರ, ಪ್ರಕರಣಗಳ ವಿಚಾರಣೆಗೆ ತ್ವರಿತ ನ್ಯಾಯಾಲಯಗಳನ್ನು ಸ್ಥಾಪಿಸಲು ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಅಧಿಕಾರ ನೀಡಲಾಗುತ್ತದೆ.
- ಈ ನ್ಯಾಯಾಲಯಗಳು ಆರೋಪಪಟ್ಟಿ ಸಲ್ಲಿಕೆಯಾದ ಮೂರು ತಿಂಗಳೊಳಗೆ ವಿಚಾರಣೆ ಪೂರ್ಣಗೊಳಿಸಿ ಆದೇಶ ನೀಡಬೇಕು. ಕೆಲವು ಸಂದರ್ಭಗಳಲ್ಲಿ, ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಗಳ ತನಿಖೆಗೆ ವಿಶೇಷ ಕಾರ್ಯಪಡೆ ಸ್ಥಾಪಿಸಲು ಕೇಂದ್ರ ಸರ್ಕಾರಕ್ಕೆ ಅಧಿಕಾರ ಇರುತ್ತದೆ.
- ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅಕ್ರಮ ಗಳನ್ನು ತಡೆಯುವ ಉದ್ದೇಶದ ಕಠಿಣ ಕಾನೂನನ್ನು ಕೇಂದ್ರ ಸರ್ಕಾರ 2024ರಲ್ಲಿ ಜಾರಿಗೆ ತಂದಿತ್ತು. ತಪ್ಪೆಸಗಿ ರುವುದು ಸಾಬೀತಾದರೆ ಈ ಕಾಯ್ದೆಯ ಅಡಿಯಲ್ಲಿ ಕನಿಷ್ಠ ಮೂರರಿಂದ ಐದು ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸಬಹುದು. ವಂಚನೆಯಂತಹ ಅಪರಾಧವನ್ನು ಸಂಘಟಿತವಾಗಿ ಎಸಗಿದವರಿಗೆ ಐದರಿಂದ 10 ವರ್ಷಗಳವರೆಗೆ ಜೈಲುಶಿಕ್ಷೆ ವಿಧಿಸಲು ಹಾಗೂ ಕನಿಷ್ಠ ₹1 ಕೋಟಿ ದಂಡ ವಿಧಿಸಲು ಅವಕಾಶ ಇದೆ.
- ಮಸೂದೆ ಮಂಡಿಸಿದ ಬಳಿಕ ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರು ಮಸೂದೆ ಅಂಗೀಕಾರಕ್ಕೆ ಸಹಕಾರ ನೀಡಬೇಕೆಂದು ಮನವಿ ಮಾಡಿದರು. ವಿಪಕ್ಷಗಳ ಸದಸ್ಯರು ಘೋಷಣೆಗಳನ್ನು ಕೂಗಿ ಗದ್ದಲ ಮುಂದುವರಿಸಿದರು. 'ನೀವು ಮಸೂದೆಗೆ ವಿರುದ್ಧವಾಗಿದ್ದೀರಾ' ಎಂದು ಓಂ ಬಿರ್ಲಾ ಪ್ರಶ್ನಿಸಿದರು. ಆಗಲೂ ವಿಪಕ್ಷಗಳ ಸದಸ್ಯರು 'ಹೋ' ಎಂದು ಘೋಷಣೆ ಕೂಗಿದರು.
- ಮಸೂದೆಯನ್ನು ಪರಿಚಯಿಸುವುದರ ವಿರುದ್ಧವಾಗಿ ಮಾತನಾಡಲು ಹೆಸರು ಕೊಟ್ಟ ಹಿರಿಯ ಸದಸ್ಯರಾದ ಸೌಗತ ರಾಯ್. ಮನಿಷ್ ತಿವಾರಿ, ಎನ್.ಕೆ.ಪ್ರೇಮಚಂದ್ರನ್ ಅವರ ಹೆಸರುಗಳನ್ನು ಸಭಾಧ್ಯಕ್ಷರು ಕರೆದರು. ಅವರು ಯಾರೂ ಮಾತನಾಡಲಿಲ್ಲ. ಈಗ ಮಸೂದೆಯನ್ನು ಪರಿಚಯಿಸುವಂತೆ ಜಿತೇಂದ್ರ ಸಿಂಗ್ ಅವರಿಗೆ ಸಭಾಧ್ಯಕ್ಷರು ಸೂಚಿಸಿದರು. ಪರಿಚಯಿಸಿದ ಬಳಿಕ ಬಿರ್ಲಾ, ಮಸೂದೆ ಮೇಲಿನ ಚರ್ಚೆಯಲ್ಲಿ ಭಾಗವಹಿಸುವಂತೆ ಸದಸ್ಯರಲ್ಲಿ ವಿನಂತಿಸಿದರು.
- 'ಇದು ಸಾರ್ವಜನಿಕ ಪರೀಕ್ಷಾ ಪ್ರಕ್ರಿಯೆಯನ್ನು ಸುಧಾರಿಸುವ ದಿಸೆಯಲ್ಲಿ ಮೊದಲ ಹೆಜ್ಜೆ. ಘೋಷಣೆಗಳನ್ನು ಕೂಗುವ ಬದಲು ಮಸೂದೆ ಕುರಿತು ಚರ್ಚಿಸಬೇಕು. ಸರ್ಕಾರವು ಮಸೂದೆಯಲ್ಲಿ ನಿಮ್ಮ ಸಲಹೆಗಳನ್ನು ಸೇರಿಸಲು ಪ್ರಯತ್ನಿಸುತ್ತದೆ' ಎಂದರು.
- ವಿರೋಧ ಪಕ್ಷಗಳ ಸದಸ್ಯರು ಪ್ರತಿಭಟನೆ ಮುಂದುವರಿಸಿದ್ದರಿಂದ ಸಭಾಧ್ಯಕ್ಷರು ಕಲಾಪವನ್ನು ಮುಂದೂಡಿದರು.

# ಜ್ಞಾನೇಶ್ವರಿ, ಮುತ್ತುಪಂಡಿಗೆ ಬೆಳ್ಳಿ ಬೆಡಗು

## ವೇಟ್‌ಲಿಫ್ಟಿಂಗ್ ಸ್ಪರ್ಧೆಯಲ್ಲಿ ಭಾರತಕ್ಕೆ ಐದನೇ ಪದಕ • ವಿಂದ್ಯಾರಾಣಿಗೆ ಕಂಚು

**ಕಾಮನ್‌ವೆಲ್ತ್ ಗೇಮ್ಸ್ ಗ್ಲಾಸ್ಗೊ 2026**

**ಪದಕ ಪಟ್ಟಿ**

| ಸ್ಥಾನ | ದೇಶ | ಚಿನ್ನ | ಬೆಳ್ಳಿ | ಕಂಚು | ಒಟ್ಟು |
|---|---|---|---|---|---|
| 1 | ಆಸ್ಟ್ರೇಲಿಯಾ | 19 | 9 | 16 | 44 |
| 2 | ಕೆನಡಾ | 6 | 7 | 4 | 17 |
| 3 | ನೈಜೀರಿಯಾ | 6 | 4 | 0 | 10 |
| 4 | ಇಂಗ್ಲೆಂಡ್ | 5 | 11 | 6 | 22 |
| 5 | ಸ್ಕಾಟ್ಲೆಂಡ್ | 4 | 3 | 1 | 8 |
| 8 | ಭಾರತ | 1 | 3 | 2 | 6 |


ವೇಟ್‌ಲಿಫ್ಟಿಂಗ್‌ನಲ್ಲಿ ಬೆಳ್ಳಿ ಪದಕ ಜಯಿಸಿದ ಜ್ಞಾನೇಶ್ವರಿ ಯಾದವ್


ರಜತ ಪದಕ ಗೆದ್ದ ರಾಜಾ ಮುತ್ತುಪಂಡಿ

ಚಿತ್ರಗಳು: ಪಿಟಿಐ

ಗ್ಲಾಸ್ಗೊ (ಪಿಟಿಐ): ಭಾರತದ ವೇಟ್‌ಲಿಫ್ಟರ್ ಜ್ಞಾನೇಶ್ವರಿ ಯಾದವ್ ಅವರು ಕಾಮನ್‌ವೆಲ್ತ್ ಕ್ರೀಡೆಗಳ ಮಹಿಳೆಯರ 53 ಕೆ.ಜಿ. ವಿಭಾಗದಲ್ಲಿ ಸೋಮವಾರ ಬೆಳ್ಳಿ ಪದಕ ಗೆದ್ದುಕೊಂಡರು. ಅವರೊಂದಿಗೆ ಚಿನ್ನಕ್ಕಾಗಿ ನಡೆದ ಪೈಪೋಟಿಯಲ್ಲಿ ನೈಜೀರಿಯಾದ ಒನೊಮೆ ಒಮೊಲೊಲಾ ದಿದಿಹ ಚಿನ್ನ ಗೆದ್ದರಲ್ಲದೇ, ಆ ಹಾದಿಯಲ್ಲಿ ನೂತನ ದಾಖಲೆಗಳನ್ನು ಬರೆದರು.

ಮಹಿಳೆಯರ 58 ಕೆ.ಜಿ. ವಿಭಾಗದಲ್ಲಿ ವಿಂದ್ಯಾರಾಣಿ ಕಂಚಿನ ಪದಕ ಗೆದ್ದುಕೊಂಡರು.

ಛತ್ತೀಸಗಢದ ಭೊಂಡಿಯಾ ಗ್ರಾಮದವರಾದ 23 ವರ್ಷ ವಯಸ್ಸಿನ ಜ್ಞಾನೇಶ್ವರಿ ಒಟ್ಟು 199 ಕೆ.ಜಿ. ಭಾರ ಎತ್ತಿದರು. ಸ್ನಾಚ್‌ನಲ್ಲಿ 88 ಕೆ.ಜಿ, ಕ್ಲೀನ್ ಮತ್ತು ಜರ್ಕ್‌ನಲ್ಲಿ 111 ಕೆ.ಜಿ. ತೂಕ ಎತ್ತಿದರು. ಆದರೆ ಪಟ್ಟುಬಿಡದ ಒನೊಮೆ ಭರ್ಜರಿ ಪ್ರದರ್ಶನ ನೀಡಿ ಒಟ್ಟು 206 ಕೆ.ಜಿ. (93 + 113 ಕೆ.ಜಿ) ತೂಕ ಎತ್ತಿದರು. ಆ ಮೂಲಕ ಕಾಮನ್‌ವೆಲ್ತ್ ವೇಟ್‌ಲಿಫ್ಟಿಂಗ್ ಮತ್ತು ಕಾಮನ್‌ವೆಲ್ತ್ ಕ್ರೀಡೆಗಳ ವೇಟ್‌ಲಿಫ್ಟಿಂಗ್‌ನಲ್ಲಿ ನೂತನ ದಾಖಲೆ ಸ್ಥಾಪಿಸಿ ಚಿನ್ನ ಗೆದ್ದರು.

ವೇದಿಕೆಯಲ್ಲಿ ಈ ಇಬ್ಬರು ಯುವ ಸ್ಪರ್ಧಿಗಳ ಪೈಪೋಟಿ ಗಮನ ಸೆಳೆಯಿತು. ಇಬ್ಬರೂ ಸ್ಪರ್ಧಿಗಳು ಸುಲಭವಾಗಿ ಬಿಟ್ಟು ಕೊಡಲಿಲ್ಲ. ಹೀಗಾಗಿ ಈ ಪೈಪೋಟಿ ನೂತನ ದಾಖಲೆ ನಿರ್ಮಾಣದವರೆಗೆ ಮುಂದುವರಿದು ಅರೇನಾ ಪೂರ್ತಿ ಭರ್ತಿಯಾಗಿದ್ದ ಪ್ರೇಕ್ಷಕರಲ್ಲಿ ರೋಮಾಂಚನ ಮೂಡಿಸಿತು.

ಸ್ನಾಚ್‌ನಲ್ಲಿ ಜ್ಞಾನೇ ಶ್ವರಿ ಅವರ ನಿರ್ವಹಣೆ ಸೊಗಸಾಗಿತ್ತು. ಅವರ ಮೂರೂ ಲಿಫ್ಟ್‌ಗಳು ಪರಿಪೂರ್ಣ ಎನ್ನುವ ಮಟ್ಟಿಗಿದ್ದವು. ಲೀಲಾಜಾಲವಾಗಿ ಅವರು ಭಾರ ಎತ್ತಿದರು. ನೈಜೀರಿಯಾದ ಸ್ಪರ್ಧಿಗೆ ಒತ್ತಡ ಹೆಚ್ಚಿಸಿದರು. ಕ್ಲೀನ್ ಮತ್ತು ಜರ್ಕ್‌ನಲ್ಲೂ ಪೈಪೋಟಿ ಮುಂದುವರಿಯಿತು. ಭಾರತದ ಸ್ಪರ್ಧಿ 107 ಕೆ.ಜಿ. ಎತ್ತಿ ನೂತನ ಕಾಮನ್‌ವೆಲ್ತ್ ಕ್ರೀಡೆಗಳ ದಾಖಲೆ ಸ್ಥಾಪಿಸಿ ಉತ್ತಮ ಆರಂಭ ಮಾಡಿದರು. ಆದರೆ ದಿದಿಹ ಸ್ವಲ್ಪವೂ ವಿಚಲಿತರಾಗಲಿಲ್ಲ. 110 ಕೆ.ಜಿ. ಭಾರ ಎತ್ತಿ ಆ ದಾಖಲೆಯನ್ನು ಅಳಿಸಿಹಾಕಿದರು. ಪ್ರೇಕ್ಷಕರ ಸಮೂಹದ-ಲ್ಲಿದ್ದ ಭಾರತೀಯರ ಹರ್ಷೋದ್ಗಾರಗಳ ನಡುವೆ ಅವರು 111 ಕೆ.ಜಿ. ಭಾರ ಎತ್ತಿ ಮತ್ತೆ ದಾಖಲೆ ಬರೆದರು.

ಆದರೆ ಅಂತಿಮ ನಗು ನೈಜೀರಿಯಾದ ಸ್ಪರ್ಧಿಯದಾಯಿತು. ಅವರು ಎತ್ತಬೇಕಾದ ತೂಕವನ್ನು 113 ಕೆ.ಜಿ.ಗೆ ಹೆಚ್ಚಿಸಿದರು. ದಾಖಲೆ ತಮ್ಮ ಹೆಸರಿಗೆ ವರ್ಗಾಯಿಸಿ ಸಂಭ್ರಮಿಸಿದರು.

ಮಹಿಳೆಯರ 58 ಕೆ.ಜಿ. ವಿಭಾಗದಲ್ಲಿ ಮಣಿಪುರದ ವಿಂದ್ಯಾರಾಣಿ ಒಟ್ಟು 199 ಕೆ.ಜಿ ಭಾರ ಎತ್ತಿದರು. ಸ್ನಾಚ್‌ನಲ್ಲಿ 87 ಕೆ.ಜಿ, ಕ್ಲೀನ್ ಮತ್ತು ಜರ್ಕ್‌ನಲ್ಲಿ 112 ಕೆ.ಜಿ. ಎತ್ತಿದರು. ನೈಜೀರಿಯಾದ ರಾಫಿಯಾತು ಫೊಲಶಾಡೆ ಕಾಮನ್‌ವೆಲ್ತ್ ದಾಖಲೆಯೊಂದಿಗೆ (ಒಟ್ಟು 229 ಕೆ.ಜಿ) ಚಿನ್ನ ಗೆದ್ದರು. ಕೆನಡಾದ ಅನ್-ಸೋಫಿ ಟ್ಯಾಸ್ಸೆರೋ (215 ಕೆಜಿ) ಬೆಳ್ಳಿ ಪದಕ ಜಯಿಸಿದರು.

ಇದು ವೇಟ್‌ಲಿಫ್ಟಿಂಗ್‌ನಲ್ಲಿ ಭಾರತಕ್ಕೆ ಐದನೇ ಪದಕ. ಇದಕ್ಕೆ ಮೊದಲು ಮೀರಾಬಾಯಿ ಚಾನು ಚಿನ್ನ ಗೆದ್ದರೆ, ರಿಷಿಕಾಂತ ಸಿಂಗ್ ಮತ್ತು ರಾಜಾ ಮುತ್ತುಪಂಡಿ ಬೆಳ್ಳಿ ಪದಕಗಳನ್ನು ಗೆದ್ದಿದ್ದರು. ಕೂಟದ ಎರಡನೇ ದಿನ ಪ್ಯಾರಾ ಪವರ್‌ಲಿಫ್ಟಿಂಗ್‌ನಲ್ಲಿ ಝುಂಡು ಕುಮಾರ್ ಕಂಚಿನ ಪದಕ ಜಯಿಸಿದ್ದರು.

**ಬೆಳ್ಳಿ ಗೆದ್ದ ಮುತ್ತುಪಂಡಿ:** ಭಾನುವಾರ ತಡರಾತ್ರಿ ನಡೆದ ಪುರುಷರ 65 ಕೆ.ಜಿ. ವಿಭಾಗದ ಸ್ಪರ್ಧೆಯಲ್ಲಿ ರಾಜಾ ಮುತ್ತುಪಂಡಿ ತಮ್ಮ ಮೊದಲ ಕಾಮನ್‌ವೆಲ್ತ್ ಕ್ರೀಡೆಗಳಲ್ಲಿ ಬೆಳ್ಳಿ ಗೆದ್ದು ಗಮನಸೆಳೆದರು.

ತಮಿಳುನಾಡಿನ ಮುತ್ತುಪಂಡಿ ಸ್ನಾಚ್‌ನಲ್ಲಿ 126 ಕೆ.ಜಿ, ಕ್ಲೀನ್ ಮತ್ತು ಜರ್ಕ್‌ನಲ್ಲಿ 160 ಕೆ.ಜಿ. ಭಾರ ಸೇರಿದಂತೆ ಒಟ್ಟು 286 ಕೆ.ಜಿ. ಭಾರ ಎತ್ತಿದರು. ಮಲೇಷ್ಯಾದ ಮೊಹಮ್ಮದ್ ಅಝ್ನಿಲ್ ಬಿನ್ ಬಿದಿನ್ ಒಟ್ಟು ತೂಕದ (299 ಕೆ.ಜಿ) ದಾಖಲೆಯೊಡನೆ ಚಿನ್ನ ಗೆದ್ದರೆ, ಪಪುವಾ ನ್ಯೂಗಿನಿಯ ಮೊರಿಯಾ ಬಾರು (ಒಟ್ಟು 282 ಕೆ.ಜಿ) ಕಂಚಿನ ಪದಕ ತಮ್ಮದಾಗಿಸಿಕೊಂಡರು.


ಕಂಚಿನ ಪದಕದೊಂದಿಗೆ ವಿಂದ್ಯಾರಾಣಿ

Publication Date
28/07/2026


Presented by

# ಜಿಮ್ನಾಸ್ಟ್ ಪ್ರತಿಷ್ಠಾಗೆ ಏಳನೇ ಸ್ಥಾನ

ಗ್ಲಾಸ್ಗೊ (ಪಿಟಿಐ): ಭಾರತದ ಪ್ರತಿಷ್ಠಾ ಸಮಂತಾ ಅವರು ಸೋಮವಾರ ಕಾಮನ್‌ವೆಲ್ತ್ ಗೇಮ್ಸ್‌ನ ಆರ್ಟಿಸ್ಟಿಕ್ ಜಿಮ್ನಾಸ್ಟಿಕ್ಸ್ ಸ್ಪರ್ಧೆಯ ಮಹಿಳೆಯರ ವಾಲ್ಟ್ ಫೈನಲ್‌ನಲ್ಲಿ ಏಳನೇ ಸ್ಥಾನ ಗಳಿಸಿದರು.

ಎಂಟು ಸ್ಪರ್ಧಿಗಳಿದ್ದ ಫೈನಲ್‌ಗೆ ಅರ್ಹತೆ ಪಡೆದಿದ್ದ ಪಶ್ಚಿಮ ಬಂಗಾಳದ 22 ವರ್ಷ ವಯಸ್ಸಿನ ಜಿಮ್ನಾಸ್ಟ್, ತಮ್ಮ ಮೊದಲ ವಾಲ್ಟ್‌ನಲ್ಲಿ 12.700 ಅಂಕ ಮತ್ತು ಎರಡನೇ ವಾಲ್ಟ್‌ನಲ್ಲಿ 12.666 ಅಂಕ ಸೇರಿದಂತೆ ಸರಾಸರಿ 12.883 ಅಂಕ ಕಲೆ ಹಾಕಿದರು.

ಕೆನಡಾದ ಲಿಯಾ ಮೋನಿಕಾ ಫಾಂಟೈನ್ ಅವರು ಅದ್ಭುತ ಪ್ರದರ್ಶನ ನೀಡುವ ಮೂಲಕ ಚಿನ್ನದ ಪದಕ ಗೆದ್ದರು. ಅರ್ಹತಾ ಸುತ್ತಿನಲ್ಲೂ ಅಗ್ರಸ್ಥಾನ ಪಡೆದಿದ್ದ ಅವರು ಫೈನಲ್‌ನಲ್ಲಿ ಸರಾಸರಿ 14.000 ಅಂಕ ಗಳಿಸಿದರು. ಇಂಗ್ಲೆಂಡ್‌ನ ಅಬಿಗೈಲ್ ಮಾರ್ಟಿನ್ (13.799 ಅಂಕ) ಬೆಳ್ಳಿ ಪದಕ ಗೆದ್ದರೆ, ವೇಲ್ಸ್‌ನ ಅಬಿಗೈಲ್ ರೋಪರ್ (13.433 ಅಂಕ) ಕಂಚಿನ ಪದಕ ಗೆದ್ದರು.


ಪ್ರತಿಷ್ಠಾ ಸಮಂತಾ

# ಏಷ್ಯನ್ ಹಾಕಿ ಫೈವ್ಸ್: ಬಾಲಕರಿಗೆ ಚಿನ್ನ




ಯೂತ್ ಹಾಕಿಫೈವ್ಸ್ ವಿಶ್ವಕಪ್‌ಗೆ ಅರ್ಹತೆ ಪಡೆದ ಭಾರತ ಬಾಲಕರ ತಂಡ

**ಮಸ್ಕತ್ (ಪಿಟಿಐ):** ಸಾಂಘಿಕ ಪ್ರದರ್ಶನ ತೋರಿದ ಭಾರತದ ಸಬ್ ಜೂನಿಯರ್ ಬಾಲಕರ ತಂಡವು ಎಫ್‌ಐಎಚ್ ಯೂತ್ ಹಾಕಿಫೈವ್ಸ್ ಏಷ್ಯನ್ ಚಾಂಪಿಯನ್‌ಷಿಪ್‌ನ ಫೈನಲ್‌ನಲ್ಲಿ 3–1ರಿಂದ ಪಾಕಿಸ್ತಾನ ತಂಡವನ್ನು ಭಾನುವಾರ ಮಣಿಸಿ ಚಿನ್ನದ ಪದಕ ಗೆದ್ದುಕೊಂಡಿತು.

ಭಾರತ ತಂಡದ ಪರ ರೋಮಿತ್ ಪಾಲ್ (5ನೇ ನಿಮಿಷ), ನಾಯಕ ಕೇತನ್ ಕುಶ್ವಾಹ (12ನೇ) ಮತ್ತು ಶಾರುಖ್ ಅಲಿ (13ನೇ) ಗೋಲು ದಾಖಲಿಸಿದರು. ಪಾಕ್ ಪರ ಮೊಹಮ್ಮದ್ ಉಸ್ಮಾನ್ (16ನೇ) ಒಂದು ಗೋಲು ಗಳಿಸಿದರು.

ಫೈನಲ್ ತಲುಪಿದ ಭಾರತ ಮತ್ತು ಪಾಕಿಸ್ತಾನ ತಂಡಗಳು ಎಫ್‌ಐಎಚ್ ಯೂತ್ ಹಾಕಿಫೈವ್ಸ್ ವಿಶ್ವಕಪ್‌ಗೆ ಅರ್ಹತೆ ಪಡೆದವು.

**ಮಹಿಳೆಯರ ತಂಡಕ್ಕೆ ಬೆಳ್ಳಿ ಪದಕ:** ಭಾರತದ ಸಬ್ ಜೂನಿಯರ್ ಬಾಲಕಿಯ ತಂಡವು ಫೈನಲ್ ಪಂದ್ಯದಲ್ಲಿ 2–4ರಿಂದ ಚೀನಾ ತಂಡಕ್ಕೆ ಸೋತು ಬೆಳ್ಳಿ ಪದಕ ತಮ್ಮದಾಗಿಸಿಕೊಂಡಿತು. ಚೀನಾ ಮತ್ತು ಭಾರತ ತಂಡಗಳು ವಿಶ್ವಕಪ್‌ಗೆ ಅರ್ಹತೆ ಪಡೆದುಕೊಂಡವು.

ಬಾಲಕರ ತಂಡದ ಸದಸ್ಯರಿಗೆ ತಲಾ ₹2 ಲಕ್ಷ, ನೆರವು ಸಿಬ್ಬಂದಿಗೆ ತಲಾ ₹1 ಲಕ್ಷ ಬಹುಮಾನವನ್ನು ಹಾಕಿ ಇಂಡಿಯಾ ಘೋಷಿಸಿದೆ. ಬಾಲಕಿಯರ ತಂಡದ ಆಟಗಾರ್ತಿಯರಿಗೆ ತಲಾ ₹1 ಲಕ್ಷ ಮತ್ತು ನೆರವು ಸಿಬ್ಬಂದಿಗೆ ತಲಾ ₹50 ಸಾವಿರ ಘೋಷಿಸಿದೆ.

Publication Date
28/07/2026

Presented by ಪ್ರಜಾವಾಣಿ

# ಅಂತರರಾಷ್ಟ್ರೀಯ ಸರ್ಕ್ಯೂಟ್: ಮೊದಲ ಪ್ರಶಸ್ತಿ ಗೆದ್ದ ಆದಿತ್ಯ

ಬೆಂಗಳೂರು: ಭಾರತದ ಯುವ ರೇಸರ್ ಆದಿತ್ಯ ಪಟ್ನಾಯಕ್ ಅವರು ಮಲೇಷ್ಯಾದ ಸೆಪಾಂಗ್ ಅಂತರರಾಷ್ಟ್ರೀಯ ಸರ್ಕ್ಯೂಟ್‌ನಲ್ಲಿ ನಡೆದ ಗೋಲ್ಡ್ ವಿಯೊಸ್ ಚಾಂಪಿಯನ್‌ಷಿಪ್‌ನ ಸ್ಪೋರ್ಟಿಂಗ್ ಕ್ಲಾಸ್ 3ನೇ ಸುತ್ತಿನ ಪ್ರಶಸ್ತಿ ಗೆದ್ದಿದ್ದಾರೆ.

ಮುಂಬೈನ 21 ವರ್ಷದ ಆದಿತ್ಯಗೆ ಅಂತರರಾಷ್ಟ್ರೀಯ ಕಾರು ರೇಸಿಂಗ್‌ನಲ್ಲಿ ಇದು ಚೊಚ್ಚಲ ಪ್ರಶಸ್ತಿಯಾಗಿದೆ. ಟ್ರೋಫಿಯೊಂದಿಗೆ ₹3.5 ಲಕ್ಷ ನಗದು ಬಹುಮಾನ ಜೇಬಿಗಿಳಿಸಿಕೊಂಡರು.

ಮೊದಲ ರೇಸ್‌ನಲ್ಲಿ ಮೂರನೇ ಸ್ಥಾನ ಪಡೆದಿದ್ದ ಆದಿತ್ಯ ಅವರು ಎರಡನೇ ರೇಸ್‌ನಲ್ಲಿ ಅದ್ಭುತ ಪ್ರದರ್ಶನ ನೀಡಿದರು. ಇದರೊಂದಿಗೆ ಒಟ್ಟಾರೆ ಮೂರನೇ ಸುತ್ತಿನ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು. ಪೋಲೊ ಕಪ್ ಇಂಡಿಯಾದಲ್ಲಿ ಸತತ ಎರಡು ವರ್ಷ ರಾಷ್ಟ್ರೀಯ ರನ್ನರ್ ಅಪ್ ಆಗಿದ್ದ ಅವರು ಅಂತರರಾಷ್ಟ್ರೀಯ ರೇಸಿಂಗ್‌ಗೆ ಕಾಲಿಟ್ಟ ಮೊದಲ ವರ್ಷದಲ್ಲೇ ಯಶಸ್ಸು ಕಂಡರು.

ಆ್ಯಡಂ ಮೈಕಲ್ ಹಾಗೂ ಆರೀಫ್ ಅಜ್ಮಿ ಕ್ರಮವಾಗಿ ಎರಡನೇ ಮತ್ತು ಮೂರನೇ ಸ್ಥಾನ ಪಡೆದರು.

'ಮೊದಲ ರೇಸ್ ತೀವ್ರ ಪೈಪೋಟಿಯಿಂದ ಕೂಡಿತ್ತು. ಎರಡನೇ ರೇಸ್‌ನಲ್ಲಿ ಹೋರಾಟ ಬಿಡದೆ ಮುನ್ನಡೆ ಸಾಧಿಸಿ ಗೆದ್ದಿದ್ದು ರೋಮಾಂಚಕಾರಿ ಅನುಭವ' ಎಂದು ಆದಿತ್ಯ ಹೇಳಿದರು.

2023ರಲ್ಲಿ ಬೆಂಗಳೂರಿನ ಮೆಕೊ ಕಾರ್ಟೋಪಿಯಾ ಸರ್ಕ್ಯೂಟ್‌ನಲ್ಲಿ ನಡೆದ ಎಫ್‌ಎಂಎಸ್‌ಸಿಐ ರಾಷ್ಟ್ರೀಯ ಕಾರ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಆದಿತ್ಯ ಚಾಂಪಿಯನ್ ಆಗಿದ್ದರು. ಈ ಸಾಧನೆಯ ಮೂಲಕ ಅಂತರರಾಷ್ಟ್ರೀಯ ಮಟ್ಟದ ಸ್ಪರ್ಧೆಗಳಿಗೆ ಅವಕಾಶ ಪಡೆದಿದ್ದರು.




ಪ್ರಶಸ್ತಿ ಗೆದ್ದ ಆದಿತ್ಯ ಪಟ್ನಾಯಕ್

Publication Date
28/07/2026

Presented by ಪ್ರಜಾವಾಣಿ

# ಸ್ವರ್ಣಕ್ಕೆ ಗುರಿಯಿಟ್ಟ ಇಶಾ ಸಿಂಗ್

## ಶೂಟಿಂಗ್ ವಿಶ್ವಕಪ್: ಮನು ಭಾಕರ್‌ಗೆ ಕಂಚಿನ ಪದಕ

ಹಾಂಗ್‌ಝೌ (ಚೀನಾ) (ಪಿಟಿಐ): ಭಾರತದ ಭರವಸೆಯ ಶೂಟರ್ ಇಶಾ ಸಿಂಗ್ ಅವರು ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ಶೂಟಿಂಗ್ ವಿಶ್ವಕಪ್‌ನ ಮಹಿಳೆಯರ 25 ಮೀ. ಪಿಸ್ತೂಲ್ ಸ್ಪರ್ಧೆಯಲ್ಲಿ ಸೋಮವಾರ ಸ್ವರ್ಣಕ್ಕೆ ಗುರಿಯಿಟ್ಟರು. ಒಲಿಂಪಿಯನ್ ಮನು ಭಾಕರ್ ಅವರು ಕಂಚು ಗೆದ್ದರು.



ಮನು ಭಾಕರ್

ತಲಾ ಒಂದು ಚಿನ್ನ, ಬೆಳ್ಳಿ ಹಾಗೂ ಕಂಚಿನ ಪದಕ ಜಯಿಸಿರುವ ಭಾರತವು ಪದಕಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿದೆ. ಚೀನಾ (6 ಚಿನ್ನ ಸೇರಿ 15 ಪದಕ) ಮತ್ತು ಅಮೆರಿಕ (ತಲಾ 2 ಚಿನ್ನ, ಬೆಳ್ಳಿ) ಮೊದಲೆರಡು ಸ್ಥಾನಗಳಲ್ಲಿವೆ.

ಎಂಟು ಸ್ಪರ್ಧಿಗಳಿದ್ದ ಫೈನಲ್ ಸುತ್ತಿನಲ್ಲಿ 21 ವರ್ಷ ವಯಸ್ಸಿನ ಇಶಾ ಅವರು ಅಮೋಘ ಪ್ರದರ್ಶನದೊಂದಿಗೆ 40 ಅಂಕಗಳನ್ನು ಸಂಗ್ರಹಿಸಿದರು. ಆತಿಥೇಯ ರಾಷ್ಟ್ರದ ಯೂಯೂ ಝೂಂಗ್ (37 ಅಂಕ) ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು. ಒಲಿಂಪಿಕ್ ಡಬಲ್ ಪದಕ ವಿಜೇತೆ ಮನು ಹಾಗೂ ಉತ್ತರ ಕೊರಿಯಾದ ಹ್ಯೊನ್ ಗ್ಯೊಂಗ್ ಪಾಕ್ ತಲಾ 28 ಅಂಕಗಳೊಂದಿಗೆ ಮೂರನೇ ಸ್ಥಾನ ಪಡೆದರು. 'ಶೂಟ್‌ಆಫ್'ನಲ್ಲಿ ಮನು ಅವರಿಗೆ ಕಂಚಿನ ಪದಕ ಒಲಿಯಿತು.

ಅರ್ಹತಾ ಸುತ್ತಿನಲ್ಲಿ ಇಶಾ (585) ಎಂಟನೇ ಸ್ಥಾನ ಪಡೆದಿದ್ದರು. ಮನು (586) ಆರನೇ ಸ್ಥಾನದೊಂದಿಗೆ ಫೈನಲ್‌ಗೆ ಅರ್ಹತೆ ಗಿಟ್ಟಿಸಿಕೊಂಡಿದ್ದರು. ರ‍್ಯಾಂಕಿಂಗ್ ಪಾಯಿಂಟ್ಸ್‌ಗಾಗಿ ಮಾತ್ರ ಸ್ಪರ್ಧಿಸಿದ್ದ ರಾಹಿ ಸರ್ನೋಬತ್ (582 ಅಂಕ), ಸಿಮ್ರನ್‌ಪ್ರೀತ್ ಕೌರ್ ಬ್ರಾರ್ (576) ಮತ್ತು ಅಭಿದ್ನ್ಯಾ ಅಶೋಕ್ ಪಾಟೀಲ (573) ಗಮನ ಸೆಳೆದರು.

ಹೈದರಾಬಾದ್‌ನ ಇಶಾ ಅವರು ಋತುವಿನ ಆರಂಭದಲ್ಲಿ ನಡೆದ ಮ್ಯೂನಿಕ್ ವಿಶ್ವಕಪ್‌ನ ಜೂನಿಯರ್ ಮತ್ತು ಸೀನಿಯರ್ ವಿಭಾಗಗಳಲ್ಲಿ ವಿಶ್ವದಾಖಲೆಯೊಂದಿಗೆ (43 ಪಾಯಿಂಟ್ಸ್) ಚಿನ್ನದ ಪದಕ ಜಯಿಸಿದ್ದರು. ಏಷ್ಯನ್ ಗೇಮ್ಸ್‌ನಲ್ಲಿ ನಾಲ್ಕು ಪದಕಗಳನ್ನು ಗೆದ್ದಿದ್ದರು.



ಚಿನ್ನದ ಪದಕ ಗೆದ್ದ ಸಂಭ್ರಮದಲ್ಲಿ ಇಶಾ ಸಿಂಗ್
ಚಿತ್ರ: ಐಎಸ್‌ಎಸ್‌ಎಫ್ / ಎನ್‌ಆರ್‌ಎಐ

Publication Date
28/07/2026

Presented by ಪ್ರಜಾವಾಣಿ




## ❖ ಪ್ರಧಾನಿಗೆ ಮುಖ್ಯಮಂತ್ರಿ ವಿಜಯ್ ಪತ್ರ: ಮೇಕೆದಾಟು: ಕೇಂದ್ರ ಸರ್ಕಾರದ ಉತ್ತರಕ್ಕೆ ತಮಿಳುನಾಡು ಆಕ್ಷೇಪ

- 'ಪ್ರಸ್ತಾವಿತ ಮೇಕೆದಾಟು ಜಲಾಶಯ ನಿರ್ಮಾಣಕ್ಕೆ ಕರ್ನಾಟಕವು ನೆರೆ ರಾಜ್ಯಗಳ ಸಮ್ಮತಿ ಪಡೆಯುವ ಅಗತ್ಯವಿಲ್ಲ ಎಂಬ ಕೇಂದ್ರ ಜಲಶಕ್ತಿ ಸಚಿವರ ಉತ್ತರ ನಿರಾಶಾದಾಯಕ. ಈ ಉತ್ತರವನ್ನು ವಾಪಸ್ ಪಡೆಯಬೇಕು' ಎಂದು ತಮಿಳುನಾಡು ಮುಖ್ಯಮಂತ್ರಿ ಜೋಸೆಫ್ ವಿಜಯ್ ಆಗ್ರಹಿಸಿದ್ದಾರೆ.
- ರಾಜ್ಯಸಭೆಯಲ್ಲಿ ಸೋಮವಾರ ಪ್ರಶ್ನೆಯೊಂದಕ್ಕೆ ಉತ್ತರ ನೀಡಿದ್ದ ಕೇಂದ್ರ ಜಲಶಕ್ತಿ ಖಾತೆ ರಾಜ್ಯ ಸಚಿವ ರಾಜ್ ಭೂಷಣ್ ಚೌಧರಿ, 'ಕಾವೇರಿ ಜಲವಿವಾದಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ 2018ರಲ್ಲಿ ನೀಡಿದ್ದ ತೀರ್ಪಿನಲ್ಲಿ, ಕಾವೇರಿ ನದಿಗೆ ಅಡ್ಡಲಾಗಿ ಯಾವುದೇ ಅಣೆಕಟ್ಟೆ ನಿರ್ಮಿಸಲು ಕರ್ನಾಟಕವು ನದಿ ತೀರದ ರಾಜ್ಯಗಳಾದ ತಮಿಳುನಾಡು, ಕೇರಳ ಮತ್ತು ಪುದುಚೇರಿಯಿಂದ ಒಪ್ಪಿಗೆ ಪಡೆಯಬೇಕೆಂದು ಯಾವ ಉಲ್ಲೇಖವೂ ಇಲ್ಲ' ಎಂದು ಸ್ಪಷ್ಟಪಡಿಸಿದ್ದರು. ಈ ಉತ್ತರಕ್ಕೆ ಆಕ್ಷೇಪ ವ್ಯಕ್ತಪಡಿಸಿ ವಿಜಯ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮಂಗಳವಾರ ಪತ್ರ ಬರೆದಿದ್ದಾರೆ.
- 'ಕರ್ನಾಟಕ ಆಂಧ್ರಪ್ರದೇಶದ ನಡುವಿನ ಅಲಮಟ್ಟಿ ಪ್ರಕರಣದಲ್ಲಿ, ನದಿ ನೀರು ಹಂಚಿಕೊಳ್ಳುವ ಪಕ್ಕದ ರಾಜ್ಯದ ಒಪ್ಪಿಗೆ ಅಗತ್ಯ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು. ಅಂತರರಾಜ್ಯ ಜಲವಿವಾದಗಳ ಕಾನೂನುಗಳನ್ನು ಉಲ್ಲೇಖಿಸದೆಯೇ ಸಚಿವರು ಈ ಉತ್ತರ ನೀಡಿದ್ದಾರೆ. ಇದು ಸರಿಯಲ್ಲ' ಎಂದು ಅವರು ಹೇಳಿದ್ದಾರೆ.

- 'ಮೇಕೆದಾಟು ಅಣೆಕಟ್ಟೆ ಯೋಜನೆಯು ಕಾವೇರಿ ನ್ಯಾಯಮಂಡಳಿಯ ತೀರ್ಪು ಮತ್ತು ಸುಪ್ರೀಂ ಕೋರ್ಟ್ ಮಾರ್ಪಡಿಸಿದ ನ್ಯಾಯಮಂಡಳಿಯ ತೀರ್ಪಿಗೆ ಅನುಗುಣವಾಗಿ ಇಲ್ಲದಿದ್ದರೆ, ಅದಕ್ಕೆ ಶಾಸನಬದ್ಧ ಅಥವಾ ಆಡಳಿತಾತ್ಮಕ ಅನುಮೋದನೆ ನೀಡಬಾರದು' ಎಂದು ಪ್ರಧಾನಿ ಅವರಲ್ಲಿ ಒತ್ತಾಯಿಸಿದ್ದಾರೆ.

## ❖ ಮಹದಾಯಿ: ಪ್ರಕರಣ ವಾಪಸ್‌ಗೆ ರಾಜ್ಯ ಒಲವು- ಸಚಿವ ಸುಳಿವು

- ಮಹದಾಯಿ ಯೋಜನೆಗೆ ಗೋವಾ ಪಿಸಿಸಿಎಫ್ (ವನ್ಯಜೀವಿ) ನೋಟಿಸ್ ನೀಡಿರುವುದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಹೂಡಿರುವ ದಾವೆಯನ್ನು ವಾಪಸ್ ಪಡೆಯಲು ಕರ್ನಾಟಕ ಸರ್ಕಾರ ಒಲವು ತೋರಿದೆ.
- ಮಂಗಳವಾರ ಇಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಜಲಸಂಪನ್ಮೂಲ ಸಚಿವ ರಾಮಲಿಂಗಾ ರೆಡ್ಡಿ, ಈ ಬಗ್ಗೆ ಸುಳಿವು ನೀಡಿದರು.
- ಸುಪ್ರೀಂ ಕೋರ್ಟ್‌ನಲ್ಲಿರುವ ಪ್ರಕರಣ ಇತ್ಯರ್ಥವಾದ ಬಳಿಕವಷ್ಟೇ ಮಹದಾಯಿಯ ಬಂಡೂರಾ ನಾಲಾ ತಿರುವು ಯೋಜನೆಗೆ ಒಪ್ಪಿಗೆ ನೀಡುವುದಾಗಿ ಕೇಂದ್ರ ಅರಣ್ಯ ಹಾಗೂ ಪರಿಸರ ಸಚಿವಾಲಯವು ರಾಜ್ಯ ಸರ್ಕಾರಕ್ಕೆ ಇತ್ತೀಚೆಗೆ ಪತ್ರ ಬರೆದಿತ್ತು.
- 'ಅರೆನ್ಯಾಯಿಕ ಪ್ರಾಧಿಕಾರವಾಗಿರುವ ಪಿಸಿಸಿಎಫ್ ಅವರು ರಾಜ್ಯಕ್ಕೆ ಮೂರು ವರ್ಷಗಳ ಹಿಂದೆ ನೋಟಿಸ್ ನೀಡಿದ್ದರು. ಇದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಬೇಕೆಂದು ಆಗಿನ ಸಚಿವರು ನಿರ್ದೇಶನ ನೀಡಿದ್ದರು. ಅಂದಿನ ಸನ್ನಿವೇಶಕ್ಕೆ ಈ ತೀರ್ಮಾನ ಸರಿಯಾಗಿತ್ತು. ಸುಪ್ರೀಂ ಕೋರ್ಟ್‌ನಲ್ಲಿ ಪ್ರಕರಣ ಇರುವುದರಿಂದ ಅನುಮತಿ ನೀಡಲು ಸಾಧ್ಯವಿಲ್ಲ ಎಂದು ಕೇಂದ್ರ ಈಗ ಉತ್ತರ ನೀಡಿದೆ. ಈ ಬಗ್ಗೆ ಮುಖ್ಯಮಂತ್ರಿ ಅವರೊಂದಿಗೆ ಸಮಾಲೋಚಿಸಿ ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗುವುದು' ಎಂದು ಅವರು ಸ್ಪಷ್ಟಪಡಿಸಿದರು.
- 'ಭದ್ರಾ ಮೇಲ್ದಂಡೆ ಯೋಜನೆ ಹಾಗೂ ಎತ್ತಿನಹೊಳೆ ಯೋಜನೆಯನ್ನು 2028ರೊಳಗೆ ಪೂರ್ಣಗೊಳಿಸಲಾಗುವುದು. ಮೇಕೆದಾಟು ಯೋಜನೆಯ ವಿಸ್ತೃತ ಯೋಜನಾ ವರದಿಯಲ್ಲಿ ಕೆಲವು ಸಣ್ಣಪುಟ್ಟ ಬದಲಾವಣೆ ಮಾಡಿ ಕೇಂದ್ರ ಜಲ ಆಯೋಗಕ್ಕೆ ಸಲ್ಲಿಸಲಾಗಿದೆ. ಈ ಯೋಜನೆಗೆ ಕೇಂದ್ರದಿಂದ ಶೀಘ್ರ ಒಪ್ಪಿಗೆ ಸಿಗುವ ವಿಶ್ವಾಸ ಇದೆ' ಎಂದು ಅವರು ತಿಳಿಸಿದರು.

## ❖ ಜನನ-ಮರಣ ನೋಂದಣಿ: ವಿಳಂಬ ಮಾಡಿದರೆ ಸಂಕಷ್ಟ

- ಜನನ ಅಥವಾ ಮರಣ ನೋಂದಣಿ ಕಾರ್ಯ ವಿಳಂಬ ಮಾಡಿದರೆ, ಮುಂದೆ ಈ ಪ್ರಕ್ರಿಯೆ ಹೆಚ್ಚು ಕಠಿಣವಾಗಲಿದೆ. ಈ ಸಂಬಂಧ ಹೊಸ ಮಸೂದೆ ಜಾರಿಗೆ ಸರ್ಕಾರ ಸಿದ್ಧತೆ ನಡೆಸಿದೆ.
- ಎರಡು ವರ್ಷಗಳ ನಂತರ ನೋಂದಾಯಿಸಲು ಮುಂದಾದರೆ, ಪ್ರಥಮ ದರ್ಜೆ ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ಅನುಮತಿ, ಒಂದರಿಂದ ಎರಡು ವರ್ಷಗಳ ನಡುವಿನ ಅವಧಿಯಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟ್, ಉಪ ವಿಭಾಗೀಯ ಮ್ಯಾಜಿಸ್ಟ್ರೇಟ್ ಅಥವಾ ಕಾರ್ಯ ನಿರ್ವಾಹಕ ಮ್ಯಾಜಿಸ್ಟ್ರೇಟ್ ಅನುಮೋದನೆ ಅಗತ್ಯ. ಎರಡೂ ಸಂದರ್ಭಗಳಲ್ಲಿ, ನಿಯೋಜಿತ ಅಧಿಕಾರಿ ಜನನ ಅಥವಾ ಮರಣದ ಸತ್ಯಾಸತ್ಯತೆ ಪರಿಶೀಲಿಸಬೇಕಾಗುತ್ತದೆ.

## ❖ ತಮಿಳುನಾಡಿಗೆ ಪ್ರತಿದಿನ 3,500 ಕ್ಯುಸೆಕ್ ನೀರು ಹರಿಸಲು ಶಿಫಾರಸು: ಮತ್ತೆ ಕಾವೇರಿ ಸಂಕಟ

- ಕರ್ನಾಟಕದ ಮುಕ್ಕಾಲು ಭಾಗದಲ್ಲಿ ಬರದ ಛಾಯೆ ಆವರಿಸಿರುವ ಹೊತ್ತಿನಲ್ಲೇ, ತಮಿಳುನಾಡಿಗೆ ಕರ್ನಾಟಕ ಪ್ರತಿದಿನ 3,500 ಕ್ಯುಸೆಕ್ ಕಾವೇರಿ ನೀರನ್ನು ಹರಿಸಬೇಕು ಎಂದು ಕಾವೇರಿ ನೀರು ನಿಯಂತ್ರಣ ಸಮಿತಿ (ಸಿಡಬ್ಲ್ಯು ಆರ್‌ಸಿ) ಮಂಗಳವಾರ ಶಿಫಾರಸು ಮಾಡಿದೆ. ಸಮಿತಿಯ ಈ ತೀರ್ಮಾನದಿಂದಾಗಿ ರಾಜ್ಯ ಸರ್ಕಾರಕ್ಕೆ ಆಘಾತ ಉಂಟಾಗಿದೆ.
- 'ಮುಂಗಾರು ಆರಂಭವಾಗಿ ಎರಡು ತಿಂಗಳು ಕಳೆದರೂ ಕಾವೇರಿ ಜಲಾನಯನ ಪ್ರದೇಶದ ನಾಲ್ಕು ಜಲಾಶಯಗಳು ಅರ್ಧದಷ್ಟೂ ಭರ್ತಿಯಾಗಿಲ್ಲ. ಇಂತಹ ಸನ್ನಿವೇಶದಲ್ಲಿ ತಮಿಳುನಾಡಿಗೆ ನೀರು ಬಿಡುಗಡೆ ಮಾಡಲು ಸಾಧ್ಯವಿಲ್ಲ' ಎಂದು ಸ್ಪಷ್ಟಪಡಿಸಿರುವ ಕರ್ನಾಟಕ ಸರ್ಕಾರ, ಸಮಿತಿಯ ಶಿಫಾರಸಿನ ವಿರುದ್ಧ ಕಾವೇರಿ ನೀರು ನಿರ್ವಹಣಾ (ಸಿಡಬ್ಲ್ಯುಎಂಎ) ಮೇಲ್ಮನವಿ ಸಲ್ಲಿಸುವುದಾಗಿ ಪ್ರಕಟಿಸಿದೆ.

Dr Rajkumar IAS/KAS Academy

## ❖ 'ಬೆಂಗಳೂರಿನಲ್ಲಿ ಲ್ಯಾಂಕಾಸ್ಟರ್ ವಿ.ವಿ ಕ್ಯಾಂಪಸ್"

- ಯುನೈಟೆಡ್ ಕಿಂಗ್‌ಡಮ್‌ನ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ ಒಂದಾಗಿರುವ ಮತ್ತು ರಸೆಲ್ ಗ್ರೂಪ್‌ನ ಲ್ಯಾಂಕಾಸ್ಟರ್ ವಿಶ್ವವಿದ್ಯಾಲಯವು ಬೆಂಗಳೂರಿನಲ್ಲಿ ತನ್ನ ಕ್ಯಾಂಪಸ್ ಆರಂಭಿಸಲು ಆಸಕ್ತಿ ತೋರಿದೆ.
- ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರನ್ನು ಮಂಗಳವಾರ ಭೇಟಿ ಮಾಡಿದ ಲ್ಯಾಂಕಾಸ್ಟರ್ ವಿಶ್ವವಿದ್ಯಾಲಯದ ಅಸೋಸಿಯೇಟ್ ಡೀನ್ ಮಾರ್ಕ್ ಸ್ಟೀವನ್‌ಸನ್ ನೇತೃತ್ವದ ಉನ್ನತ ಮಟ್ಟದ ಪ್ರತಿನಿಧಿಗಳು ಈ ಕುರಿತು ಮಾತುಕತೆ ನಡೆಸಿದರು.
- ಸಭೆಯ ಕುರಿತು ಮಾಹಿತಿ ನೀಡಿರುವ ಎಂ.ಬಿ. ಪಾಟೀಲ ಅವರು, 'ಮುಂದಿನ ದಿನಗಳಲ್ಲಿ ಕ್ವಿನ್ ಸಿಟಿಯಲ್ಲಿ ಈ ವಿಶ್ವವಿದ್ಯಾಲ ಯವು ತನ್ನ ಕ್ಯಾಂಪಸ್ ತೆರೆಯಲಿದೆ' ಎಂದಿದ್ದಾರೆ.
- 'ಈ ವಿಶ್ವವಿದ್ಯಾಲಯವು ಜಾಗತಿಕ ಮಟ್ಟದಲ್ಲಿ 164ನ ಯಾಂಕ್ ಹೊಂದಿದ್ದು, ಕ್ಯೂಎಸ್ ಶ್ರೇಯಾಂಕದಲ್ಲಿ 5-ಸ್ಟಾರ್ ಸ್ಥಾನಮಾನ ಹೊಂದಿದೆ. ವಿಶ್ವವಿದ್ಯಾಲಯ ಧನಸಹಾಯ ಆಯೋಗವು ವಿದೇಶಿ ವಿಶ್ವವಿದ್ಯಾಲಯಗಳಿಗೆ ನಿಗದಿಪಡಿಸಿರುವ ಮಾನದಂಡಗಳಿಗೆ ಅನುಗುಣವಾಗಿ ತನ್ನ ಕ್ಯಾಂಪಸ್ ಅನ್ನು ತೆರೆಯುತ್ತಿದೆ' ಎಂದು ವಿವರಿಸಿದ್ದಾರೆ.
- 'ಬೆಂಗಳೂರು ಕ್ಯಾಂಪಸ್‌ನಲ್ಲಿ ಈ ವಿಶ್ವವಿದ್ಯಾಲಯವು ಬಿಸಿನೆಸ್, ಮ್ಯಾನೇಜ್‌ಮೆಂಟ್ ಮತ್ತು ಕಂಪ್ಯೂಟರಿಂಗ್ ವಿಷಯಗಳಲ್ಲಿ ಪದವಿ ಕೋರ್ಸ್ ಆರಂಭಿಸುತ್ತಿದೆ. ಯುನೈಟೆಡ್ ಕಿಂಗ್‌ಡಮ್‌ನಲ್ಲಿ ಅನುಸರಿಸುವ ಪಠ್ಯಕ್ರಮವನ್ನೇ ಇಲ್ಲಿಯೂ ಇಟ್ಟುಕೊಳ್ಳಲಿದೆ. ಇದರಿಂದ ವಿದ್ಯಾರ್ಥಿಗಳಿಗೆ ಹೆಚ್ಚಿನ ಅವಕಾಶ ಸಿಗಲಿದೆ' ಎಂದು ಪಾಟೀಲ ಅವರು ತಿಳಿಸಿದ್ದಾರೆ.

Dr. Rajkumar IAS/KAS Academy

# ಎನ್‌ಟಿಎ ಸುಧಾರಣೆ ಅಂದು ಸಮಿತಿ ಇಂದು ಕಾರ್ಯಪಡೆ


'ನೀಟ್' ಪ್ರಶ್ನೆಪತ್ರಿಕೆ ಸೋರಿಕೆ ತಡೆಯಲು ಮತ್ತು ಎನ್‌ಟಿಎ ಕಾರ್ಯಶೈಲಿ ಉತ್ತಮಪಡಿಸಲು ಈ ಹಿಂದೆಯೂ ಕೇಂದ್ರ ಸರ್ಕಾರವು ಸಮಿತಿಯೊಂದನ್ನು ರಚಿಸಿತ್ತು. ಆ ಸಮಿತಿಯು 2024ರಲ್ಲೇ ವರದಿಯನ್ನು ಸಲ್ಲಿಸಿತ್ತು. ಜತೆಗೆ, ಶಿಕ್ಷಣ ಇಲಾಖೆಗೆ ಸಂಬಂಧಿಸಿದ ರಾಜ್ಯಸಭೆಯ ಸಂಸದೀಯ ಸ್ಥಾಯಿ ಸಮಿತಿಯೂ ಎನ್‌ಟಿಎಯಲ್ಲಿ ಹಲವು ಬದಲಾವಣೆಗಳಾಗಬೇಕಿದೆ ಎಂದು ತನ್ನ ವರದಿಯಲ್ಲಿ ಉಲ್ಲೇಖಿಸಿತ್ತು. ಈ ಪೈಕಿ ಹಲವು ಶಿಫಾರಸುಗಳನ್ನು ಜಾರಿಗೊಳಿಸಲಾಗಿದೆ ಎಂದು ಕೇಂದ್ರ ಸರ್ಕಾರ ಪ್ರತಿಪಾದಿಸಿದೆ. ಅದರ ನಂತರವೂ ನೀಟ್ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಮರುಪರೀಕ್ಷೆ ಮಾಡಬೇಕಾದ ಸ್ಥಿತಿ ಏಕೆ ಉದ್ಭವಿಸಿತು ಎನ್ನುವ ಪ್ರಶ್ನೆಗೆ ಕೇಂದ್ರ ಸರ್ಕಾರವು ಉತ್ತರ ಹುಡುಕಬೇಕಿದೆ

ಪ್ರಜಾವಾಣಿ ವಾರ್ತೆ

ನೀಟ್ ಪ್ರಶ್ನೆಪತ್ರಿಕೆಗಳು ಸೋರಿಕೆಯಾಗಿ, ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯು (ಎನ್‌ಟಿಎ) ಇತಿಹಾಸದಲ್ಲಿ ಮೊದಲ ಬಾರಿಗೆ ಮರುಪರೀಕ್ಷೆ ನಡೆಸಿತು. ಈ ಸಂಬಂಧ ದೆಹಲಿಯ ಜಂತರ್ ಮಂತರ್, ಬೆಂಗಳೂರು ಸೇರಿದಂತೆ ದೇಶದ ಹಲವೆಡೆ ಪ್ರತಿಭಟನೆಗಳು ನಡೆದು, ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಿದ್ದೂ ಆಯಿತು. ಯುವಜನರ ಆಕ್ರೋಶ ತಣಿಸಲು ಎಂಬಂತೆ ಕೇಂದ್ರ ಸರ್ಕಾರವು ಎನ್‌ಟಿಎ ಪರೀಕ್ಷಾ ವ್ಯವಸ್ಥೆಯ ಸುಧಾರಣೆಗೆ ನಂದನ್ ನಿಲೇಕಣಿ ನೇತೃತ್ವದಲ್ಲಿ ಉನ್ನತಾಧಿಕಾರದ ಕಾರ್ಯಪಡೆ ರಚಿಸಿದೆ. ಗಮನಾರ್ಹ ವಿಚಾರವೇನೆಂದರೆ, ಇಂಥದ್ದೇ ಉದ್ದೇಶಗಳಿಗಾಗಿ ಎರಡು ವರ್ಷಗಳ ಹಿಂದೆ ಕೇಂದ್ರವು ಸಮಿತಿಯೊಂದನ್ನು ರಚಿಸಿತ್ತು ಮತ್ತು ಅದು ವರದಿಯನ್ನೂ ನೀಡಿತ್ತು.

ಈ ವರ್ಷದಂತೆ 2024ರಲ್ಲಿಯೂ ನೀಟ್‌ನಲ್ಲಿ ವ್ಯಾಪಕ ಅಕ್ರಮ ನಡೆದಿದೆ ಎನ್ನುವ ಆರೋಪಗಳು ವ್ಯಕ್ತವಾಗಿದ್ದವು. ಜಾರ್ಖಂಡ್‌ನಲ್ಲಿ ಪರೀಕ್ಷೆಗೆ ಮುನ್ನವೇ ಪ್ರಶ್ನೆಪತ್ರಿಕೆ ಸೋರಿಕೆಯಾಗಿತ್ತು. ಮರುಪರೀಕ್ಷೆ ನಡೆಸಬೇಕು ಎನ್ನುವ ಒತ್ತಾಯ ಕೇಳಿಬಂದಿತ್ತು. ಪ್ರಕರಣವನ್ನು ಸಿಬಿಐಗೆ ವಹಿಸಲಾಗಿತ್ತು. ಸಿಬಿಐ 45 ಮಂದಿ ವಿರುದ್ಧ ಚಾರ್ಜ್‌ಶೀಟ್ ದಾಖಲಿಸಿತ್ತು. ಆದರೆ, ದೇಶದಾದ್ಯಂತ ಮರುಪರೀಕ್ಷೆ ನಡೆಸುವ ಅಗತ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಆದೇಶಿಸಿದ ನಂತರ ಆರು ನಗರಗಳಲ್ಲಿ ಮಾತ್ರ ಮರುಪರೀಕ್ಷೆ ನಡೆಸಲಾಗಿತ್ತು.

**ರಾಧಾಕೃಷ್ಣನ್ ಸಮಿತಿ:** ನೀಟ್ ವ್ಯವಸ್ಥೆಯ ಪಾರದರ್ಶಕತೆ ಮತ್ತು ಸುರಕ್ಷತೆಯ ಬಗ್ಗೆ ಪ್ರಶ್ನೆಗಳು ಕೇಳಿಬಂದಿದ್ದರಿಂದ ಕೇಂದ್ರ ಸರ್ಕಾರವು ಎನ್‌ಟಿಎ ಸುಧಾರಣೆಗಾಗಿ ಇಸ್ರೊ ಮಾಜಿ ಅಧ್ಯಕ್ಷ ಕೆ.ರಾಧಾಕೃಷ್ಣನ್ ನೇತೃತ್ವದಲ್ಲಿ 2024ರ ಜೂನ್ 22ರಂದು ಉನ್ನತಾಧಿಕಾರ ಸಮಿತಿ ರಚಿಸಿತ್ತು. ಸಮಿತಿಯು 2024ರ ಅ. 21ರಂದು ಕೇಂದ್ರಕ್ಕೆ ವರದಿ



ಸಲ್ಲಿಸಿತ್ತು. ಇಡೀ ಪರೀಕ್ಷೆ ವ್ಯವಸ್ಥೆಯಲ್ಲಿಯೇ ದೋಷಗಳಿವೆ ಎಂದು ಹೇಳಿದ್ದ ಸಮಿತಿಯು ಎನ್‌ಟಿಎಯ ಸಂಪೂರ್ಣ ಪುನರ್‌ರಚನೆಗೆ ಶಿಫಾರಸು ಮಾಡಿತ್ತು. ಪ್ರಶ್ನೆಪತ್ರಿಕೆಗಳ ಮುದ್ರಣ, ಸಾಗಣೆ, ಅಭ್ಯರ್ಥಿ ತಪಾಸಣೆ, ಪರೀಕ್ಷಾ ಕೇಂದ್ರದ ನಿರ್ವಹಣೆ, ದೂರುಗಳ ಪರಿಹಾರ ಹೀಗೆ ಪ್ರತಿಯೊಂದು ಹಂತದಲ್ಲೂ ಸಮಸ್ಯೆಗಳಿವೆ ಎಂದು ಉಲ್ಲೇಖಿಸಿತ್ತು. ತಂತ್ರಜ್ಞಾನದ ಬಳಕೆಯೊಂದರಿಂದಲೇ ಇಡೀ ವ್ಯವಸ್ಥೆ ಸರಿಯಾಗುವುದಿಲ್ಲ ಎಂದಿದ್ದ ಸಮಿತಿ, ಹೊರಗುತ್ತಿಗೆ ಏಜೆನ್ಸಿಗಳ ಮೇಲಿನ ಅವಲಂಬನೆಯನ್ನು ತಪ್ಪಿಸುವುದು ಮುಖ್ಯ ಎಂದಿತ್ತು. ಶಿಫಾರಸುಗಳನ್ನು ಕೇಂದ್ರವು ಜಾರಿ ಮಾಡುವುದನ್ನು ಖಾತರಿಪಡಿಸಿಕೊಳ್ಳಲು ಸಂಚಾಲನಾ ಸಮಿತಿ ನೇಮಿಸುವಂತೆಯೂ ಸೂಚಿಸಿತ್ತು.

ರಾಧಾಕೃಷ್ಣನ್ ಸಮಿತಿಯ ಶಿಫಾರಸುಗಳನ್ನು ಜಾರಿ ಮಾಡಲಾಗುತ್ತಿದ್ದು, ಸಂಚಾಲನಾ ಸಮಿತಿಯು ಅದರ ಉಸ್ತುವಾರಿ ನಡೆಸುತ್ತಿದೆ ಎಂದು ಕೇಂದ್ರವು ಹೇಳಿದೆ. ಸಮಿತಿಯು ಸೂಚಿಸಿದಂತೆ ಹೊಸ ಹುದ್ದೆಗಳ ಸೃಷ್ಟಿ, ರಾಜ್ಯಗಳೊಂದಿಗೆ ಉತ್ತಮ ಸಮನ್ವಯ, ಅಭ್ಯರ್ಥಿಗಳ ತಪಾಸಣೆ ವ್ಯವಸ್ಥೆ ಉತ್ತಮಪಡಿಸಲಾಗಿದೆ ಎಂದು ಹೇಳಿದೆ.

**ಸಂಸದೀಯ ಸ್ಥಾಯಿ ಸಮಿತಿ ವರದಿ:** ನೀಟ್ ಅಕ್ರಮಗಳನ್ನು ತಡೆಯುವುದಕ್ಕೆ ಸಂಬಂಧಿಸಿದಂತೆ ಕೇಂದ್ರದ ಶಿಕ್ಷಣ, ಮಹಿಳೆ, ಮಕ್ಕಳು ಮತ್ತು ಯುವಜನರಿಗೆ ಸಂಬಂಧಿಸಿದ ರಾಜ್ಯಸಭೆಯ ಸಂಸದೀಯ ಸ್ಥಾಯಿ ಸಮಿತಿಯು (2025–26) ತನ್ನ ವರದಿಯಲ್ಲೂ ಹಲವು ಶಿಫಾರಸುಗಳನ್ನು ಮಾಡಿತ್ತು. ಎನ್‌ಟಿಎ ಸೇರಿದಂತೆ ದೇಶದ ಪರೀಕ್ಷಾ ವ್ಯವಸ್ಥೆಯಲ್ಲಿ ಆಗಬೇಕಾದ ಕೆಲಸಗಳನ್ನು ಪಟ್ಟಿ ಮಾಡಿತ್ತು. ಅಕ್ರಮ ಎಸಗಿದ ಕಂಪನಿಗಳ ರಾಷ್ಟ್ರ ಮಟ್ಟದ ಕಪ್ಪುಪಟ್ಟಿ ಸಿದ್ಧಪಡಿಸಬೇಕು ಎಂದಿತ್ತು. ಎನ್‌ಟಿಎ ಪ್ರತಿವರ್ಷ ಹಣಕಾಸು ಲೆಕ್ಕಪತ್ರ ಪರಿಶೋಧನಾ ವರದಿಯನ್ನು ಸಂಸತ್‌ಗೆ ಸಲ್ಲಿಸುತ್ತಿಲ್ಲ ಎಂದೂ ಆಕ್ಷೇಪಿಸಿತ್ತು.

ಎಲ್ಲಕ್ಕಿಂತ ಮುಖ್ಯವಾಗಿ, ಕೆ.ರಾಧಾಕೃಷ್ಣನ್ ಅವರ ನೇತೃತ್ವದ ಸಮಿತಿಯ ಶಿಫಾರಸುಗಳ ಅನ್ವಯ ಎನ್‌ಟಿಎ ಸುಧಾರಣೆಗೆ ಕ್ರಮಗಳನ್ನು ಕೈಗೊಂಡಿದ್ದರೂ, ಪರೀಕ್ಷೆಗಳಲ್ಲಿ ಅಕ್ರಮಗಳು ಏಕೆ ನಡೆಯುತ್ತಲೇ ಇವೆ ಎಂದು ಸಂಸದೀಯ ಸಮಿತಿಯು ತೀವ್ರವಾಗಿ ಆಕ್ಷೇಪಿಸಿತ್ತು. ಶಿಫಾರಸುಗಳ ಜಾರಿಯ ನಂತರವೂ 'ಪ್ರಶ್ನೆಪತ್ರಿಕೆಗಳು ಸೋರಿಕೆಯಾಗುತ್ತಲೇ ಇದ್ದು, ಪರೀಕ್ಷೆಗಳು ರದ್ದಾಗಿವೆ. ಇದರಿಂದ ವಿದ್ಯಾರ್ಥಿಗಳು ಆತಂಕಕ್ಕೆ ಒಳಗಾಗುತ್ತಿದ್ದಾರೆ' ಎಂದು ಉಲ್ಲೇಖಿಸಿತ್ತು. ಸುಧಾರಣೆ ಕ್ರಮಗಳ ಅನುಷ್ಠಾನಕ್ಕೆ ನೀಲನಕ್ಷೆ ರೂಪಿಸಿ, ಕಾಲಮಿತಿಯಲ್ಲಿ ಅವುಗಳನ್ನು ಪೂರ್ಣಗೊಳಿಸಬೇಕು, ಈ ಬಗೆಗಿನ ವಿವರಗಳನ್ನು ಪ್ರಕಟಿಸಬೇಕು ಎಂದೂ ಸೂಚಿಸಿತ್ತು.

ಸಂಸದೀಯ ಸ್ಥಾಯಿ ಸಮಿತಿಯ ವರದಿಯಲ್ಲಿದ್ದ ಆತಂಕ ನಿಜವಾಗಿದೆ. ಮತ್ತೊಮ್ಮೆ ಪ್ರಶ್ನೆಪತ್ರಿಕೆ ಸೋರಿಕೆಯಾಗಿ, ಅದರ ಸುತ್ತ ಭಾರಿ ಪ್ರತಿಭಟನೆಗಳು ನಡೆದು, ಸಚಿವರ ತಲೆದಂಡವೂ ಆಗಿದೆ. ಅದರ ನಂತರ ಕೇಂದ್ರ ಸರ್ಕಾರ ಮತ್ತೊಂದು ಕಾರ್ಯಪಡೆಯನ್ನೂ ರಚಿಸಿದೆ. ಉದ್ಯಮಿ ನಂದನ್ ನಿಲೇಕಣಿ ಅವರನ್ನು ಎನ್‌ಟಿಎ ಸುಧಾರಣಾ ಕಾರ್ಯಪಡೆಯ ಮುಖ್ಯಸ್ಥರನ್ನಾಗಿ ಮಾಡಿರುವುದಕ್ಕೆ ಕೆಲವು ವಲಯಗಳಲ್ಲಿ ವಿರೋಧವೂ ವ್ಯಕ್ತವಾಗಿದೆ. ಸಮಿತಿಗಳನ್ನು ರಚಿಸಿದರಷ್ಟೇ ಸಾಲದು, ಅವುಗಳ ಶಿಫಾರಸುಗಳನ್ನು ಪೂರ್ಣಪ್ರಮಾಣದಲ್ಲಿ ಜಾರಿ ಮಾಡಿದರೆ ಎನ್‌ಟಿಎ ಮತ್ತು ಅದು ನಡೆಸುವ ಪರೀಕ್ಷೆಗಳು ಸರಿದಾರಿಗೆ ಬಂದಾವು ಎನ್ನುವುದು ಶಿಕ್ಷಣ ತಜ್ಞರ ಅಭಿಮತ.

ಆಧಾರ: ಕೆ.ರಾಧಾಕೃಷ್ಣನ್ ನೇತೃತ್ವದ ಸಮಿತಿಯ ವರದಿ, ಶಿಕ್ಷಣ ಇಲಾಖೆಗೆ ಸಂಬಂಧಿಸಿದ ಸಂಸದೀಯ ಸ್ಥಾಯಿ ಸಮಿತಿ ವರದಿ, ಸಂಸತ್‌ನಲ್ಲಿ ಸಚಿವರ ಉತ್ತರ,

## ಸಮಿತಿಯ ಶಿಫಾರಸುಗಳೇನು?

ಎನ್‌ಟಿಎ ಮತ್ತು ನೀಟ್ ಪ್ರಕ್ರಿಯೆಗಳನ್ನು ಸುಧಾರಿಸುವುದಕ್ಕಾಗಿ ರಾಧಾಕೃಷ್ಣನ್ ಸಮಿತಿಯು ಒಟ್ಟು 101 ಶಿಫಾರಸುಗಳನ್ನು ಮಾಡಿದ್ದರೂ, ಅವುಗಳು ಪ್ರಮುಖವಾಗಿ 17 ಶಿಫಾರಸುಗಳ ವ್ಯಾಪ್ತಿಯಲ್ಲಿ ಬರುತ್ತವೆ. ಅವುಗಳಲ್ಲಿ ಪ್ರಮುಖವಾದವು ಇಂತಿವೆ:

**1. ಎನ್‌ಟಿಎಯನ್ನು ಸಂಪೂರ್ಣವಾಗಿ ಪುನರ್‌ರಚಿಸಬೇಕು**

ಎ) ಪರೀಕ್ಷೆಯ ಪರಿಶೋಧನೆ, ನೈತಿಕತೆ ಮತ್ತು ಪಾರದರ್ಶಕತೆ, ನಾಮನಿರ್ದೇಶನ ಮತ್ತು ಸಿಬ್ಬಂದಿ ಸ್ಥಿತಿಗಳು ಹಾಗೂ ಪಾಲುದಾರರ ಸಂಬಂಧಗಳ ಮೇಲ್ವಿಚಾರಣೆಯನ್ನು ನಡೆಸಲು ಮೂರು ಪ್ರತ್ಯೇಕ ಉಪಸಮಿತಿಗಳನ್ನೊಳಗೊಂಡ ಅತ್ಯುನ್ನತ ಮತ್ತು ಉತ್ತರದಾಯಿಯಾದ ಆಡಳಿತ ಮಂಡಳಿ ರಚಿಸಬೇಕು

ಬಿ) ಎನ್‌ಟಿಎಯಲ್ಲಿ ಕಾಯಂ ಸಿಬ್ಬಂದಿಯ ಅಗತ್ಯವಿದೆ. ಭವಿಷ್ಯದಲ್ಲಿ ಪರೀಕ್ಷಾ ಪ್ರಕ್ರಿಯೆಯನ್ನು ಯಶಸ್ವಿಯಾಗಿ ನಿಭಾಯಿಸಲು ಆಂತರಿಕವಾಗಿ ಆಯಾ ಕ್ಷೇತ್ರಕ್ಕೆ ಸಂಬಂಧಿಸಿದ ಪರಿಣತ ಮತ್ತು ಕೌಶಲಯುಕ್ತ ಮಾನವ ಸಂಪನ್ಮೂಲ ಹಾಗೂ ಒಂದು ಉನ್ನತ ತಂಡದ ಅಗತ್ಯವಿದೆ

ಸಿ) ಸಂಸ್ಥೆಯು ಮೊದಲು ಪ್ರವೇಶ ಪರೀಕ್ಷೆಗಳನ್ನು ನಡೆಸುವುದಕ್ಕೆ ಗಮನಹರಿಸಬೇಕು. ಅದರ ಸಾಮರ್ಥ್ಯವನ್ನು ಹೆಚ್ಚಿಸಿದ ನಂತರವಷ್ಟೇ ಬೇರೆ ಪರೀಕ್ಷೆಗಳನ್ನೂ ನಡೆಸುವುದರ ಬಗ್ಗೆ ಅದು ಯೋಚಿಸಬಹುದು

**2) ಪರೀಕ್ಷೆ ನಡೆಸಲು ಕೋರಿರುವ ಪ್ರತಿಯೊಂದು ಸಂಸ್ಥೆಯೂ (ಉದಾ: ಯುಜಿಸಿ, ಸಿಎಸ್‌ಐಆರ್) ಎನ್‌ಟಿಎಯೊಂದಿಗೆ ಜೊತೆಯಾಗಿ ಕೆಲಸ ಮಾಡಬೇಕು. ಪರೀಕ್ಷೆ ನಡೆಸುವ ಸಂದರ್ಭದಲ್ಲಿ ಎನ್‌ಟಿಎ ಮತ್ತು ಪರೀಕ್ಷೆ ನಡೆಸಲು ಕೋರಿರುವ ಸಂಸ್ಥೆಗಳು ತಾವು ನಿರ್ವಹಿಸುವ ಪಾತ್ರಗಳನ್ನು ಒಪ್ಪಂದ ಮತ್ತು ಸಲಹಾ ಮಂಡಳಿಯನ್ನು ರಚಿಸುವುದರ ಮೂಲಕ ಸ್ಪಷ್ಟವಾಗಿ ವ್ಯಾಖ್ಯಾನಿಸಬೇಕು**

**3) ಪರೀಕ್ಷಾ ಆಡಳಿತ ವ್ಯವಸ್ಥೆಯ ನಿರ್ವಹಣೆಗಾಗಿ ಎನ್‌ಟಿಎಯು ರಾಜ್ಯ ಸರ್ಕಾರ ಮತ್ತು ಜಿಲ್ಲಾಡಳಿತಗಳೊಂದಿಗೆ ಸಾಂಸ್ಥಿಕವಾದ ಸಂಪರ್ಕವನ್ನು ಇಟ್ಟುಕೊಳ್ಳಬೇಕು. ನಿರ್ದಿಷ್ಟ ಜವಾಬ್ದಾರಿಗಳನ್ನು ನಿಗದಿಪಡಿಸಿ ಕಾರ್ಯರೂಪಕ್ಕೆ ತರಲು ರಾಜ್ಯ ಮತ್ತು ಜಿಲ್ಲಾ ಮಟ್ಟಗಳಲ್ಲಿ ಸಮನ್ವಯ ಸಮಿತಿಗಳನ್ನು ರಚಿಸಬೇಕು**

**4) ಪರೀಕ್ಷೆಗೆ ಸಂಬಂಧಿಸಿದಂತೆ ಸರ್ಕಾರದ ಹಂತದಲ್ಲಿ ಹೊಸ ಮೂರು ನೀತಿಗಳನ್ನು ಅನುಷ್ಠಾನಗೊಳಿಸಬೇಕು**

ಎ) ಕೆಲವು ದಿನಗಳಿಂದ–ಕೆಲವು ವಾರಗಳವರೆಗೆ ವಿಸ್ತರಿಸಿದ ಬಹುಅವಧಿಯ ಪರೀಕ್ಷಾ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಬಹುದು. ನೋಂದಣಿ ಮಾಡಿಕೊಂಡ ಅಭ್ಯರ್ಥಿಗಳ ಸಂಖ್ಯೆ ಹೆಚ್ಚಾದ ಸಂದರ್ಭದಲ್ಲಿ ಇದನ್ನು ಅನುಷ್ಠಾನಕ್ಕೆ ತರಬಹುದು

ಬಿ) ನೀಟ್–ಪದವಿ ಪ್ರವೇಶಾತಿಗಾಗಿ ಬಹು ಹಂತಗಳ ಪರೀಕ್ಷಾ ವಿಧಾನದ ಸಾಧ್ಯತೆಯನ್ನು ಪರಿಗಣಿಸಬಹುದಾಗಿದೆ

ಸಿ) ಸಿಯುಇಟಿ ಪ್ರವೇಶ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಹಲವು ಪ್ರತ್ಯೇಕ ವಿಷಯಗಳ ಬದಲು ಸಂಬಂಧಿಸಿದ ವಿಷಯಗಳನ್ನೆಲ್ಲ ಒಂದು ಕ್ಲಸ್ಟರ್ ಆಗಿ ಪರಿಗಣಿಸುವ ಅಗತ್ಯ ಇದೆ

**5). ಪರೀಕ್ಷಾ ಕೇಂದ್ರ ಹಂಚಿಕೆ ನೀತಿ ಜಾರಿಗೆ ತರಬೇಕು. ಅಭ್ಯರ್ಥಿಗಳಿಗೆ ಅವರು ನೆಲಸಿರುವ ಜಿಲ್ಲೆಯಲ್ಲೇ ಇರುವ ಪರೀಕ್ಷಾ ಕೇಂದ್ರಗಳನ್ನು ಆಯ್ಕೆ ಮಾಡುವ ಅವಕಾಶ ಲಭ್ಯವಿರುವಂತೆ ಆಗಬೇಕು**

**6) ಪೆನ್ನು ಕಾಗದ ಬಳಸಿ ಬರೆಯುವ ಪರೀಕ್ಷೆ (ಪಿಪಿಟಿ) ಮತ್ತು ಕಂಪ್ಯೂಟರ್ ಆಧಾರಿತ ಪರೀಕ್ಷೆಗಳನ್ನು (ಸಿಬಿಟಿ) ನಡೆಸುವಾಗ ನಿಯಮಗಳ ಉಲ್ಲಂಘನೆ ಮತ್ತು ನಕಲು ತಡೆಗೆ ಹಲವು ಕ್ರಮಗಳನ್ನು ಕೈಗೊಳ್ಳಬೇಕು**

**7) ಇಚ್ಛಿಸಿದ ಕೋರ್ಸ್‌ಗೆ ಸೇರಲು ಬಯಸುವ ಅಭ್ಯರ್ಥಿಯಷ್ಟೇ ಪರೀಕ್ಷೆ ಬರೆಯುವುದನ್ನು ಖಾತರಿಪಡಿಸುವುದಕ್ಕಾಗಿ 'ಡಿಜಿ–ಎಕ್ಸಾಮ್' ವ್ಯವಸ್ಥೆಯನ್ನು ಪರಿಚಯಿಸಬೇಕು. ಅಲ್ಲಿ ಅಭ್ಯರ್ಥಿಯ ಗುರುತನ್ನು ದೃಢೀಕರಿಸಲು ಆಧಾರ್, ಬಯೋಮೆಟ್ರಿಕ್ಸ್ ನಂತಹ ಬಹು ಹಂತಗಳನ್ನು ಅಳವಡಿಸಿಕೊಳ್ಳಬೇಕು**

**8) ಪಿಪಿಟಿ ವಿಧಾನದ ಪರೀಕ್ಷೆಯನ್ನೂ ಕಂಪ್ಯೂಟರ್ ನೆರವನ್ನು ಬಳಸಿಕೊಳ್ಳುವ ಹೈಬ್ರೀಡ್ ಪ್ರಕ್ರಿಯೆ (ಸಿಪಿಪಿಟಿ) ಅಳವಡಿಸಿಕೊಳ್ಳಬೇಕು.**

ಅಂದರೆ, ಪರೀಕ್ಷಾ ಕೇಂದ್ರಗಳಲ್ಲಿರುವ ಗೋಪ್ಯ ಸರ್ವರ್‌ಗಳಿಗೆ ಎನ್‌ಸ್ಕ್ರಿಪ್ಟೆಡ್ ಪ್ರಶ್ನೆಪತ್ರಿಕೆಗಳು ಬರುವವರೆಗೆ ಕಂಪ್ಯೂಟರ್ ಆಧಾರಿತ ಪರೀಕ್ಷಾ (ಸಿಬಿಟಿ) ವ್ಯವಸ್ಥೆ ಅಳವಡಿಸಿಕೊಳ್ಳಬೇಕು. ನಂತರ ಪರೀಕ್ಷಾ ಕೇಂದ್ರದಲ್ಲೇ ಪ್ರಶ್ನೆಪತ್ರಿಕೆಗಳನ್ನು ಮುದ್ರಿಸಬೇಕು. ನಂತರ ಪಿಪಿಟಿ ವ್ಯವಸ್ಥೆಯಲ್ಲಿರುವಂತೆ ಪ್ರಶ್ನೆಪತ್ರಿಕೆಗಳನ್ನು ಅಭ್ಯರ್ಥಿಗಳಿಗೆ ವಿತರಿಸಬೇಕು. ಇನ್ನೊಂದು ಭಿನ್ನ ವಿಧಾನದಲ್ಲಿ ಸಿಬಿಟಿ ಮಾದರಿಯಲ್ಲಿ ಪ್ರತಿ ಅಭ್ಯರ್ಥಿಗೂ ಪ್ರಶ್ನೆಪತ್ರಿಕೆ ಕಳುಹಿಸಬಹುದು. ಉತ್ತರ ಬರೆಯಲು ಒಎಂಆರ್ ಹಾಳೆಗಳನ್ನು ಬಳಸಬಹುದು.

**9) ನಂಬಿಕೆಗೆ ಅರ್ಹವಾದ ಉತ್ಸಾಹಿ ವಿಷಯ ತಜ್ಞರನ್ನು ಪಶ್ನೆಪತ್ರಿಕೆ ಸಿದ್ಧಪಡಿಸುವಲ್ಲಿ ತೊಡಗಿಸಿಕೊಳ್ಳಬೇಕು. ಡಿಜಿಟಲ್ ರೂಪದಲ್ಲಿ ಪ್ರಶ್ನೆ ಪತ್ರಿಕೆಗಳನ್ನು ಸುರಕ್ಷಿತವಾಗಿ ಇಟ್ಟುಕೊಳ್ಳಬೇಕು**

**10) ನಿಯಂತ್ರಣ ಕೇಂದ್ರದಲ್ಲಿ ಪ್ರಶ್ನೆಪತ್ರಿಕೆಗಳನ್ನು ಸಂಗ್ರಹಿಸಲು ಸುರಕ್ಷಿತವಾದ ಮತ್ತು ವಿಶ್ವಾಸಾರ್ಹವಾದ ಸವಲತ್ತು ಇರಬೇಕು. ಪರೀಕ್ಷಾ ಕೇಂದ್ರಗಳಿಗೆ ಸುರಕ್ಷಿತವಾಗಿ ಪ್ರಶ್ನೆಪತ್ರಿಕೆ ತಲುಪಿಸುವ ವ್ಯವಸ್ಥೆ ಬೇಕು**

**11) ದೇಶದ ಪ್ರತಿಯೊಂದು ಜಿಲ್ಲೆಯೂ ಕನಿಷ್ಠ ಒಂದು ಸುರಕ್ಷಿತವಾದ ಪಿಪಿಟಿ/ಸಿಬಿಟಿ/ಸಿಪಿಪಿಟಿ ಪರೀಕ್ಷೆ ನಡೆಸುವ ಸಾಮರ್ಥ್ಯವಿರುವ ಪರೀಕ್ಷಾ ಕೇಂದ್ರ ಹೊಂದಿರಬೇಕು**

**12) ಗ್ರಾಮೀಣ ಭಾಗದ, ಕುಗ್ರಾಮಗಳ ಅಭ್ಯರ್ಥಿಗಳಿಗೆ ಪರೀಕ್ಷೆ ಬರೆಯಲು ಸಂಚಾರಿ ಪರೀಕ್ಷಾ ಕೇಂದ್ರಗಳ ಸೌಲಭ್ಯ ಕಲ್ಪಿಸಬೇಕು**

**13) ಎನ್‌ಟಿಎಯು ಕುಂದುಕೊರತೆ, ದೂರು ಸಲ್ಲಿಕೆ ಮತ್ತು ಅವುಗಳನ್ನು ಪರಿಹರಿಸುವ ವ್ಯವಸ್ಥೆಯನ್ನು ಇನ್ನಷ್ಟು ಬಲಪಡಿಸಬೇಕು**

**14) ಪರೀಕ್ಷೆ ನಡೆಸುವ ತಂಡಗಳಿಗೆ ಸಮಗ್ರವಾದ ತರಬೇತಿ ನೀಡಬೇಕು**

Publication Date
29/07/2026

Presented by

## ❖ ಮಾನಹಾನಿ: ₹11 ಕೋಟಿ ಪರಿಹಾರಕ್ಕೆ ಪ್ರಕರಣ ದಾಖಲಿಸಿದ ನಿತಿನ್ ಗಡ್ಕರಿ

- 'ನನಗೆ ಅವಮಾನವಾಗಿದೆ. ಆದ್ದರಿಂದ ₹11 ಕೋಟಿ ಪರಿಹಾರಕ್ಕೆ ನೀಡಬೇಕು' ಎಂದು ಕೇಂದ್ರ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು ಮೆಟಾ, 'ಎಕ್ಸ್' ಮತ್ತು ಗೂಗಲ್ ಸೇರಿದಂತೆ ಹಲವು ಕಂಪನಿಗಳ ವಿರುದ್ಧ ಬಾಂಬೆ ಹೈಕೋರ್ಟ್‌ನಲ್ಲಿ ಮಂಗಳವಾರ ಪ್ರಕರಣ ದಾಖಲಿಸಿದ್ದಾರೆ.

- 'ಇ20 ಯೋಜನೆ ಜಾರಿಗೂ ನನಗೂ ಸಂಬಂಧ ಕಲ್ಪಿಸಿ ಜಾಲತಾಣಗಳಲ್ಲಿ ವಿಡಿಯೊ, ರೀಲ್ಸ್ ಹಂಚಿಕೊಳ್ಳಲಾಗುತ್ತಿದೆ. ಇದರಿಂದ ನನ್ನ ಗೌರವಕ್ಕೆ ಧಕ್ಕೆಯಾಗಿದೆ, ಮಾನಹಾನಿಯಾಗಿದೆ. ಆದ್ದರಿಂದ ಮೆಟಾ, ಗೂಗಲ್ ಸೇರಿ ಹಲವು ಕಂಪನಿಗಳ ಮೇಲೆ ಪ್ರಕರಣ ದಾಖಲಿಸಲು ಅನುಮತಿ ನೀಡಿ' ಎಂದು ಗಡ್ಕರಿ ಅವರು ಸೋಮವಾರ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ಇದಕ್ಕೆ ಕೋರ್ಟ್ ಅನುಮತಿ ನೀಡಿತ್ತು.
- ತನ್ನ ವಿರುದ್ಧ ಮಾನಹಾನಿಕರವಾಗಿರುವ ಸುಮಾರು 24 ಪೋಸ್ಟ್ ಗಳನ್ನು ಗಡ್ಕರಿ ಅವರು ಪಟ್ಟಿ ಮಾಡಿ, ಕೋರ್ಟ್‌ಗೆ ನೀಡಿದ್ದಾರೆ. ಈ ಎಲ್ಲ ಪೋಸ್ಟ್‌ಗಳನ್ನು ಅಳಿಸುವಂತೆ ಆದೇಶ ನೀಡಬೇಕು ಎಂದೂ ಅವರು ಹೈಕೋರ್ಟ್‌ಗೆ ಮನವಿ ಮಾಡಿದ್ದಾರೆ.

ಪ್ರಜಾವಾಣಿ
ಬುಧವಾರ
ಜುಲೈ 29, 2026
10

# ತಂತ್ರಜ್ಞಾನ

# ಸ್ವಾವಲಂಬನೆಯತ್ತ ಇ.ವಿ.ಮೋಟಾರ್



ವಿಮಾಗ್ ಲ್ಯಾಬ್ಸ್ ಅಭಿವೃದ್ಧಿಪಡಿಸಿರುವ ವೊಲೆಕ್ಟ್ರಾ ಇವಿ ಮೋಟಾರ್

• ಇ.ಎಸ್.ಸುಧೀಂದ್ರಪ್ರಸಾದ್

ಆಂಧ್ರಪ್ರದೇಶದ ಶ್ರೀಹರಿಕೋಟಾದಲ್ಲಿರುವ ಸತೀಶ್ ಧವನ್ ಬಾಹ್ಯಾಕಾಶ ಸಂಶೋಧನಾ ಕೇಂದ್ರದಿಂದ ಕಳೆದ ವಾರ 'ಸ್ಕೈರೂಟ್' ಎಂಬ ಭಾರತದ ಬಾಹ್ಯಾಕಾಶ ಸಂಶೋಧನಾ ಸ್ಟಾರ್ಟ್‌ಅಪ್ ಒಂದು 'ವಿಕ್ರಂ-1' ಎಂಬ ಏಳು ಅಂತಸ್ತಿನಷ್ಟು ಎತ್ತರದ ರಾಕೆಟ್ ಅನ್ನು ಪರಿಪಕ್ವವಾಗಿ ಕಕ್ಷೆಗೆ ಸೇರಿಸುವಲ್ಲಿ ಯಶಸ್ವಿಯಾಯಿತು. ಹೊಸ ತಂಡವನ್ನೇ ಕಟ್ಟಿದ್ದ ಸ್ಕೈರೂಟ್ ಈ ರಾಕೆಟ್ ಮೂಲಕ ಹಲವು ಹೊಸ ಸಾಧನೆಗಳನ್ನು ದಾಖಲಿಸಿತು.

ಸ್ಕೈರೂಟ್‌ನ ಈ ಸಾಧನೆಯನ್ನು ಇಡೀ ಜಗತ್ತು ಕೊಂಡಾಡುತ್ತಿರುವ ಹೊತ್ತಿಗೆ ಬೆಂಗಳೂರು ಮೂಲದ ಸ್ಟಾರ್ಟ್‌ಅಪ್ ಕಂಪನಿಯೊಂದು ವಿದ್ಯುತ್ ಚಾಲಿತ ವಾಹನಗಳಲ್ಲಿ ಬಳಸುವ ಮೋಟಾರ್ ಅನ್ನು ಅಭಿವೃದ್ಧಿಪಡಿಸಿದ್ದು, ಇದು ಚೀನಾ ಮೇಲಿನ ಅವಲಂಬನೆಯನ್ನೇ ತಗ್ಗಿಸುವ ಪ್ರಯತ್ನವಾಗಿದೆ. ಈ ಅವಲಂಬನೆಯ ಭಾರದಿಂದ ಪಾರಾಗಲು ಯತ್ನಿಸುತ್ತಿರುವ ಪಾಶ್ಚಾತ್ಯ ರಾಷ್ಟ್ರಗಳು ಇನ್ನಷ್ಟು ಕುತೂಹಲದಿಂದ ಭಾರತದತ್ತ ನಿರೀಕ್ಷೆಯ ನೋಟವನ್ನು ಬೀರಿವೆ.

ಬೆಂಗಳೂರು ಮೂಲದ ವಿಮಾಗ್ ಲ್ಯಾಬ್ಸ್‌ನ ತಂತ್ರಜ್ಞರು ನೈಸರ್ಗಿಕ ಮ್ಯಾಗ್ನೇಟ್‌ಗಳನ್ನು ಅವಲಂಬಿಸದೆ ಹೊಸ ತಲೆಮಾರಿನ ಇವಿ ಮೋಟಾರ್ ಅನ್ನು ಅಭಿವೃದ್ಧಿಪಡಿಸಿದ್ದು, ಈಗ ಎಲ್ಲರ ಗಮನವನ್ನು ಸೆಳೆದಿದೆ. ಕಾರಣವಿಷ್ಟೇ...

ಆಧುನಿಕ ಎಲೆಕ್ಟ್ರಿಕ್ ವಾಹನಗಳು ಸ್ವಯಂಚಾಲಿತವಾಗಿ ಕಾರ್ಯನಿರ್ವಹಿಸುವ ಶಾಶ್ವತ ಮ್ಯಾಗ್ನೆಟ್ ವ್ಯವಸ್ಥೆಯನ್ನು ಬಳಸುತ್ತವೆ. ಇದರಲ್ಲಿ ವಿರಳ ಭೂಧಾತುಗಳಾದ ನಿಯೋಡಿಮಿಯಂ (Nd), ಡೈಸ್ಪ್ರೊಸಿಯಂ (Dy) ಹಾಗೂ ಟರ್ಬಿಯಂ (Tb) ಬಳಕೆಯಾಗುತ್ತದೆ. ಇವುಗಳಿಲ್ಲದೆ ಉತ್ಕೃಷ್ಟ ಗುಣಮಟ್ಟದ ಇವಿ ಮೋಟಾರುಗಳ ಅಭಿವೃದ್ಧಿ ಅಸಾಧ್ಯ. ಈ ವಿರಳ ಭೂಧಾತುಗಳ ಮಾರುಕಟ್ಟೆಯಲ್ಲಿ ಚೀನಾದ್ದೇ ಪಾರುಪತ್ಯ. ಅದರಲ್ಲಿ ಜಗತ್ತಿನ ಇತರ ರಾಷ್ಟ್ರಗಳಲ್ಲಿ ಲಭ್ಯವಿರುವ ವಿರಳ ಭೂಧಾತುಗಳಲ್ಲಿ ಶೇ 70ರಷ್ಟು ಹಿಡಿತ ಚೀನಾ ಬಳಿ ಇದೆ. ಜಾಗತಿಕ ಮಟ್ಟದಲ್ಲಿ ಲಭ್ಯವಾಗುವ ವಿರಳ ಭೂಧಾತುಗಳನ್ನು ಸಂಗ್ರಹಿಸಿ ಸಂಸ್ಕರಿಸುವ ಕಾರ್ಯದಲ್ಲೂ ಶೇ 90ರಷ್ಟು ಹಿಡಿತ ಚೀನಾದ್ದೇ ಆಗಿದೆ.

## ಆಯಸ್ಕಾಂತೀಯ ವಲಯ ಸೃಷ್ಟಿ

ಇವಿ ಮೋಟಾರುಗಳು ಜಗತ್ತಿನ ಯಾವುದೇ ಮೂಲೆಯಲ್ಲಿ ಅಭಿವೃದ್ಧಿ ಹೊಂದಲಿ, ಈ ವಿರಳ ಭೂಧಾತುಗಳಿಗೆ ಚೀನಾವನ್ನು ಅವಲಂಬಿಸಲೇಬೇಕು ಎಂಬ ಅನಿವಾರ್ಯತೆ ಸೃಷ್ಟಿಸಿದೆ. ಈ ಅವಲಂಬನೆಯನ್ನು ಮೀರಿ ಈಗ ವಿಮಾಗ್ ಕಂಪನಿಯು ಇವಿ ಮೋಟಾರ್ ಅನ್ನು ಅಭಿವೃದ್ಧಿಪಡಿಸಿದೆ. ತಂತ್ರಾಂಶದ ಮೂಲಕ ನಿಯಂತ್ರಿಸಬಹುದಾದ ಆಯಸ್ಕಾಂತೀಯ ವಲಯ ಸೃಷ್ಟಿಸುವ ಈ ತಂತ್ರಜ್ಞಾನ ಈಗ ವ್ಯಾಪಕ ಸುದ್ದಿಯಲ್ಲಿದೆ.

'ವರ್ಚುವಲ್ ಮ್ಯಾಗ್ನೆಟ್ ಸಿಂಕ್ರೊನಸ್ ಮೋಟಾರ್' (VMSM) ಎಂಬ ಈ ತಂತ್ರಜ್ಞಾನ ಆಧರಿಸಿ ಅಭಿವೃದ್ಧಿಯಾದ ಮೋಟಾರ್‌ನಲ್ಲಿ ಅಪರೂಪದ ಭೂಧಾತುಗಳ ಬಳಕೆಯನ್ನು ವಿಮಾಗ್ ಲ್ಯಾಬ್ಸ್ ಮಾಡಿಲ್ಲ. ಬದಲಿಗೆ ಶಾಶ್ವತ ಆಯಸ್ಕಾಂತಗಳನ್ನು ಬಳಸದೆ ಸಾಫ್ಟ್‌ವೇರ್, ಪವರ್ ಎಲೆಕ್ಟ್ರಾನಿಕ್ ಮತ್ತು ನಿಯಂತ್ರಿತ ವಿದ್ಯುತ್ಕಾಂತೀಯ ಕ್ಷೇತ್ರವನ್ನು ಆಧರಿಸಿದ ತಂತ್ರಜ್ಞಾನ ಇದಾಗಿದೆ. ಇದಕ್ಕೆ 'ವೊಲೆಕ್ಟ್ರಾ' ಎಂಬ ಹೆಸರನ್ನು ವಿಮಾಗ್ ಲ್ಯಾಬ್ಸ್ ಇಟ್ಟಿದೆ. ಈ ಮೋಟಾರ್‌ನಲ್ಲಿ ಅತ್ಯಾಧುನಿಕ ತಂತ್ರಾಂಶವನ್ನು ಬಳಸಿ ಎಲೆಕ್ಟ್ರಾನಿಕ್ ಉಪಕರಣಗಳ ಮೂಲಕ ಆಯಸ್ಕಾಂತೀಯ ವಲಯವನ್ನು ಸೃಷ್ಟಿಸುವುದು ಹಾಗೂ ಪವರ್ ಎಲೆಕ್ಟ್ರಾನಿಕ್ಸ್ ಮೂಲಕ ಮ್ಯಾಗ್ನೆಟ್‌ಗಳನ್ನು ಬಳಸಿಕೊಳ್ಳುವ ತಂತ್ರಜ್ಞರ ಪ್ರಯತ್ನ ಫಲ ನೀಡಿದೆ ಎಂದು ಕಂಪನಿ ಹೇಳಿಕೊಂಡಿದೆ.

ತಂತ್ರಾಂಶದ ಮೂಲಕವೇ ಆಯಸ್ಕಾಂತೀಯ ವಲಯವನ್ನು ನಿಯಂತ್ರಿಸುವ ಈ ವಿನ್ಯಾಸದ ಮೋಟಾರನ್ನು ಕಾರು, ಸ್ಕೂಟರ್, ಟ್ರಕ್‌ಗಳು, ಕೈಗಾರಿಕೆಗಳಲ್ಲಿ, ರೊಬೊಗಳಲ್ಲಿ, ವಿಮಾನಯಾನ ಕ್ಷೇತ್ರ, ರಕ್ಷಣಾ ಇಲಾಖೆಯಲ್ಲೂ ಬಳಸಬಹುದಾಗಿದೆ.

## ಚೀನಾದ ಹಿಡಿತದಲ್ಲಿ ವಿರಳ ಭೂಧಾತುಗಳು

ವಿಮಾಗ್ ಲ್ಯಾಬ್ಸ್‌ನ ಸಹ ಸಂಸ್ಥಾಪಕ ಹಾಗೂ ಸಿಇಒ ಮನೀಶ್ ಸೇಥ್ ಅವರು ತಮ್ಮ ಈ ವರ್ಚುವಲ್ ಮ್ಯಾಗ್ನೆಟ್ ತಂತ್ರಜ್ಞಾನ ಕುರಿತು ಮಾಧ್ಯಮಗಳೊಂದಿಗೆ ಮಾಹಿತಿ ಹಂಚಿಕೊಂಡಿದ್ದು, ವಿರಳ ಧಾತುಗಳ ಬಳಕೆಯೇ ಇಲ್ಲದ ವಿದ್ಯುತ್ ಮೋಟಾರೊಂದು ಸಾಂಪ್ರದಾಯಿಕ ಹಾಗೂ ಶಾಶ್ವತ ಮ್ಯಾಗ್ನೆಟ್ ಮೋಟಾರುಗಳನ್ನೂ ಮೀರಿ ಕಾರ್ಯಕ್ಷಮತೆ ಪ್ರದರ್ಶಿಸಬಲ್ಲದು ಎಂಬುದನ್ನು ಸಾಬೀತುಪಡಿಸಿದೆ ಎಂದಿದ್ದಾರೆ.

ವಿರಳ ಭೂಧಾತುಗಳ ಮೇಲಿನ ಅವಲಂಬನೆಯನ್ನು ಮೂಲದಲ್ಲೇ ಪರಿಹರಿಸುವ ಉದ್ದೇಶದಿಂದ ಮೋಟಾರ್‌ನ ವಿನ್ಯಾಸವನ್ನೇ ವಿಮಾಗ್ ಲ್ಯಾಬ್ಸ್ ಬದಲಿಸಿದೆ. ಕಂಪನಿಯ ಪ್ರಕಾರ, ತಾಮ್ರದ ಕಾಯಿಲ್‌ಗಳು, ಉಕ್ಕು, ಪವರ್ ಎಲೆಕ್ಟ್ರಾನಿಕ್ಸ್ ಮತ್ತು ಸ್ವಂತ ಸಾಫ್ಟ್‌ವೇರ್ ಬಳಸಿ ಮೋಟಾರ್‌ನೊಳಗೆ ಅಗತ್ಯವಿರುವ ಆಯಸ್ಕಾಂತೀಯ ಕ್ಷೇತ್ರವನ್ನು ಸೃಷ್ಟಿಸಿ, ಅದನ್ನು ಕಾರ್ಯಾಚರಣೆಗೆ ಅನುಗುಣವಾಗಿ ನಿಯಂತ್ರಿಸಲಾಗುತ್ತದೆ. ಎಂದರೆ, ಮೋಟಾರ್‌ನೊಳಗೆ ಶಾಶ್ವತವಾಗಿ ಅಳವಡಿಸಿರುವ ಮ್ಯಾಗ್ನೆಟ್ ಬದಲಿಗೆ ಸಾಫ್ಟ್‌ವೇರ್ ನಿಯಂತ್ರಿತ 'ವರ್ಚುವಲ್ ಮ್ಯಾಗ್ನೆಟ್' ಕಾರ್ಯನಿರ್ವಹಿಸುತ್ತದೆ ಎನ್ನುವುದು ಕಂಪನಿಯ ಹೇಳಿಕೆ. ಬ್ಯಾಟರಿ ಚಾಲಿತ ವಾಹನಗಳಲ್ಲಿ ಇಂದು ಶಾಶ್ವತ ಆಯಸ್ಕಾಂತಗಳನ್ನು ಬಳಸಲಾಗುತ್ತದೆ. ಇವುಗಳ ಅಭಿವೃದ್ಧಿಗೆ ವಿರಳ ಭೂಧಾತುಗಳು ಅತ್ಯಗತ್ಯ.

ಜಗತ್ತಿನ ಶೇ 90ರಿಂದ ಶೇ 95ರಷ್ಟು ಇಂಥ ಖನಿಜಗಳು ಸಂಸ್ಕರಣೆಯ ನಿಯಂತ್ರಣ ಚೀನಾ ಬಳಿ ಇದೆ. ಈ ಖನಿಜಗಳ ಗಣಿಗಾರಿಕೆ, ಸಂಸ್ಕರಣೆ ಮತ್ತು ಮ್ಯಾಗ್ನೆಟ್ ತಯಾರಿಕೆಯ ಜಾಗತಿಕ ಪೂರೈಕೆ ಸರಪಳಿಯಲ್ಲಿ ಚೀನಾದ ಪ್ರಾಬಲ್ಯವಿದೆ. ಹೀಗಾಗಿ ಇವಿ ಉದ್ಯಮದ ಬೆಳವಣಿಗೆಗೆ ಇದು ಕೇವಲ ತಂತ್ರಜ್ಞಾನದ ಪ್ರಶ್ನೆಯಲ್ಲ, ಪೂರೈಕೆ ಸರಪಳಿಯ ಭದ್ರತೆಯ ಪ್ರಶ್ನೆಯೂ ಅಡಗಿದೆ ಎಂದು ವಿಶ್ಲೇಷಕರು ಹೇಳುತ್ತಾರೆ. ವಿರಳ ಭೂಧಾತುಗಳ ಸಂಸ್ಕರಣೆ ಅತ್ಯಂತ ಅಪಾಯಕಾರಿ. ಹೀಗಾಗಿ ಬಹಳಷ್ಟು ರಾಷ್ಟ್ರಗಳು ಈ ಸಾಹಸಕ್ಕೆ ಕೈಹಾಕದೆ ಚೀನಾವನ್ನೇ ಅವಲಂಬಿಸಿವೆ. ಕಳೆದ ಹಲವು ವರ್ಷಗಳಲ್ಲಿ ಈ ಸಂಸ್ಕರಣೆಗಾಗಿಯೇ ಚೀನಾ ಬಹಳಷ್ಟು ಹಣವನ್ನು ಹೂಡಿಕೆ ಮಾಡಿದೆ. ಹೀಗಾಗಿ ಈ ವಿರಳ ಧಾತುಗಳಿಗೆ ಇಡೀ ಜಗತ್ತೇ ಚೀನಾದತ್ತ ಮುಖ ಮಾಡುವಂತೆ ಮಾಡಿದೆ.

### ಭಾರತಕ್ಕೆ ಪೇಟೆಂಟ್

'ಕಾರ್ಯಕ್ಷಮತೆ, ಮೋಟಾರ್‌ನ ಒಟ್ಟು ತೂಕ ಅಥವಾ ವಾಹನದ ರೇಂಜ್‌ನಲ್ಲಿ ರಾಜಿ ಮಾಡಿಕೊಳ್ಳದೆ ಸಾಂಪ್ರದಾಯಿಕ ಶಾಶ್ವತ ಮ್ಯಾಗ್ನೆಟ್ ಮೋಟಾರ್‌ಗಳಿಗೆ ಪರ್ಯಾಯ ಸಾಧನ ಒದಗಿಸುವುದು ಈ ತಂತ್ರಜ್ಞಾನದ ಗುರಿ. ಮೋಟಾರ್‌ನ ಹಾರ್ಡ್‌ವೇರ್‌ಗಿಂತ ಸಾಫ್ಟ್‌ವೇರ್ ಮತ್ತು ಎಲೆಕ್ಟ್ರಾನಿಕ್ಸ್ ಅಭಿವೃದ್ಧಿಯೇ ದೊಡ್ಡ ಸವಾಲಾಗಿತ್ತು ಎಂದು ವಿಮಾಗ್ ಲ್ಯಾಬ್ಸ್ ಹೇಳಿದೆ.

ಈ ಲ್ಯಾಬ್ಸ್ ಅಭಿವೃದ್ಧಿಪಡಿಸಿರುವ ಹೊಸ ತಲೆಮಾರಿನ ಮೋಟಾರ್ ಈಗ ಪರೀಕ್ಷಾರ್ಥ ವಾಹನದಲ್ಲಿ ಅಳವಡಿಸಲಾಗಿದೆ. ಈ ತಂತ್ರಜ್ಞಾನಕ್ಕೆ ಇತ್ತೀಚೆಗೆ ಭಾರತದ ಐದನೇ ಪೇಟೆಂಟ್ ದೊರೆತಿದ್ದು, ಇನ್ನೂ ಹಲವು ಪೇಟೆಂಟ್‌ಗಳು ದೊರೆಯುವ ಪ್ರಕ್ರಿಯೆಯಲ್ಲಿವೆ.

ಈ ತಂತ್ರಜ್ಞಾನದ ಜತೆಗೆ ಇತರ ಆರು ಹೊಸ ತಂತ್ರಜ್ಞಾನಗಳಿಗೆ ಅಂತರ ರಾಷ್ಟ್ರೀಯ ಪೇಟೆಂಟ್ ಪಡೆಯುವ ಪ್ರಕ್ರಿಯೆಯಲ್ಲೂ ವಿಮಾಗ್ ಲ್ಯಾಬ್ಸ್ ಇದೆ. ಜತೆಗೆ ಮುಂದಿನ ಕೆಲ ತಿಂಗಳುಗಳಲ್ಲಿ ದ್ವಿಚಕ್ರ ಹಾಗೂ ತ್ರಿಚಕ್ರ ವಾಹನಗಳಿಗೆ ನೂತನ ತಂತ್ರಜ್ಞಾನದ ಮೋಟಾರು ಅಳವಡಿಸುವ ಗುರಿಯನ್ನೂ ಲ್ಯಾಬ್ಸ್ ವ್ಯಕ್ತಪಡಿಸಿದೆ.

ವಿರಳ ಭೂಧಾತುವಿನ ಮೇಲಿನ ಅವಲಂಬನೆ ತಗ್ಗಿಸಲು ವಿಮಾಗ್ ಲ್ಯಾಬ್ಸ್‌ನ ತಂತ್ರಜ್ಞರು ಪರಿಶ್ರಮ ಪಟ್ಟಿದ್ದು ಬರೋಬ್ಬರಿ 87 ಸಾವಿರ ಎಂಜಿನಿಯರಿಂಗ್ ಗಂಟೆ. ವಿರಳ ಭೂಧಾತುಗಳ ಮೇಲಿನ ಅವಲಂಬನೆ ತಗ್ಗಿಸುವುದು ಕೇವಲ ಚೀನಾದಿಂದ ದೂರವಾಗುವ ಪ್ರಯತ್ನವಲ್ಲ. ಅದು ಜಾಗತಿಕ ಇವಿ ಉದ್ಯಮಕ್ಕೆ ಹೆಚ್ಚು ಸ್ಥಿರವಾದ ಪೂರೈಕೆ ಸರಪಳಿ ನಿರ್ಮಿಸುವ ಪ್ರಯತ್ನವೂ ಹೌದು. ಆ ದೃಷ್ಟಿಯಿಂದ, ಬೆಂಗಳೂರಿನಲ್ಲಿ ರೂಪುಗೊಂಡಿರುವ ಈ ತಂತ್ರಜ್ಞಾನವು ಭಾರತಕ್ಕೆ ಮಹತ್ವದ ಅವಕಾಶಗಳನ್ನು ತೆರೆದಿಡುತ್ತಿದೆ.

'ಸ್ಟಾರ್ಟ್‌ಅಪ್‌ಗಳ ಸ್ವರ್ಗ' ಎಂದೇ ಕರೆಯಲಾಗುವ ಬೆಂಗಳೂರಿನಲ್ಲಿ ಅದ್ಭುತ ಪ್ರತಿಭೆಗಳು ಹಾಗೂ ಪೂರಕ ವಾತಾವರಣ ಇರುವುದನ್ನು ವಿಮಾಗ್ ಲ್ಯಾಬ್ಸ್‌ನ ಮನೀಶ್ ಸೇಥ್ ಮುಕ್ತಕಂಠದಿಂದ ಹೊಗಳಿದ್ದಾರೆ.

Publication Date 29/07/2026
Presented by

# ಸಮಾನತೆ ಹಕ್ಕು: 'ಇಷ್ಟಕ್ಕೆ ತಕ್ಕಂತೆ ಬಳಸದಿರಿ'

## ಮನೆ, ಮಕ್ಕಳ ಖರ್ಚು–ವೆಚ್ಚವನ್ನು ಪತಿ–ಪತ್ನಿ ಭರಿಸಲಿ: ಬಾಂಬೆ ಹೈಕೋರ್ಟ್ ಆದೇಶ

ಮುಂಬೈ (ಪಿಟಿಐ): 'ಸಮಾನತೆಯ ಹಕ್ಕನ್ನು ತಮ್ಮ ಇಷ್ಟಕ್ಕೆ ತಕ್ಕಂತೆ ಮಾತ್ರ ಬಳಸಿಕೊಳ್ಳಲು ಸಾಧ್ಯವಿಲ್ಲ. ಒಂದು ಕುಟುಂಬ ಹಿಂದಿನಂತೆ ಜೀವನಶೈಲಿಯನ್ನು ಮುಂದುವರಿಸ ಬೇಕಾದರೆ ದುಡಿಯುವ ಪತಿ ಹಾಗೂ ಪತ್ನಿ ಇಬ್ಬರೂ ಮನೆ ಖರ್ಚು, ಮಕ್ಕಳ ವಿದ್ಯಾಭ್ಯಾಸದ ವೆಚ್ಚವನ್ನು ಭರಿಸಬೇಕು' ಎಂದು ಬಾಂಬೆ ಹೈಕೋರ್ಟ್ ಸೂಚಿಸಿದೆ.

ಕುಟುಂಬದಿಂದ ದೂರವಿರುವ ಪತ್ನಿ ಮತ್ತು ಮಗನಿಗೆ ನೀಡಬೇಕಾದ ಮಾಸಿಕ ಜೀವನಾಂಶವನ್ನು ಕಡಿಮೆ ಮಾಡುವಂತೆ ಕೋರಿ ವ್ಯಕ್ತಿಯೊಬ್ಬರು ಸಲ್ಲಿಸಿದ್ದ ಅರ್ಜಿ ವಿಚಾರಣೆ ವೇಳೆ ಬಾಂಬೆ ಹೈಕೋರ್ಟ್ ಈ ಮಹತ್ವದ ಆದೇಶ ನೀಡಿದೆ.

ನ್ಯಾಯಮೂರ್ತಿ ಎಂ.ಎಂ. ಸತಾಯೆ ನೇತೃತ್ವದ ಏಕಸದಸ್ಯ ಪೀಠವು, 'ಪತ್ನಿ ಹಾಗೂ ಮಗನಿಗೆ ಮಾಸಿಕ ₹50 ಸಾವಿರ ಜೀವನಾಂಶವನ್ನು ನೀಡಬೇಕು' ಎಂದು ಕೌಟುಂಬಿಕ ನ್ಯಾಯಾಲಯವು 2025ರ ಜನವರಿಯಲ್ಲಿ ನೀಡಿದ್ದ ಆದೇಶವನ್ನು ರದ್ದುಗೊಳಿಸಿ, ಈ ಮೊತ್ತವನ್ನು ₹25 ಸಾವಿರಕ್ಕೆ ಕಡಿಮೆ ಮಾಡಿ ಕಳೆದ ವಾರ ಆದೇಶಿಸಿದೆ.

ಮುಂಬೈನ ಅಂಧೇರಿ ಪ್ರದೇಶದಲ್ಲಿ ಪತ್ನಿ ಮತ್ತು ಮಗ ವಾಸಿಸುತ್ತಿರುವ ಮನೆ ಹಾಗೂ ನವಿ ಮುಂಬೈನ ಪನ್ವೇಲ್ ನಲ್ಲಿರುವ ಇನ್ನೊಂದು ಮನೆಯ ಮಾಸಿಕ ಕಂತು (ಇಎಂಐ) ಅನ್ನು ಅರ್ಜಿದಾರರೇ ಪಾವತಿಸುತ್ತಿರುವುದನ್ನು ಪೀಠವು ಗಮನಿಸಿದೆ. ಅರ್ಜಿದಾರರು ಸದ್ಯ ಬಿಹಾರದಲ್ಲಿ ವಾಸಿಸುತ್ತಿದ್ದಾರೆ.

> ಪತಿ, ಪತ್ನಿ ಸಂಪಾದಿಸುತ್ತಿದ್ದರೆ ಮತ್ತು ತಮ್ಮ ಮಗುವಿಗೆ ಉತ್ತಮ ಶಿಕ್ಷಣ ಸಿಗಬೇಕೆಂದು ಬಯಸಿದರೆ, ಇಬ್ಬರೂ ಅದರ ಖರ್ಚು ಭರಿಸಬೇಕಾಗುತ್ತದೆ
> **ಎಂ.ಎಂ.ಸತಾಯೆ,** ಬಾಂಬೆ ಹೈಕೋರ್ಟ್ ನ್ಯಾಯಮೂರ್ತಿ

'ಇಎಂಐ ಕಂತು ಕಟ್ಟಲು ಪತ್ನಿಯು ಯಾವುದೇ ಹಣಕಾಸಿನ ನೆರವು ನೀಡುತ್ತಿಲ್ಲ' ಎಂದು ಪೀಠ ಉಲ್ಲೇಖಿಸಿದೆ.

'ಆರ್ಥಿಕ ಹೊರೆಯನ್ನು ತಗ್ಗಿಸಲು ಅಂಧೇರಿಯಲ್ಲಿರುವ ಮನೆಯನ್ನು ಮಾರಾಟ ಮಾಡಿ ಬಿಹಾರದಲ್ಲಿರುವ ಮನೆಗೆ ಅಥವಾ ಪನ್ವೇಲ್‌ನಲ್ಲಿರುವ ಮನೆಗೆ ಸ್ಥಳಾಂತರಗೊಳ್ಳುವಂತೆ ಅರ್ಜಿ ದಾರರು ತನ್ನ ಪತ್ನಿಗೆ ವಿನಂತಿಸಿದ್ದರು. ಆದರೆ, ಪತ್ನಿ ನಿರಾಕರಿಸಿದ್ದರು. ಅರ್ಜಿದಾರರ ವಿನಂತಿಯಲ್ಲಿ ಯಾವುದೇ ದೋಷ ಕಂಡುಬರುವುದಿಲ್ಲ' ಎಂದು ಪೀಠ ಹೇಳಿದೆ.

'ವೈವಾಹಿಕ ಕಲಹದಲ್ಲಿ, ಪತ್ನಿಯು ಇಎಂಐ ಕಂತು ಕಟ್ಟದೆ ಅಥವಾ ತನ್ನ ಸಂಪಾದನೆಯ ಹಣ ನೀಡದೆ ಅಂಧೇರಿಯಂತಹ ಅತ್ಯಂತ ದುಬಾರಿ ಪ್ರದೇಶ ದಲ್ಲಿ ಐಷಾರಾಮಿ ಜೀವನ ನಡೆಸ ಬೇಕೆಂದು ಬಯಸುವುದಾದರೆ, ಈಗಾಗಲೇ ಮನೆಯ ಸಂಪೂರ್ಣ ಇಎಂಐ ಕಂತು ಕಟ್ಟುತ್ತಿರುವ ಪತಿಯು, ಆ ಇಎಂಐ ಹೊರೆ ತನಗೆ ಹೆಚ್ಚಾಗಿದೆ ಎಂಬ ಕಾರಣ ನೀಡಿ ಪತ್ನಿಗೆ ನೀಡ ಬೇಕಾದ ಜೀವನಾಂಶವನ್ನು ಕಡಿಮೆ ಮಾಡುವಂತೆ ಕೋರ್ಟ್‌ಗೆ ವಿನಂತಿಸುವುದರಲ್ಲಿ ತಪ್ಪಿಲ್ಲ' ಎಂದು ಪೀಠ ಹೇಳಿದೆ.

'ಕೋವಿಡ್–19 ಸಮಯದಲ್ಲಿ ಕೆಲಸ ಕಳೆದುಕೊಂಡೆ. ಈಗ ತೀರಾ ಕಡಿಮೆ ಸಂಬಳದ ಕೆಲಸ ಮಾಡುತ್ತಿದ್ದು, ಆರ್ಥಿಕ ಸಮಸ್ಯೆ ಎದುರಿಸುತ್ತಿದ್ದೇನೆ' ಎಂದು ಅರ್ಜಿದಾರರು ತಿಳಿಸಿದ್ದರು.

'ಕೋವಿಡ್–19 ಸಾಂಕ್ರಾಮಿಕ ರೋಗ ಅನೇಕ ಜನರ ವೃತ್ತಿಪರ ಜೀವನ ಮತ್ತು ವ್ಯವಹಾರಗಳ ಮೇಲೆ ಪರಿಣಾಮ ಬೀರಿದೆ' ಎಂದು ಪೀಠ ಹೇಳಿದೆ.

## ಎಸ್‌ಐಆರ್: 'ಶಿಕ್ಷಕರಿಗೆ ಕೆಲಸದ ಹೊರೆ ಬೇಡ'

**ಚುನಾವಣಾ ಆಯೋಗಕ್ಕೆ ಸೂಚನೆ**

ನವದೆಹಲಿ (ಪಿಟಿಐ): ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಹಾಗೂ ಮಕ್ಕಳ ಶಿಕ್ಷಣದ ಹಕ್ಕನ್ನು ಸಮತೋಲನಗೊಳಿಸುವ ಅಗತ್ಯವಿದೆ. ಎಸ್‌ಐಆರ್ ಕಾರ್ಯಕ್ಕಾಗಿ ನಿಯೋಜಿಸಿರುವ ಸರ್ಕಾರಿ ಶಾಲಾ ಶಿಕ್ಷಕರ ಪರಿಸ್ಥಿತಿಯ ಬಗ್ಗೆ ಸಂವೇದನಾ ಶೀಲರಾಗಿರಬೇಕು. ಅವರ ಮೇಲೆ ಹೆಚ್ಚಿನ ಕೆಲಸದ ಹೊರೆ ಬೀಳದಂತೆ ನೋಡಿಕೊಳ್ಳಬೇಕು ಎಂದು ದೆಹಲಿ ಹೈಕೋರ್ಟ್ ಚುನಾವಣಾ ಆಯೋಗಕ್ಕೆ ಮಂಗಳವಾರ ಸೂಚಿಸಿದೆ.

ಮುಖ್ಯ ನ್ಯಾಯಮೂರ್ತಿ ಡಿ.ಕೆ. ಉಪಾಧ್ಯಾಯ ಮತ್ತು ನ್ಯಾಯಮೂರ್ತಿ ತೇಜಸ್ ಕಾರಿಯಾ ಅವರಿದ್ದ ಪೀಠವು, 'ಎಸ್‌ಐಆರ್ ನಿಸ್ಸಂದೇಹವಾಗಿ ಪ್ರಮುಖವಾಗಿದೆ. ಆದರೆ, ಚುನಾವಣೆಗೆ ಸಂಬಂಧಿಸಿದ ಕೆಲಸಗಳಿಗೆ ಅಡ್ಡಿಪಡಿಸದಂತೆ ಪ್ರಾಂಶುಪಾಲರಿಗೆ ಆಯೋಗವು ನೀಡಿದ ಆದೇಶವು ಬೆದರಿಕೆ ಹಾಕುವ ಧಾಟಿಯಲ್ಲಿದೆ' ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

'ಶಾಲಾ ಶಿಕ್ಷಕರನ್ನು ಎಸ್‌ಐಆರ್ ಪ್ರಕ್ರಿಯೆಗೆ ನಿಯೋಜಿಸಿರುವುದರಿಂದ ಶಾಲಾ ಕರ್ತವ್ಯಗಳನ್ನು ನಿರ್ವಹಿಸಲು ಸಾಧ್ಯವಾಗುತ್ತಿಲ್ಲ. ದೆಹಲಿಯ ಸರ್ಕಾರಿ, ಪುರಸಭೆ ಮತ್ತು ಸರ್ಕಾರಿ ಅನುದಾನಿತ ಶಾಲೆಗಳಲ್ಲಿ ಓದುತ್ತಿರುವ ಲಕ್ಷಾಂತರ ಮಕ್ಕಳ ಶಿಕ್ಷಣದ ಮೂಲಭೂತ ಹಕ್ಕನ್ನು ರಕ್ಷಿಸಬೇಕು' ಎಂದು ಕೋರಿ ವಕೀಲರಾದ ರಾಜೇಶ್ ಕುಮಾರ್ ಗೋಗ್ನಾ ಮತ್ತು ಅಶೋಕ್ ಅಗರ್ವಾಲ್ ಅವರು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯ ವಿಚಾರಣೆ ಸಂದರ್ಭದಲ್ಲಿ ಪೀಠವು ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ.

'ಬೋಧನಾ ಸಿಬ್ಬಂದಿಯಲ್ಲಿ ಹೆಚ್ಚಾಗಿ ಮಹಿಳೆಯರೇ ಇದ್ದಾರೆ. ಅವರಿಗೆ ಮಕ್ಕಳಿದ್ದಾರೆ, ಅವರ ಕುಟುಂಬಗಳಿವೆ. ಅವರ ಪರಿಸ್ಥಿತಿಯನ್ನು ನೀವು ಮಾನವೀಯ ನೆಲೆಗಟ್ಟಿನಿಂದ ನೋಡಬೇಕು. ಈ ಆದೇಶವನ್ನು ಹೊರಡಿಸುವಾಗ ನೀವು ಎಂತಹ ಭಾಷೆಯನ್ನು ಬಳಸಿದ್ದೀರಿ? ನೀವು ಭಯವನ್ನು ಸೃಷ್ಟಿಸುತ್ತಿದ್ದೀರಾ ಅಥವಾ ಇನ್ನೇನು' ಎಂದು ಪೀಠವು ಆಯೋಗವನ್ನು ತರಾಟೆಗೆ ತೆಗೆದುಕೊಂಡಿದೆ.

Publication Date 29/07/2026
Presented by

## ❖ ಡಿಜಿಟಲ್ ಅರೆಸ್ಟ್ ವಿರುದ್ಧ ಕಠಿಣ ಕ್ರಮಕ್ಕೆ 'ಸುಪ್ರೀಂ' ಸಲಹೆ

- 'ಡಿಜಿಟಲ್ ಅರೆಸ್ಟ್' ಪ್ರಕರಣಗಳನ್ನು ಕ್ರಿಮಿನಲ್ ಕಾನೂನಿನ ಅಡಿ ಪ್ರತ್ಯೇಕ ಅಪರಾಧ ಎಂದು ವ್ಯಾಖ್ಯಾನಿಸಬೇಕು ಮತ್ತು ಅದಕ್ಕೆ ಕಠಿಣ ಶಿಕ್ಷೆ ವಿಧಿಸುವ ಕಾನೂನು ರೂಪಿಸ ಬೇಕು ಎಂದು ಕೇಂದ್ರಕ್ಕೆ ಸುಪ್ರೀಂ ಕೋರ್ಟ್ ಮಂಗಳವಾರ ಸಲಹೆ ನೀಡಿದೆ.
- ಹೆಚ್ಚುತ್ತಿರುವ 'ಡಿಜಿಟಲ್ ಅರೆಸ್ಟ್' ಪ್ರಕರಣಗಳ ಕುರಿತ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಮತ್ತು ನ್ಯಾಯಮೂರ್ತಿಗಳಾದ ಜಾಯ್‌ಮಾಲ್ಯಾ ಬಾಗ್ಚಿ, ವಿ.ಮೋಹನ ಅವರಿದ್ದಪೀಠವು ವಿಚಾರಣೆ ನಡೆಸಿತು.
- 'ವಂಚಕರು ಪೊಲೀಸರು, ನ್ಯಾಯ ಮೂರ್ತಿಗಳು ಅಥವಾ ಸರ್ಕಾರಿ ಅಧಿಕಾರಿಗಳ ಸೋಗಿನಲ್ಲಿ ವಿಡಿಯೊ ಕರೆ ಮಾಡಿ ಹಣವನ್ನು ಸುಲಿಗೆ ಮಾಡುತ್ತಾರೆ. ಪ್ರಾಥಮಿಕ ತನಿಖೆಯಲ್ಲಿ ಆರೋಪ ಸಾಬೀತಾದರೆ, ತಕ್ಷಣವೇ ಆರೋಪಿಗಳ ಆಸ್ತಿಯನ್ನು ಮುಟ್ಟುಗೋಲು ಹಾಕಿ ಕೊಳ್ಳುವ ನಿಯಮ ತರಬೇಕು ಎಂದು ಪೀಠವು ಅಭಿಪ್ರಾಯಪಟ್ಟಿತು.

# ಸಕ್ಕರೆ ಡೀಲರ್‌ಗಳಿಗೆ ದಾಸ್ತಾನು ಮಿತಿ

### ದೇಶಿ ಮಾರುಕಟ್ಟೆಯಲ್ಲಿ ಬೆಲೆ ನಿಯಂತ್ರಣ ಉದ್ದೇಶದ ಕ್ರಮ

**ನವದೆಹಲಿ (ಪಿಟಿಐ):** ಯಾವುದೇ ಡೀಲರ್‌ಗಳು ಸಕ್ಕರೆಯ ದಾಸ್ತಾನನ್ನು 30 ದಿನಗಳಿಗಿಂತ ಹೆಚ್ಚಿನ ಅವಧಿಗೆ ಇರಿಸಿಕೊಳ್ಳುವಂತೆ ಇಲ್ಲ ಎಂದು ಕೇಂದ್ರ ಸರ್ಕಾರವು ಮಂಗಳವಾರ ಸೂಚಿಸಿದೆ. ಅಲ್ಲದೆ, ದಾಸ್ತಾನು ಮಿತಿಯು 4,000 ಕ್ವಿಂಟಲ್ ಮೀರುವಂತಿಲ್ಲ ಎಂದು ಹೇಳಿದೆ.

ದೇಶಿ ಮಾರುಕಟ್ಟೆಯಲ್ಲಿ ಸಕ್ಕರೆಯ ಬೆಲೆಯನ್ನು ನಿಯಂತ್ರಣದಲ್ಲಿ ಇರಿಸುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ.

ಈ ಆದೇಶವು ಆಗಸ್ಟ್ 1ರಿಂದ ಜಾರಿಗೆ ಬರಲಿದ್ದು, ನವೆಂಬರ್ 30ರವರೆಗೆ ಚಾಲ್ತಿಯಲ್ಲಿ ಇರಲಿದೆ. ಸಕ್ಕರೆ ಕಾರ್ಖಾನೆಗಳಿಗೆ ಕೇಂದ್ರ ಸರ್ಕಾರವು ಮಾಸಿಕ ಮಾರಾಟ ಮಿತಿಯನ್ನು ನಿಗದಿ ಮಾಡುತ್ತದೆಯಾದರೂ, ಸಕ್ಕರೆ ಡೀಲರ್‌ಗಳು ಎಷ್ಟು ದಾಸ್ತಾನು ಇರಿಸಿಕೊಳ್ಳಬಹುದು ಎಂಬುದಕ್ಕೆ ಮಿತಿ ಈ ಮೊದಲು ಇರಲಿಲ್ಲ.

**ಮುಖ್ಯಾಂಶಗಳು**

- ಮೂರು ತಿಂಗಳಲ್ಲಿ ಬೆಲೆ ₹6ರಷ್ಟು ಏರಿಕೆ
- ಪಿಡಿಎಸ್ ಉದ್ದೇಶಕ್ಕೆ ಮಿತಿ ಅನ್ವಯ ಇಲ್ಲ
- ಈ ವರ್ಷ 279 ಲಕ್ಷ ಟನ್ ಸಕ್ಕರೆ ಉತ್ಪಾದನೆ ಅಂದಾಜು



ಸಕ್ಕರೆಯ ಬೆಲೆಯು ಪ್ರತಿ ಕಿಲೊ ಗ್ರಾಂಗೆ ₹39 ಇದ್ದಿದ್ದು ಮೂರು ತಿಂಗಳ ಅವಧಿಯಲ್ಲಿ ₹45ಕ್ಕೆ ಹೆಚ್ಚಳ ಆಗಿದೆ. ಈ ಹಿನ್ನೆಲೆಯಲ್ಲಿ ಕೇಂದ್ರವು ದಾಸ್ತಾನು ಮಿತಿಯನ್ನು ಹೇರಿದೆ.

ಅಗತ್ಯ ವಸ್ತುಗಳ ಕಾಯ್ದೆಯ ಸೆಕ್ಷನ್ 3ರ ಅಡಿಯಲ್ಲಿ ಹಾಗೂ ಸಕ್ಕರೆ (ನಿಯಂತ್ರಣ) ಆದೇಶ-2025ರಲ್ಲಿ ಇರುವ ಅಧಿಕಾರವನ್ನು ಬಳಸಿ ಕೇಂದ್ರ ಆಹಾರ ಮತ್ತು ಗ್ರಾಹಕ ವ್ಯವಹಾರಗಳ ಸಚಿವಾಲಯವು ಅಧಿಸೂಚನೆ ಹೊರಡಿಸಿದೆ.

ಸಕ್ಕರೆ ಕಾರ್ಖಾನೆಗಳ ಮಟ್ಟದಲ್ಲಿ

ಮುಂಗಾರು ಮಳೆಯು ವಾಡಿಕೆಗಿಂತ ಕಡಿಮೆ ಇರಲಿದೆ ಎಂಬ ಮುನ್ಸೂಚನೆಗಳ ಆಧಾರದಲ್ಲಿ ಕೇಂದ್ರವು ಸಕ್ಕರೆ ರಫ್ತನ್ನು ಈಗಾಗಲೇ ನಿಷೇಧಿಸಿದೆ. ರಫ್ತು ನಿಷೇಧವು ಸೆಪ್ಟೆಂಬರ್ 30ರವರೆಗೆ ಜಾರಿಯಲ್ಲಿರಲಿದೆ. 'ದೇಶದ ಎಲ್ಲೆಡೆ ಸಕ್ಕರೆ ಪೂರೈಕೆಯು ಸ್ಥಿರವಾಗಿರಬೇಕು ಹಾಗೂ ನಿಯಂತ್ರಣದಲ್ಲಿ ಇರಬೇಕು ಎಂಬುದಕ್ಕೆ ಕೇಂದ್ರ ಸರ್ಕಾರ ಗಮನ ನೀಡುತ್ತಿರುವುದನ್ನು ಸ್ವಾಗತಿಸುತ್ತೇವೆ' ಎಂದು ಭಾರತೀಯ ಸಕ್ಕರೆ ತಯಾರಕರ ಸಂಘಟನೆಯ (ಐಎಸ್‌ಎಂಎ) ಮಹಾನಿರ್ದೇಶಕ ದೀಪಕ್ ಬಲ್ಲಾನಿ ಹೇಳಿದ್ದಾರೆ.

ಸರ್ಕಾರದ ಹೆಸರಿನಲ್ಲಿ ಇರುವ ಸಕ್ಕರೆ ದಾಸ್ತಾನಿಗೆ ಸಚಿವಾಲಯದ ಅಧಿಸೂಚನೆಯು ಅನ್ವಯ ಆಗುವುದಿಲ್ಲ. ರಾಜ್ಯ ಸರ್ಕಾರಗಳು ನಿಗದಿ ಮಾಡಿರುವ ಡೀಲರ್‌ಗಳು ಸಾರ್ವಜನಿಕ ಪಡಿತರ ವ್ಯವಸ್ಥೆಯ (ಪಿಡಿಎಸ್) ಅಡಿಯಲ್ಲಿ ನ್ಯಾಯಬೆಲೆ ಅಂಗಡಿಗಳ ಮೂಲಕ ವಿತರಿಸಲು ಇರಿಸುವ ದಾಸ್ತಾನಿಗೆ ಕೂಡ ಇದು ಅನ್ವಯ ಆಗುವುದಿಲ್ಲ.

ರಾಜ್ಯ ಸರ್ಕಾರಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳು ದಾಸ್ತಾನು ಪ್ರಮಾಣದ ಮಿತಿಯನ್ನು ಮತ್ತು ಕಾಲಮಿತಿಯನ್ನು ನಿಗದಿ ಮಾಡಬೇಕು. ಆದರೆ ಅವು ನಿಗದಿಪಡಿಸುವ ಮಿತಿಯು ತಾನು ಈಗಾಗಲೇ ನಿಗದಿ ಮಾಡಿರುವ ಮಿತಿಗಿಂತ ಹೆಚ್ಚಿರಬಾರದು ಎಂದು ಆಹಾರ ಸಚಿವಾಲಯ ಹೇಳಿದೆ.

ಡೀಲರ್‌ಗಳು ತಮ್ಮ ಬಳಿ ಇರುವ ದಾಸ್ತಾನಿನ ಬಗ್ಗೆ ಮಾಹಿತಿ ಒದಗಿಸಬೇಕು, ದಾಸ್ತಾನು ಪ್ರಮಾಣವನ್ನು ಕಾಲಕಾಲಕ್ಕೆ ಪೋರ್ಟಲ್ ಮೂಲಕ ತಿಳಿಸಬೇಕು ಎಂದು ಸಚಿವಾಲಯ ಸೂಚಿಸಿದೆ.

2025-26ನೆಯ ಮಾರುಕಟ್ಟೆ ವರ್ಷದಲ್ಲಿ (ಅಕ್ಟೋಬರ್‌ನಿಂದ ಸೆಪ್ಟೆಂಬರ್‌ವರೆಗಿನ ಅವಧಿ) ದೇಶದ ಸಕ್ಕರೆ ಉತ್ಪಾದನೆಯು 279 ಲಕ್ಷ ಟನ್ ಆಗುವ ಅಂದಾಜು ಇದೆ.

Publication Date
29/07/2026

Presented by ಪ್ರಜಾವಾಣಿ

## ❖ ಸೈಬರ್ ವಂಚನೆ ತಡೆಯಲು ಐಡಿಪಿಐಸಿ

- ಹಣಕಾಸಿಗೆ ಸಂಬಂಧಿಸಿದ ಸೈಬರ್ ವಂಚನೆಗಳನ್ನು ನಿಯಂತ್ರಿಸಲು ಕೇಂದ್ರ ಸರ್ಕಾರವು 'ಇಂಡಿಯಾ ಡಿಜಿಟಲ್ ಪೇಮೆಂಟ್ ಇಂಟೆಲಿಜೆನ್ಸ್ ಕಾರ್ಪೊರೇಷನ್ ಅನ್ನು (ಐಡಿಪಿಐಸಿ) ಸ್ಥಾಪಿಸಿದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ರಾಜ್ಯಸಭೆಗೆ ಮಂಗಳವಾರ ತಿಳಿಸಿದ್ದಾರೆ.
- ಇದು ವಂಚನೆಯ ಯತ್ನಗಳ ಬಗ್ಗೆ ತಕ್ಷಣಕ್ಕೆ ಗುಪ್ತಚರ ಮಾಹಿತಿಯನ್ನು, ಎಚ್ಚರಿಕೆ ಸಂದೇಶಗಳನ್ನು ಬ್ಯಾಂಕುಗಳು ಹಾಗೂ ಹಣಕಾಸು ಸಂಸ್ಥೆಗಳಿಗೆ ರವಾನಿಸುತ್ತದೆ ಎಂದು ನಿರ್ಮಲಾ ಅವರು ಲಿಖಿತ ಉತ್ತರದಲ್ಲಿ ಹೇಳಿದ್ದಾರೆ.

## ❖ ₹18 ಸಾವಿರ ಕೋಟಿ ಮೊತ್ತದ ಯೋಜನೆಗಳಿಗೆ ಪ್ರಧಾನಿ ಮೋದಿ ಶಂಕುಸ್ಥಾಪನೆ: ವಿಮಾನ ನಿಲ್ದಾಣ ಆ.1ಕ್ಕೆ ಉದ್ಘಾಟನೆ

- ಆಂಧ್ರಪ್ರದೇಶದ ಭೋಗಾಪುರಂನಲ್ಲಿ ನಿರ್ಮಿಸಿರುವ ಅಲ್ಲೂರಿ ಸೀತಾರಾಮ ರಾಜು ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಆಗಸ್ಟ್ 1ರಂದು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಲಿದ್ದಾರೆ.
- ಇದರ ನಿಮಿತ್ತ, ಸಿದ್ಧತಾ ಕಾರ್ಯಗಳನ್ನು ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಪರಿಶೀಲಿಸಿದರು.
- ಆಗಸ್ಟ್ 1ರಂದು ಬೆಳಿಗ್ಗೆ 10.58ಕ್ಕೆ ವಿಮಾನ ನಿಲ್ದಾಣದ ಟರ್ಮಿನಲ್ ಕಟ್ಟಡವನ್ನು ಮೋದಿ ಅವರು ಉದ್ಘಾಟಿಸಲಿದ್ದಾರೆ. 11.30ಕ್ಕೆ ಸಭಾ ಕಾರ್ಯಕ್ರಮ ನಡೆಯಲಿದ್ದು, 13,500ಕ್ಕೂ ಹೆಚ್ಚು ಬುಡಕಟ್ಟು ಮಹಿಳೆಯರು ಮತ್ತು ವಿದ್ಯಾರ್ಥಿಗಳು ಧಿಮ್ಸಾ ಹಾಗೂ ಕೂಚಿಪುಡಿ ನೃತ್ಯ ಪ್ರದರ್ಶನ ನೀಡಲಿದ್ದಾರೆ.
- ಇದೇ ಸಂದರ್ಭದಲ್ಲಿ, ಪ್ರಧಾನಿ₹18 ಸಾವಿರ ಕೋಟಿ ಮೊತ್ತದ ವಿವಿಧ ಯೋಜನೆಗಳಿಗೆ ಶಂಕು ಸ್ಥಾಪನೆ ಮತ್ತು ಲೋಕಾರ್ಪಣೆ ನೆರವೇರಿಸಲಿದ್ದಾರೆ. ಕಾರ್ಯಕ್ರಮದಲ್ಲಿ ರಾಜ್ಯಪಾಲ ಎಸ್.ಅಬ್ದುಲ್ ನಜೀರ್, ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಭಾಗವಹಿಸಲಿದ್ದಾರೆ.
- 'ಅತ್ಯಾಧುನಿಕ ತಂತ್ರಜ್ಞಾನ ಬಳಸಿ ವಿಮಾನ ನಿಲ್ದಾಣವನ್ನು ಕೇವಲ 31 ತಿಂಗಳಲ್ಲಿ ನಿರ್ಮಿಸಲಾಗಿದೆ. ಇದು ಪರಿಸರಸ್ನೇಹಿಯಾಗಿದ್ದು, ವಿಶ್ವದರ್ಜೆಯ ಸೌಲಭ್ಯ ಕಲ್ಪಿಸಲಾಗಿದೆ. ಈ ಭಾಗದಲ್ಲಿ ಉದ್ಯೋಗ, ಪ್ರವಾಸೋದ್ಯಮ, ವಾಣಿಜ್ಯಚಟುವಟಿಕೆಗಳು ಹೆಚ್ಚಲಿವೆ. ಈ ವಿಮಾನನಿಲ್ದಾಣವು ಉತ್ತರ ಆಂಧ್ರ ಪ್ರದೇಶದ ಅಭಿವೃದ್ಧಿಯಲ್ಲಿ ಮಹತ್ವದ ಮೈಲಿಗಲ್ಲು ಆಗಲಿದೆ. ರಾಜ್ಯದ ವಾಯುಯಾನ ವಲಯದ ಹೊಸ ಯುಗಕ್ಕೆ ನಾಂದಿ ಹಾಡಲಿದೆ' ಎಂದು ಸಿ.ಎಂ. ತಿಳಿಸಿದ್ದಾರೆ.

# ಶರ್ಮಿಳಾಗೆ ಸ್ವರ್ಣ; ಶಿಲ್ಪಾಗೆ ಕಂಚು

### ಕಷ್ಟಗಳ ಪ್ರವಾಹದ ವಿರುದ್ಧ ಈಜಿ ಗೆದ್ದ ಛಲಗಾತಿಯರಿಗೆ ಒಲಿದ ಪದಕ

ಕಾಮನ್‌ವೆಲ್ತ್ ಗೇಮ್ಸ್
ಗ್ಲಾಸ್ಗೊ 2026




ಪ್ಯಾರಾ ಶಾಟ್‌ಪಟ್‌ನಲ್ಲಿ ಸ್ವರ್ಣ ಗೆದ್ದ ಭಾರತದ ಶರ್ಮಿಳಾ ಧನಕರ್ 'ಎಕ್ಸ್' ಚಿತ್ರ

ಗ್ಲಾಸ್ಗೊ (ಪಿಟಿಐ): ಶರ್ಮಿಳಾ ಧನಕರ್ ಅವರ ಜೀವನವೆಂದರೆ ಕಷ್ಟಗಳ ಸರಮಾಲೆ. ಒಂದರ ಹಿಂದೊಂದು ಅಪ್ಪಳಿಸಿದ ಸಂಕಷ್ಟಗಳನ್ನು ಮೀರಿ ನಿಂತರು. ಎರಡು ವರ್ಷದ ಮಗುವಾಗಿದ್ದಾಗಲೇ ಪೋಲಿಯೊದಿಂದಾಗಿ ಕಾಲು ಊನವಾಯಿತು. ಬಡಕುಟುಂಬದಲ್ಲಿ ಕಷ್ಟನಷ್ಟಗಳನ್ನು ಸಹಿಸಿಕೊಂಡು ಬೆಳೆದರು. ಮದುವೆಯೂ ಆಯಿತು. ಆದರೆ ಗಂಡನ ಮನೆಯಲ್ಲಿ ವರದಕ್ಷಿಣೆಗಾಗಿ ದಿನನಿತ್ಯ ಕಿರುಕುಳ ಅನುಭವಿಸಿದರು. ಪತಿಯನ್ನು ತೊರೆದರು.

ಈ ಎಲ್ಲ ಕಷ್ಟ-ಕೋಟಲೆಗಳನ್ನು ಹಿಂದಿಕ್ಕಿದ ಶರ್ಮಿಳಾ ಕಾಮನ್‌ವೆಲ್ತ್ ಕ್ರೀಡಾಕೂಟದ ಪ್ಯಾರಾ ವಿಭಾಗದ ಮಹಿಳೆಯರ ಎಫ್‌75 ಶಾಟ್‌ಪಟ್‌ನಲ್ಲಿ ಚಿನ್ನ ಗೆದ್ದರು. ಈ ಸಾಧನೆ ಮಾಡಿದ ಭಾರತದ ಮೊದಲ ಪ್ಯಾರಾ ಅಥ್ಲೀಟ್ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಅವರು 9.81 ಮೀಟರ್ಸ್ ದೂರ ಥ್ರೋ ಮಾಡಿದರು.

40 ವರ್ಷದ ಶರ್ಮಿಳಾ ಅವರಿಗೆ ಸ್ಪರ್ಧೆಯೊಡ್ಡಿದ್ದ ಕನ್ನಡತಿ ಶಿಲ್ಪಾ ಶೈಲಾ ಅವರು ಕಂಚು ಪಡೆದರು. ಶಿಲ್ಪಾ ಅವರು 7.26 ಮೀ. ದೂರ ಥ್ರೋ ಮಾಡಿದರು.

'ನನಗೆ ತುಂಬಾ ಸಂತಸವಾಗಿದೆ. ನನ್ನ ಈ ಸಾಧನೆಗಾಗಿ ತಾಯಿ ಬಹಳ ಕಷ್ಟಪಟ್ಟಿದ್ದಾರೆ. ಏಷ್ಯನ್ ಕ್ರೀಡಾ ಕೂಟದಲ್ಲಿ ಚಿನ್ನ ಗೆಲ್ಲುವುದು ನನ್ನ ಮುಂದಿರುವ ಗುರಿ' ಎಂದು ಶರ್ಮಿಳಾ ಹೇಳಿದ್ದಾರೆ.

ನೈಜೀರಿಯಾದ ಇಯುಚಾರಿಯಾ ಲೈಇಯಾಜಿ ಅವರು ಮೊದಲಿಗೆ ಕಂಚಿನ ಪದಕ ಪಡೆದಿದ್ದಾರೆಂದು ಹೇಳಲಾಯಿತು. ಶಿಲ್ಪಾ ನಾಲ್ಕನೇ ಸ್ಥಾನದಲ್ಲಿದ್ದರು. ಆದರೆ ಅಧಿಕೃತವಾಗಿ ವಿಶ್ಲೇಷಣೆ ನಡೆಸಿದ ನಂತರ ನೈಜೀರಿಯಾದ ಅಥ್ಲೀಟ್ ಎಸೆತದಲ್ಲಿ ಫೌಲ್ ಆಗಿರುವುದು ಕಂಡುಬಂದಿತು. ಆಗ ಶಿಲ್ಪಾ ಅವರನ್ನು ಮೂರನೇ ಸ್ಥಾನಕ್ಕೇರಿಸಲಾಯಿತು. ಈ ನಾಟಕೀಯ ಬೆಳವಣಿಗೆಯಿಂದ ಬೇಸರಗೊಂಡಂತೆ ಕಂಡ ನೈಜೀರಿಯಾ ಅಥ್ಲೀಟ್ ಮರುಪರಿಶೀಲನೆ ಮನವಿ ಸಲ್ಲಿಸುವ ಸಾಧ್ಯತೆ ಇದೆ.

ಭಾವುಕರಾದ ಶಿಲ್ಪಾ ಅವರು ಶರ್ಮಿಳಾ ಜೊತೆಗೂಡಿ ಸಂಭ್ರಮಿಸಿದರು.

ಹರಿಯಾಣದ ಚಿತ್ರೋಲಿಯ ಶರ್ಮಿಳಾ ಅವರು ಮದುವೆಯು ಮುರಿದುಬಿದ್ದ ನಂತರ ಬಹಳಷ್ಟು ಸಂಕಷ್ಟಗಳನ್ನು ಎದುರಿಸಿದ್ದರು. ಕುಟುಂಬದ ನೆರವು ಕೂಡ ಇರಲಿಲ್ಲ. ಕೆಲ ಸಮಯದ ನಂತರ ಉದ್ಯಮಿ ಅಜಿತ್ ಸಿಂಗ್ ಎಂಬುವವರೊಂದಿಗೆ ಮದುವೆಯಾದರು. 2020ರಲ್ಲಿ ಶರ್ಮಿಳಾ ಅವರು ಅಥ್ಲೆಟಿಕ್ಸ್‌ನಲ್ಲಿ ತಮ್ಮ ಜೀವನ ರೂಪಿಸಿಕೊಳ್ಳಲು ಅಜಿತ್ ಪ್ರೋತ್ಸಾಹ ನೀಡಿದರು. ಕೋಚ್ ಟೇಕ್ ಚಂದ್ ಅವರು ತರಬೇತಿ ನೀಡಿದರು. ಶರ್ಮಾಜಿ ಅವರು ಒಂದೇ ವರ್ಷದಲ್ಲಿ ರಾಷ್ಟ್ರೀಯ ಪ್ಯಾರಾ ಚಾಂಪಿಯನ್‌ಷಿಪ್‌ನಲ್ಲಿ ಶಾಟ್ ಪಟ್ ಮತ್ತು ಡಿಸ್ಕಸ್ ಥ್ರೋ (ಎಫ್‌75) ನಲ್ಲಿ ಚಿನ್ನದ ಸಾಧನೆ ಮಾಡಿದರು. 2022ರ ಬರ್ಮಿಂಗ್‌ಹ್ಯಾಮ್ ಕಾಮನ್‌ವೆಲ್ತ್ ಗೇಮ್ಸ್‌ಗೂ ಆಯ್ಕೆಯಾದರು. ಆಗ ನಾಲ್ಕನೇ ಸ್ಥಾನ ಪಡೆದಿದ್ದರು.

ಶರ್ಮಿಳಾ ಅವರನ್ನು ಪ್ರಧಾನಿ ನರೇಂದ್ರ ಮೋದಿ ಅಭಿನಂದಿಸಿದ್ದಾರೆ.

**ಎಫ್‌75 ವಿಭಾಗ:** ಪ್ಯಾರಾ ಅಥ್ಲೆಟಿಕ್ಸ್‌ನಲ್ಲಿ ಎಫ್‌75 ವರ್ಗೀಕರಣದಲ್ಲಿ ಕಾಲಿನ ಸ್ನಾಯುಗಳು ಊನಗೊಂಡ, ಕಾಲಿನ ಭಾಗದ ಬೆಳವಣಿಗೆ ಕುಂಠಿತವಾಗಿರುವುದು ಮತ್ತು ಅಂಗಗಳಲ್ಲಿ ನಿಶ್ಯಕ್ತವಾಗಿರುವ ಅಥ್ಲೀಟ್‌ಗಳಿಗೆ ಅವಕಾಶ ನೀಡಲಾಗುತ್ತದೆ.

**ಪದಕ ಪಟ್ಟಿ**

| ಸ್ಥಾನ | ದೇಶ | ಚಿನ್ನ | ಬೆಳ್ಳಿ | ಕಂಚು | ಒಟ್ಟು |
|---|---|---|---|---|---|
| 1 | ಆಸ್ಟ್ರೇಲಿಯಾ | 31 | 14 | 22 | 67 |
| 2 | ಇಂಗ್ಲೆಂಡ್ | 10 | 17 | 13 | 40 |
| 3 | ಕೆನಡಾ | 10 | 8 | 11 | 29 |
| 4 | ಸ್ಕಾಟ್ಲೆಂಡ್ | 7 | 4 | 3 | 14 |
| 5 | ನೈಜೀರಿಯಾ | 6 | 4 | 0 | 10 |
| 8 | ಭಾರತ | 2 | 5 | 3 | 10 |

Publication Date
29/07/2026

Presented by

# ಕರ್ನಾಟಕದ ಶಿಲ್ಪಾಗೆ ಅಭಿನಂದನೆಗಳ ಮಹಾಪೂರ

# ‘ಮುಂದಿನ ಗುರಿ ಪ್ಯಾರಾಲಿಂಪಿಕ್ಸ್’

ಪ್ರಜಾವಾಣಿ ವಾರ್ತೆ



ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಶಿಲ್ಪಾ ಶಾಟ್‌ಪಟ್ ಮಾಡಿದ ಪರಿ

**ಮೈಸೂರು:** ‘ಕಾಮನ್‌ವೆಲ್ತ್ ಕೂಟದ ಶಾಟ್‌ಪಟ್‌ನಲ್ಲಿ ಪದಕ ಜಯಿಸಿರುವುದು ಅತ್ಯಂತ ಹೆಮ್ಮೆಯ ಕ್ಷಣ. ನನ್ನ ಮುಂದಿನ ಗುರಿ 2028ರ ಪ್ಯಾರಾಲಿಂಪಿಕ್ಸ್’–

ಹೀಗೆಂದು ಸಂಭ್ರಮದ ಜೊತೆಗೆ ಮುಂದಿನ ಯೋಜನೆಯನ್ನೂ ಬಿಚ್ಚಿಟ್ಟದ್ದು ಕಾಮನ್‌ವೆಲ್ತ್ ಗೇಮ್ಸ್‌ನ ಶಾಟ್‌ಪಟ್ ಸ್ಪರ್ಧೆಯಲ್ಲಿ ಕಂಚಿನ ಪದಕಕ್ಕೆ ಕೊರಳೊಡ್ಡಿದ ಮೈಸೂರಿನ ಪ್ಯಾರಾ ಅಥ್ಲೀಟ್ ಕೆ.ಎಸ್. ಶಿಲ್ಪಾ.

ಸೋಮವಾರ ತಡರಾತ್ರಿ ಪದಕ ಜಯಿಸಿದ ಅವರಿಗೆ ಅಭಿನಂದನೆಯ ಕರೆಗಳು ಬರುತ್ತಲೇ ಇದ್ದವು. ಈ ನಡುವೆಯೇ ದೂರವಾಣಿ ಮೂಲಕ ‘ಪ್ರಜಾವಾಣಿ’ ಜೊತೆ ಖುಷಿ ಹಂಚಿಕೊಂಡರು.

‘ಸ್ಪರ್ಧೆಗೆ 17–18 ವರ್ಷ ಅನುಭವ ಇದ್ದವರೂ ಬಂದಿದ್ದರು. ನನ್ನದು ಒಂದು ವರ್ಷದ ಅಭ್ಯಾಸವಷ್ಟೇ. ಈ ನಡುವೆಯೇ ಕಂಚಿನ ಸಾಧನೆ ಆಗಿರುವುದು ಉತ್ಸಾಹ ಹೆಚ್ಚಿಸಿದೆ. ಕ್ರೀಡಾಕೂಟಕ್ಕೆ ಆಯ್ಕೆ ಆದ ಬಳಿಕ ಕೊಂಚ ಅಳುಕಿತ್ತು. ಆದರೆ ಕಠಿಣ ತರಬೇತಿ ಹಾಗೂ ಪ್ರೋತ್ಸಾಹ ಎಲ್ಲವನ್ನೂ ಸಾಧ್ಯವಾಗಿಸಿದೆ’ ಎಂದರು.

**ಪ್ರಾಯೋಜಕತ್ವ ಬೇಕು:** ‘ಕ್ರೀಡಾಕೂಟದಲ್ಲಿ ಪಾಲ್ಗೊಂಡ ಇತರ ಸ್ಪರ್ಧಿಗಳು ಕ್ರೀಡೆಗೆ ಅವಶ್ಯವಾದ ಗುಣಮಟ್ಟದ ಕೃತಕ ಕಾಲಿನೊಂದಿಗೆ ಬಂದಿದ್ದರು. ಆದರೆ ನಾನು ‘ಜೈಪುರ ಫುಟ್’ ಮಾದರಿಯ ಸಾಮಾನ್ಯ ದರ್ಜೆಯ ಕೃತಕ ಕಾಲಿನಲ್ಲೇ ಅಭ್ಯಾಸ ನಡೆಸಿದ್ದೆ. ಹಣಕಾಸಿನ ಕೊರತೆಯಿಂದ ಆ ಸೌಲಭ್ಯ ಸಾಧ್ಯವಾಗಿರಲಿಲ್ಲ. ಇನ್ನಷ್ಟು ನೆರವು ದೊರೆತರೆ ಖಂಡಿತ ಪ್ಯಾರಾಲಿಂಪಿಕ್ಸ್‌ನಲ್ಲಿಯೂ ಪದಕ ಗೆಲ್ಲುತ್ತೇನೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

> ಅಂತರರಾಷ್ಟ್ರೀಯ ಪ್ಯಾರಾಲಿಂಪಿಕ್ ಸಮಿತಿಯು ಸ್ಪರ್ಧೆಯ ನಿಯಮಗಳಲ್ಲಿ ಹಲವು ಬದಲಾವಣೆಗಳನ್ನು ತಂದಿದೆ. ಆದ್ದರಿಂದ ನಮ್ಮ ಸ್ಪರ್ಧಿಗಳು ನಿಯಮಗಳನ್ನು ಉಲ್ಲಂಘಿಸದಂತೆ ನಾನು ಜಾಗರೂಕನಾಗಿದ್ದೆ
>
> **ಕೆ.ಆರ್. ಸತ್ಯನಾರಾಯಣ,** ಭಾರತದ ಪ್ಯಾರಾ ಅಥ್ಲೆಟಿಕ್ಸ್ ತಂಡದ ಮುಖ್ಯ ಕೋಚ್

‘ಕಳೆದ ಒಂದೂವರೆ ವರ್ಷ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಎಸ್.ಡಿ. ಈಶನ್ ಮಾರ್ಗದರ್ಶನದಲ್ಲಿ ಶಿಲ್ಪಾ ಬೆವರು ಹರಿಸಿದ್ದರ ಫಲ ಇಂದು ನಮ್ಮ ಮುಂದಿದೆ. ಇನ್ನಷ್ಟು ಪ್ರಾಯೋಜಕತ್ವ ಹಾಗೂ ವೃತ್ತಿಪರ ತರಬೇತಿ ಸಿಕ್ಕರೆ 9–10 ಮೀಟರ್ಸ್ ವರೆಗೂ ಸರಾಗವಾಗಿ ಶಾಟ್‌ಪಟ್ ಮಾಡುವ ಸಾಮರ್ಥ್ಯ ಅವರಲ್ಲಿದೆ’ ಎಂದು ಶಿಲ್ಪಾರನ್ನು ಅಥ್ಲೆಟಿಕ್ಸ್‌ಗೆ ಕರೆತಂದ ಕರ್ನಾಟಕ ಪ್ಯಾರಾಲಿಂಪಿಕ್ಸ್ ಅಸೋಸಿಯೇಷನ್ ಜಂಟಿ ಕಾರ್ಯದರ್ಶಿ ರಾಘವೇಂದ್ರ ಹೇಳಿದರು.

**ಎಲ್ಲೆಡೆ ಸಂಭ್ರಮ:** ಶಿಲ್ಪಾ ಹುಟ್ಟೂರಾದ ಮೈಸೂರು ಜಿಲ್ಲೆಯ ಕೆ.ಆರ್. ನಗರ ತಾಲ್ಲೂಕಿನ ಕಂಚುಗಾರ ಕೊಪ್ಪಲಿನಲ್ಲಿ ಸಂಭ್ರಮ ಮನೆ ಮಾಡಿತ್ತು. ಊರಿನ ಮಗಳು ಅಂತರರಾಷ್ಟ್ರೀಯ ಕ್ರೀಡಾಕೂಟದಲ್ಲಿ ಪಾಲ್ಗೊಂಡು ಪದಕ ಗೆದ್ದಿದ್ದನ್ನು ಪೋಷಕರಾದ ಶೈಲ–ಶಾಂತಾ ದಂಪತಿಯ ಜೊತೆಗೆ ಗ್ರಾಮಸ್ಥರೂ ವೀಕ್ಷಿಸಿ ಖುಷಿಪಟ್ಟರು.

## ಸಮರ್ಪಣಾಭಾವದ ಅಥ್ಲೀಟ್: ಕೋಚ್ ಈಶನ್ ಸಂತಸ



ಎಸ್.ಡಿ. ಈಶನ್


**ಬೆಂಗಳೂರು:** ಗ್ರಾಮೀಣ ಪ್ರದೇಶದಿಂದ ಬಂದ ಶಿಲ್ಪಾ ಅವರು ಬಹಳ ಛಲಗಾತಿ ಮತ್ತು ಸಮರ್ಪಣಾ ಭಾವದವರು. ಕಷ್ಟಪಟ್ಟು ಅಭ್ಯಾಸ ಮಾಡಿದ್ದಾರೆ. ಇರುವ ಸೌಲಭ್ಯಗಳಲ್ಲಿಯೇ ಈ ಸಾಧನೆ ಮಾಡಿದ್ದಾರೆ. ಅಂತಹ ಅಥ್ಲೀಟ್‌ಗೆ ತರಬೇತಿ ನೀಡಲು ಸಮಯ ವಿನಿಯೋಗಿಸಿದ್ದು ಸಾರ್ಥಕವಾಗಿದೆ ಎಂದು ಅನುಭವಿ ಅಥ್ಲೆಟಿಕ್ಸ್ ಕೋಚ್ ಎಸ್.ಡಿ. ಈಶನ್ ಸಂತಸ ವ್ಯಕ್ತಪಡಿಸಿದರು.

ಮಂಗಳವಾರ ‘ಪ್ರಜಾವಾಣಿ’ಯೊಂದಿಗೆ ಮಾತನಾಡಿದ ಅವರು, ‘4 ವರ್ಷದ ಬಾಲಕಿಯಾಗಿದ್ದಾಗ ಲಾರಿ ಅಪಘಾತದಲ್ಲಿ ಅವರ ಎಡಗಾಲು ಊನವಾಗಿತ್ತು. ಪದವೀಧರೆಯಾಗಿ ಶಿಕ್ಷಕ ವೃತ್ತಿಯಲ್ಲಿದ್ದವರು. ಕ್ರೀಡೆಯಲ್ಲಿ ಆಸಕ್ತಿ ಬಂದ ಮೇಲೆ ಸಿಟಿಂಗ್ ವಾಲಿಬಾಲ್ ಮತ್ತು ಅಥ್ಲೆಟಿಕ್ಸ್‌ಗಳಲ್ಲಿ ಭಾಗವಹಿಸುತ್ತಿದ್ದರು. 2024ರಲ್ಲಿ ನನ್ನ ಬಳಿ ಬಂದರು. ಆಗಿನ್ನೂ ಅವರಿಗೆ ಕ್ಲಾಸಿಫಿಕೇಷನ್ ಇರಲಿಲ್ಲ. ಅದಕ್ಕಾಗಿ ಅವರನ್ನು ಸಿದ್ಧಗೊಳಿಸಿ, ಶಾಟ್‌ಪಟ್ ವಿಭಾಗಕ್ಕೆ ಅವರು ಸೂಕ್ತ ಎಂದು ನಿರ್ಧರಿಸಲಾಯಿತು. ನಂತರ ತರಬೇತಿ ಆರಂಭವಾಯಿತು. ಸಾಮಾನ್ಯ ಅಥ್ಲೀಟ್‌ಗಳಿಗೆ ತರಬೇತಿ ನೀಡುವುದಕ್ಕೂ ಪ್ಯಾರಾ ಕ್ರೀಡಾಪಟುಗಳನ್ನು ತರಬೇತುಗೊಳಿಸುವುದಕ್ಕೂ ಬಹಳ ವ್ಯತ್ಯಾಸವಿದೆ’ ಎಂದರು.

ಈಶನ್ ಅವರು ಏಷ್ಯನ್ ಗೇಮ್ಸ್‌ನಲ್ಲಿ ಕಂಚಿನ ಪದಕ ವಿಜೇತ ಅಥ್ಲೀಟ್ ಆಗಿದ್ದಾರೆ. ರೈಲ್ವೆ ಇಲಾಖೆಯಲ್ಲಿ ಸುಮಾರು ಮೂರು ದಶಕಕ್ಕೂ ಹೆಚ್ಚಿನ ಸಮಯ ತರಬೇತುದಾರರಾಗಿ ಕಾರ್ಯನಿರ್ವಹಿಸಿದ್ದಾರೆ.

‘ಪ್ಯಾರಾ ಅಥ್ಲೀಟ್‌ಗಳನ್ನು ಸಿದ್ಧಗೊಳಿಸಲು ನಾವು ಬಹಳಷ್ಟು ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಇದರ ಹಿಂದೆ ಹಲವರು ಶ್ರಮ ವಹಿಸಿರುತ್ತಾರೆ. ಶಿಲ್ಪಾ ಅವರನ್ನು ತರಬೇತುಗೊಳಿಸುವಲ್ಲಿ ಕೋಚ್ ಸತ್ಯನಾರಾಯಣ, ರಾಘವೇಂದ್ರ ಅವರ ಪಾತ್ರವೂ ಪ್ರಮುಖವಾಗಿದೆ. ಶಿಲ್ಪಾ ಅವರಿಗೆ ಉತ್ತಮ ಭವಿಷ್ಯ ಇದೆ’ ಎಂದು ಈಶನ್ ಹೇಳಿದರು.

# ಅಜಯ್ ಬಾಬುಗೆ ರಜತ ಪದಕ



ಗ್ಲಾಸ್ಗೊ (ಪಿಟಿಐ): ಭಾರತದ ಉದಯೋನ್ಮುಖ ವೇಟ್‌ಲಿಫ್ಟರ್ ವಲ್ಲೂರಿ ಅಜಯ್ ಬಾಬು ಅವರು ಕಾಮನ್‌ವೆಲ್ತ್ ಗೇಮ್ಸ್‌ನ ಪುರುಷರ 79 ಕೆಜಿ ವಿಭಾಗದಲ್ಲಿ ಬೆಳ್ಳಿ ಪದಕಕ್ಕೆ ಕೊರಳೊಡ್ಡಿದರು. ವೇಟ್‌ಲಿಫ್ಟಿಂಗ್ ಸ್ಪರ್ಧೆಯಲ್ಲಿ ಭಾರತಕ್ಕೆ ಲಭಿಸಿದ ಆರನೇ ಪದಕ ಇದಾಗಿದೆ.

ಸೋಮವಾರ ತಡರಾತ್ರಿ ನಡೆದ ರೋಚಕ ಸ್ಪರ್ಧೆಯಲ್ಲಿ ಆಂಧ್ರ ಪ್ರದೇಶದ 21 ವರ್ಷದ ಅಜಯ್ ಅವರು ಸ್ನ್ಯಾಚ್‌ನಲ್ಲಿ 149 ಕೆ.ಜಿ ಹಾಗೂ ಕ್ಲೀನ್ ಅಂಡ್ ಜರ್ಕ್‌ನಲ್ಲಿ 181 ಕೆ.ಜಿ ಸೇರಿದಂತೆ ಒಟ್ಟು 330 ಕೆ.ಜಿ ಭಾರ ಎತ್ತುವ ಮೂಲಕ ಕೂಟ ದಾಖಲೆಯೊಂದಿಗೆ ಎರಡನೇ ಸ್ಥಾನ ಪಡೆದರು.

ಮಲೇಷ್ಯಾದ ಎರಿ ಹಿದಾಯತ್ ಮುಹಮ್ಮದ್ ಅವರು ಒಟ್ಟು 331 ಕೆಜಿ (147 + 184 ಕೆಜಿ) ಭಾರ ಎತ್ತುವ ಮೂಲಕ ಕೂಟ ದಾಖಲೆಯೊಂದಿಗೆ ಚಿನ್ನದ ಪದಕ ಗೆದ್ದರು. ಅಜಯ್ ಅವರಿಗೆ ಕೂದಲೆಳೆಯ ಅಂತರದಲ್ಲಿ ಚಿನ್ನ ಕೈತಪ್ಪಿತು. ಇಂಗ್ಲೆಂಡ್‌ನ ಕ್ರಿಸ್ ಮರ್ರೆ (ಒಟ್ಟು 325 ಕೆಜಿ) ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಆರಂಭದಲ್ಲಿ ಹಿದಾಯತ್ ಕ್ಲೀನ್ ಅಂಡ್ ಜರ್ಕ್‌ನಲ್ಲಿ 181 ಕೆ.ಜಿ ಭಾರ ಎತ್ತುವ ಮೂಲಕ ಗೇಮ್ಸ್ ದಾಖಲೆಯನ್ನು ತಮ್ಮ ಹೆಸರಿಗೆ ವರ್ಗಾಯಿಸಿಕೊಂಡರು. ನಂತರ ಭಾರತದ ಸ್ಪರ್ಧಿ ತಮ್ಮ ಅಂತಿಮ ಪ್ರಯತ್ನದಲ್ಲಿ 181 ಕೆ.ಜಿ ಎತ್ತಿ ದಾಖಲೆ ಸರಿಗಟ್ಟಿದರು. ಆದರೆ, ಮಲೇಷ್ಯಾದ ಲಿಫ್ಟರ್ ತಮ್ಮ ಅಂತಿಮ ಪ್ರಯತ್ನದಲ್ಲಿ 184 ಕೆಜಿ ಭಾರ ಎತ್ತಿ, ದಾಖಲೆ ಉತ್ತಮಪಡಿಸುವ ಜೊತೆಗೆ ಚಿನ್ನಕ್ಕೆ ಮುತ್ತಿಕ್ಕಿದರು.

ಇದಕ್ಕೂ ಮುನ್ನ ಸ್ನ್ಯಾಚ್‌ನಲ್ಲಿ ಅಜಯ್ ಅವರು 149 ಕೆಜಿ ಭಾರ ಎತ್ತುವ ಹಾದಿಯಲ್ಲಿ ಎರಡು ಬಾರಿ ವಿಫಲರಾದರು. ಆದರೆ, ಅಂತಿಮ ಪ್ರಯತ್ನದಲ್ಲಿ ಲಯ ಕಂಡುಕೊಂಡರು. ಇದೂ ಕೂಟ ದಾಖಲೆಯಾಗಿದೆ. ಇಂಗ್ಲೆಂಡ್‌ನ ಕ್ರಿಸ್ 148 ಕೆಜಿ ಮತ್ತು ಹಿದಾಯತ್ 147 ಕೆಜಿ ಭಾರ ಎತ್ತಿದರು.

ಅಜಯ್ ಅವರು ಅಹಮದಾಬಾದ್‌ನಲ್ಲಿ ನಡೆದ 2025ರ ಕಾಮನ್‌ವೆಲ್ತ್ ಚಾಂಪಿಯನ್‌ಷಿಪ್‌ನ ಪುರುಷರ 79 ಕೆ.ಜಿ ವಿಭಾಗದಲ್ಲಿ ವೈಯಕ್ತಿಕ ಶ್ರೇಷ್ಠ ಒಟ್ಟು 335 ಕೆಜಿ (152 + 183) ತೂಕ ಎತ್ತುವ ಮೂಲಕ ಚಾಂಪಿಯನ್‌ಷಿಪ್ ದಾಖಲೆಯೊಂದಿಗೆ ಚಿನ್ನದ ಪದಕ ಗೆದ್ದಿದ್ದರು.

# ಸರ್ವೇಶ್ ಕುಶಾರೆ ಬೆಳ್ಳಿ ಸಂಭ್ರಮ



ಭಾರತದ ಹೈಜಂಪ್ ಅಥ್ಲೀಟ್ ಸರ್ವೇಶ್ ಕುಶಾರೆ ಪಿಟಿಐ ಚಿತ್ರ

**ಗ್ಲಾಸ್ಗೊ (ಪಿಟಿಐ):** ಈರುಳ್ಳಿ ಹೊಲದಲ್ಲಿ ಒಂದು ಪುಟ್ಟ ಹೊಂಡ. ಅದರಲ್ಲಿ ಸಡಿಲಗೊಳಿಸಿದ ಮಣ್ಣು, ಅದರ ಮೇಲೆ ಗೋವಿನಜೋಳದ ದಂಟು, ಹತ್ತಿಯ ಚೂರುಗಳು ಮತ್ತು ಕೃಷಿ ತ್ಯಾಜ್ಯವನ್ನು ಪೇರಿಸಿ ಸಿದ್ಧಗೊಳಿಸಿದ ಹಾಸಿಗೆ...

ಹೌದು; ಇದು ಸರ್ವೇಶ್ ಅನಿಲ್ ಕುಶಾರೆ ಅವರು ತಮ್ಮ ಹಳ್ಳಿಯಲ್ಲಿ ಹೈಜಂಪ್ ಅಭ್ಯಾಸಕ್ಕೆ ಮಾಡಿಕೊಂಡಿದ್ದ ವ್ಯವಸ್ಥೆ. ಮಹಾರಾಷ್ಟ್ರದ ದೇವಣಗಾಂವ್‌ನ ಸರ್ವೇಶ್ ಅವರು ಪಟ್ಟ ಪರಿಶ್ರಮಕ್ಕೆ ಈಗ ಫಲ ಸಿಕ್ಕಿದೆ. ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಪುರುಷರ ಹೈಜಂಪ್‌ನಲ್ಲಿ ಬೆಳ್ಳಿ ಪದಕ ಜಯಿಸಿದ್ದಾರೆ. ಈಚೆಗೆ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ದಾಖಲೆ ಬರೆದಿದ್ದ ಸರ್ವೇಶ್ ಇಲ್ಲಿ ಅಲ್ಪ ಅಂತರದಲ್ಲಿ ಚಿನ್ನದ ಪದಕ ಕೈತಪ್ಪಿಸಿಕೊಂಡರು.

ರೋಚಕವಾಗಿದ್ದ ಸ್ಪರ್ಧೆಯ ಫೈನಲ್‌ನಲ್ಲಿ 31 ವರ್ಷದ ಸರ್ವೇಶ್ ಅವರು 2.25 ಮೀಟರ್ಸ್ ಎತ್ತರ ಜಿಗಿದರು. ಆದರೆ ಅವರು 2.28 ಮೀ ಎತ್ತರವನ್ನು ದಾಟುವಲ್ಲಿ ವಿಫಲರಾದರು. ಅವರ ಪ್ರತಿಸ್ಪರ್ಧಿ ಜಮೈಕಾದ ಯಶಸ್ವಿಯಾಗಿ ಜಿಗಿದು, ಚಿನ್ನ ಕೊರಳಿಗೇರಿಸಿಕೊಂಡರು. ಇಂಗ್ಲೆಂಡ್‌ನ ಜ್ಯಾಕ್ ಕಿಮಾನಿ (2.20 ಮೀ) ಕಂಚು ಗಳಿಸಿದರು.

ಭಾರತದ ಇನ್ನೊಬ್ಬ ಅಥ್ಲೀಟ್ ಆದರ್ಶ್ ರಾಮ್ (2.15 ಮೀ) ಅವರು ಐದನೇ ಸ್ಥಾನ ಪಡೆದರು.

2022ರ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ತೇಜಸ್ವಿನ್ ಶಂಕರ್ ಅವರು ಕಂಚು ಜಯಿಸಿದ್ದರು. ಇದೀಗ ಅವರ ಸಾಲಿಗೆ ಸರ್ವೇಶ್ ಸೇರಿದ್ದಾರೆ. 27 ವರ್ಷದ ಸರ್ವೇಶ್ ಅವರಿಗೆ ತಮ್ಮ ವೈಯಕ್ತಿಕ ದಾಖಲೆಯನ್ನು (2.29ಮೀ) ಸಾಧಿಸಲು ಇಲ್ಲಿ ಸಾಧ್ಯವಾಗಲಿಲ್ಲ.

'ಮುಂಬರುವ ಏಷ್ಯನ್ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಜಯಿಸುವುದು ನನ್ನ ಗುರಿ' ಎಂದು 27 ವರ್ಷದ ಸರ್ವೇಶ್ ಹೇಳಿದ್ದಾರೆ.

ಸರ್ವೇಶ್, ಈಚೆಗೆ ಮೊನಾಕೊ ಡೈಮಂಡ್ ಲೀಗ್ ನಲ್ಲಿ ಕಂಚಿನ ಪದಕ ಜಯಿಸಿ ದಾಖಲೆ ಬರೆದಿದ್ದರು. ಹೋದ ತಿಂಗಳು ಭುವನೇಶ್ವರದಲ್ಲಿ ನಡೆದಿದ್ದ ಅಂತರ ರಾಜ್ಯ ಚಾಂಪಿಯನ್‌ಷಿಪ್‌ನಲ್ಲಿ 2.31 ಮೀ ಎತ್ತರ ಜಿಗಿದಿದ್ದರು.

Publication Date
29/07/2026

Presented by ಪ್ರಜಾವಾಣಿ

## ❖ ಹರ್ಡಲ್ಸ್: ಗಾಯಾಳಾದ ಶಿರ್ಸೆಗೆ 8ನೇ ಸ್ಥಾನ

- ರಾಷ್ಟ್ರೀಯ ದಾಖಲೆ ಹೊಂದಿರುವ ತೇಜಸ್ ಶಿರ್ಸೆ ಅವರು ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಪುರುಷರ 110 ಮೀಟರ್ ಹರ್ಡಲ್ಸ್ ಫೈನಲ್‌ಗೂ ಮುನ್ನ ಗಾಯಾಳಾಗಿ ಎಂಟನೇ ಸ್ಥಾನದೊಂದಿಗೆ ಅಭಿಯಾನ ಮುಗಿಸಿದರು.
- 24 ವರ್ಷದ ಶಿರ್ಸೆ ಅವರು: ಸ್ಪರ್ಧೆಯ ಫೈನಲ್‌ಗೆ ಅರ್ಹತೆ ಪಡೆದ ಭಾರತದ ಮೊದಲ ಅಥ್ಲೆಟ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಪ್ರಾಥಮಿಕ ಸುತ್ತಿನಲ್ಲಿ ಅವರು 13.76 ಸೆಕೆಂಡ್‌ಗಳಲ್ಲಿ ಗುರಿ ತಲುಪಿದ್ದರು.
- ಮಂಗಳವಾರ ಸಂಜೆ ಫೈನಲ್‌ನಲ್ಲಿ ಶಿರ್ಸೆ ಅವರು ಗುರಿ ತಲುಪಲು 15.39 ಸೆಕೆಂಡು ತೆಗೆದುಕೊಂಡರು. ಅವರ ರಾಷ್ಟ್ರೀಯ ದಾಖಲೆಯ ಸಮಯ 13.27 ಸೆಕೆಂಡುಗಳು.

- 'ತಾಲೀಮು ವೇಳೆಯಲ್ಲಿ ಎಡಗಾಲಿನ ಪಾದದ ಮಧ್ಯಭಾಗದಲ್ಲಿ ತೀವ್ರವಾದ ನೋವು ಮತ್ತು ಊತ ಕಾಣಿಸಿಕೊಂಡಿತು. ಕಾಲಿಗೆ ಟೇಪ್ ಸುತ್ತಿ ಕಣಕ್ಕಿಳಿದೆ' ಎಂದು ತೇಜಸ್ ಹೇಳಿದರು.

## ❖ ಬಾಕ್ಸಿಂಗ್: ಪ್ರೀತಿ, ಪ್ರಿಯಾಗೆ ಪದಕ ಖಚಿತ

- ಏಷ್ಯನ್ ಗೇಮ್ಸ್ ಕಂಚಿನ ಪದಕ ವಿಜೇತೆ ಪ್ರೀತಿ ಪವಾರ್ ಮತ್ತು ಹಾಲಿ ಏಷ್ಯನ್ ಚಾಂಪಿಯನ್ ಪ್ರಿಯಾ ಗಂಗಾಸ್ ಅವರು ಕಾಮನ್‌ವೆಲ್ತ್ ಕ್ರೀಡಾಕೂಟದ ಬಾಕ್ಸಿಂಗ್‌ನಲ್ಲಿ ತಮ್ಮ ತಮ್ಮ ವಿಭಾಗಗಳಲ್ಲಿ ಸೆಮಿಫೈನಲ್ ಪ್ರವೇಶಿಸುವ ಮೂಲಕ ಭಾರತಕ್ಕೆ ಎರಡು ಪದಕಗಳನ್ನು ಖಚಿತ ಪಡಿಸಿದ್ದಾರೆ.
- ಮಹಿಳೆಯರ 54 ಕೆಜಿ ವಿಭಾಗದಲ್ಲಿ 22 ವರ್ಷದ ಪ್ರೀತಿ 5-0 ಅಂತರದಿಂದ ಉತ್ತರ ಐರ್ಲೆಂಡ್‌ನ ನಿಕೋಲ್ ಕ್ಲೈಡ್ ವಿರುದ್ಧ ಭರ್ಜರಿ ಗೆಲುವು ದಾಖಲಿಸಿದರು. ಅವರು ಸೆಮಿ ಫೈನಲ್‌ನಲ್ಲಿ ಜಾಂಬಿಯಾದ ಕ್ಯಾಥರಿನ್ ಮ್ಯಾಪೆ ಅವರನ್ನು ಎದುರಿಸಲಿದ್ದಾರೆ. 60 ಕೆಜಿ ಕ್ವಾರ್ಟರ್‌ಫೈನಲ್‌ನಲ್ಲಿ ಪ್ರಿಯಾ 4-1 ಅಂತರದಿಂದ ಸ್ಥಳೀಯ ನೆಚ್ಚಿನ ಬಾಕ್ಸರ್ ನಿಯಾಮ್ ಮಿಚೆಲ್ ಅವರನ್ನು ಸೋಲಿಸಿದರು.
- ಪರ್ವೀನ್ ನಿರ್ಗಮನ: ಮಾಜಿ ಏಷ್ಯನ್ ಚಾಂಪಿಯನ್ ಪರ್ವೀನ್ ಹೂಡಾ 65 ಕೆಜಿ ಕ್ವಾರ್ಟರ್ ಫೈನಲ್‌ನಲ್ಲಿ 2-3ರಿಂದ ಇಂಗ್ಲೆಂಡ್‌ನ ಸಚಾ ಹಿಕ್ಕಿ ವಿರುದ್ಧ ಸೋತರು.

## ❖ 100 ಮೀ. ಬ್ಯಾಕ್‌ಸ್ಟ್ರೋಕ್: ಸೆಮಿಗೆ ಶ್ರೀಹರಿ

- ಕರ್ನಾಟಕದ ಈಜುತಾರೆ, ಒಲಿಂಪಿಯನ್ ಶ್ರೀಹರಿ ನಟರಾಜ್ ಅವರು ಕಾಮನ್‌ವೆಲ್ತ್ ಗೇಮ್ಸ್‌ನ ಪುರುಷರ 100 ಮೀ. ಬ್ಯಾಕ್‌ಸ್ಟ್ರೋಕ್ ಸ್ಪರ್ಧೆಯಲ್ಲಿ ಮಂಗಳವಾರ ಸೆಮಿಫೈನಲ್‌ಗೆ ಮುನ್ನಡೆದರು. ಆದರೆ, ಅನುಭವಿ ಈಜುಪಟು ಸಜನ್ ಪ್ರಕಾಶ್ ಅವರು 50 ಮೀ. ಬಟರ್‌ಫ್ಲೈ ಸ್ಪರ್ಧೆಯಲ್ಲಿ ನಿರಾಸೆ ಅನುಭವಿಸಿದರು.
- ಮೊದಲ ಹೀಟ್ಸ್‌ನಲ್ಲಿ ಶ್ರೀಹರಿ 55.58 ಸೆಕೆಂಡುಗಳಲ್ಲಿ ಗುರಿ ತಲುಪಿ ಐದನೇ ಸ್ಥಾನ ಗಳಿಸಿದರು.
- ಕಾರ್ತಿಕ್, ಇಮಾಂ ಫೈನಲ್‌ಗೆ: ಪ್ಯಾರಾ ಪುರುಷರ 50 ಮೀ. ಫ್ರೀಸ್ಟೈಲ್ ಈಜು ಸ್ಪರ್ಧೆಯಲ್ಲಿ ಭಾರತದ ಕಾರ್ತಿಕ್ ಬುಡುಗಿನಾ ಹಾಗೂ ಅಲಿ ಇಮಾಂ ಅವರು ಫೈನಲ್‌ಗೆ ಮುನ್ನಡೆದರು.

## ❖ ಐಎಸ್‌ಎಸ್‌ಎಫ್ ಶೂಟಿಂಗ್ ವಿಶ್ವಕಪ್: ಸೋನಮ್-ಹಿಮಾಂಶು ಜೋಡಿಗೆ ಕಂಚು

ಭಾರತದ ಸೋನಮ್ ಉತ್ತಮ್ ಮಸ್ಕರ್ ಹಾಗೂ ಹಿಮಾಂಶು ಧಿಲ್ಲಾನ್ ಜೋಡಿಯು ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ಶೂಟಿಂಗ್ ವಿಶ್ವಕಪ್‌ನ 10 ಮೀ. ಏರ್ ರೈಫಲ್ ಮಿಶ್ರ ತಂಡ ವಿಭಾಗದಲ್ಲಿ ಕಂಚಿನ ಪದಕ ಗೆದ್ದುಕೊಂಡಿತು. ಹಾಲಿ ವಿಶ್ವಕಪ್‌ನಲ್ಲಿ ಭಾರತಕ್ಕೆ ಸಿಕ್ಕ ನಾಲ್ಕನೇ ಪದಕವಿದು.

ಪದಕಪಟ್ಟಿಯಲ್ಲಿ ಅತಿಥೇಯ ಚೀನಾ (7 ಚಿನ್ನ ಸೇರಿ 18 ಪದಕ) ಅಗ್ರಸ್ಥಾನದಲ್ಲಿ ಮುಂದುವರಿದರೆ, ಅಮೆರಿಕ (ತಲಾ 2 ಚಿನ್ನ ಮತ್ತು ಬೆಳ್ಳಿ) ಎರಡನೇ ಸ್ಥಾನ ಕಾಯ್ದುಕೊಂಡಿದೆ. ಭಾರತ ಮೂರನೇ ಸ್ಥಾನದಲ್ಲಿದೆ.

35 ಜೋಡಿ ಕಣದಲ್ಲಿದ್ದ ಅರ್ಹತಾ ಸುತ್ತಿನಲ್ಲಿ ಸೋನಮ್- ಹಿಮಾಂಶು ಜೋಡಿ 6.34.6 ಅಂಕಗಳೊಂದಿಗೆ ಎರಡನೇ ಸ್ಥಾನ ಪಡೆಯಿತು. ಭಾರತದ ಇನ್ನೊಂದು ಜೋಡಿ ಇಳವೆನಿಲ್ ವಳರಿವನ್ ಪಾರ್ಥ್ ರಾಕೇಶ್ ಮಾನೆ (634.2 ಅಂಕ) ಮೂರನೇ ಸ್ಥಾನದೊಂದಿಗೆ ಫೈನಲ್ ಪ್ರವೇಶಿಸಿತ್ತು.

ಫೈನಲ್ ಸುತ್ತಿನಲ್ಲಿ ಆತಿಥೇಯ ರಾಷ್ಟ್ರದ ಜಿಫಿ ವಾಂಗ್- ಲಿಹಾವೊ ಶೆಂಗ್ ಜೋಡಿ (505 ಅಂಕ) ಸ್ವದೇಶದ ಯುಶೆನ್ ದು- ಚಾಂಗ್ ಹಾಂಗ್ ಝೂಂಗ್ (504.6) ಸವಾಲನ್ನು ಮೆಟ್ಟಿನಿಂತು, ಸ್ವರ್ಣಕ್ಕೆ ಕೊರಳೊಡ್ಡಿತು. ಸೋನಮ್ ಮತ್ತು ಹಿಮಾಂಶು 441.2 ಕಂಚಿನ ಪದಕ ತಮ್ಮದಾಗಿಸಿಕೊಂಡರು. ಇಳವೆನಿಲ್- ಪಾರ್ಥ್ ಜೋಡಿ (378.8 ಅಂಕ) ನಾಲ್ಕನೇ ಸ್ಥಾನದೊಂದಿಗೆ ಸ್ಪರ್ಧೆ ಮುಗಿಸಿತು.

## ❖ ಕಾನೂನು ತಜ್ಞರ ಜತೆ ಸಭೆ ನಡೆಸಿದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್: ಕಾವೇರಿ: ಮೇಲ್ಮನವಿಗೆ ಸಿದ್ಧತೆ

- 'ತಮಿಳುನಾಡಿಗೆ ಕಾವೇರಿ ನೀರು ಹರಿಸುವ ವಿಷಯದಲ್ಲಿ ಕಾವೇರಿ ನೀರು ನಿಯಂತ್ರಣ ಸಮಿತಿಯ ಶಿಫಾರಸಿನ ವಿರುದ್ಧ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಲಾಗುವುದು. ಈ ಬಗ್ಗೆ ಅಡ್ವಕೇಟ್ ಜನರಲ್, ಕಾನೂನು ತಜ್ಞರು ಹಾಗೂ ಅಧಿಕಾರಿಗಳ ಜೊತೆ ಸಭೆ ನಡೆಸಲಾಗಿದ್ದು, ಮೇಲ್ಮನವಿಗೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ' ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.
- ಕಾನೂನು ತಜ್ಞರ ಜತೆಗೆ ಸಭೆ ನಡೆಸಿದ ಬಳಿಕ ದೆಹಲಿಯ ಕರ್ನಾಟಕ ಭವನದಲ್ಲಿ ಅವರು ಮಾತನಾಡಿದರು.
- 'ಈ ಬಾರಿ ವರುಣ ಕೃಪೆ ತೋರಿಲ್ಲ. ಕಾವೇರಿ ನೀರು ಹರಿಸಬೇಕು ಎಂಬ ತಮಿಳುನಾಡಿನ ಮನವಿಯನ್ನು ಸಮಿತಿಯು ಈ ಹಿಂದೆ ಎರಡು ಬಾರಿ ತಿರಸ್ಕರಿಸಿತ್ತು. ಈ ಬಾರಿ ನೀರು ಹರಿಸಲು ಸೂಚಿಸಿದೆ. ಈ ಶಿಫಾರಸಿನ ವಿರುದ್ಧ ಮೇಲ್ಮನವಿ ಸಲ್ಲಿಸಲು ಸಚಿವ ರಾಮಲಿಂಗಾರೆಡ್ಡಿ ಹಾಗೂ ಸಂಬಂಧಪಟ್ಟ ಅಧಿಕಾರಿಗಳ ಜೊತೆ ಚರ್ಚೆ ಮಾಡಿದ್ದೇನೆ' ಎಂದರು.
- 'ಬೆಂಗಳೂರಿಗೆ ಮರಳಿದ ನಂತರ ವಿರೋಧ ಪಕ್ಷದ ನಾಯಕರ ಜೊತೆಯೂ ಈ ಬಗ್ಗೆ ಚರ್ಚೆ ಮಾಡಲಾಗುವುದು. ಈ ಮಧ್ಯೆ ತಮಿಳುನಾಡು ಮುಖ್ಯಮಂತ್ರಿಯವರು ನನ್ನ ಜೊತೆ ಚರ್ಚೆ ಮಾಡಲು ಇಂಗಿತ ವ್ಯಕ್ತಪಡಿಸಿ ಮುಖ್ಯಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ. ಅಲ್ಲದೆ, ನನ್ನ ಜತೆ ದೂರವಾಣಿ ಮೂಲಕ ಮಾತನಾಡಿದ್ದಾರೆ. ನಾವು ಅವರಿಗೆ ಕೊಡಬೇಕಾದ ಗೌರವ ನೀಡಿದ್ದು, ಸಭೆಗೆ ಬನ್ನಿ ಎಂದು ಹೇಳಿದ್ದೇನೆ' ಎಂದು ಹೇಳಿದರು.
- ಕಾವೇರಿ ಭಾಗದ ಪರಿಸ್ಥಿತಿ ವೀಕ್ಷಿಸಲು ಮನವಿ: 'ರಾಜ್ಯದ ಕಾವೇರಿ ಜಲಾನಯನ ಪ್ರದೇಶದ ಪರಿಸ್ಥಿತಿಯನ್ನು ವೀಕ್ಷಿಸುವಂತೆ ವಿಜಯ್ ಅವರಿಗೆ ಮನವಿ ಮಾಡಿದ್ದೇನೆ. ಅದಕ್ಕೆ ಅಗತ್ಯವಿರುವ ಹೆಲಿಕಾಪ್ಟರ್ ವ್ಯವಸ್ಥೆ ಮಾಡಲಾಗುವುದು ಎಂದು ಹೇಳಿದ್ದೇನೆ. ಅವರಿಗೂ ವಾಸ್ತವ ಪರಿಸ್ಥಿತಿಯ ಅನುಭವ ಆಗಬೇಕು. ಅವರ ತೀರ್ಮಾನವೇನು ಎಂಬುದನ್ನು ನೋಡೋಣ' ಎಂದು ಹೇಳಿದರು.
- **ಇಂದು ಪ್ರಾಧಿಕಾರದ ಸಭೆ:** ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಸಭೆ ಗುರುವಾರ ಮಧ್ಯಾಹ್ನ ನಡೆಯಲಿದೆ. ಕರ್ನಾಟಕ, ತಮಿಳುನಾಡು, ಕೇರಳ ಹಾಗೂ ಪುದುಚೆರಿಯ ಅಧಿಕಾರಿಗಳು ಭಾಗಿಯಾಗಲಿದ್ದಾರೆ.
- **ಹೆಚ್ಚುವರಿ ನೀರು:** ರೈತರ ಕಣ್ಣೀರು
- **ಮಂಡ್ಯ:** ಕಾವೇರಿ ನದಿ ನೀರಿನಲ್ಲಿ ತಮಿಳುನಾಡಿಗೆ ಸುಪ್ರೀಂ ಕೋರ್ಟ್ ಹಂಚಿಕೆ ಮಾಡಿದ ಪ್ರಮಾಣಕ್ಕಿಂತ 973 ಟಿಎಂಸಿ ಅಡಿ ಹೆಚ್ಚುವರಿ ನೀರು ರಾಜ್ಯದಿಂದ ಕಳೆದ 10 ವರ್ಷಗಳಲ್ಲಿ ಹರಿದುಹೋಗಿದೆ. ಆದರೆ, ಇಲ್ಲಿ ಒಣಗುತ್ತಿರುವ ಬೆಳೆಗಳಿಗೆ ನೀರು ಬಿಡುತ್ತಿಲ್ಲ ಎಂದು ರೈತರು ಕಣ್ಣೀರು ಸುರಿಸುತ್ತಿದ್ದಾರೆ.
- 2018ರ ಸುಪ್ರೀಂ ಕೋರ್ಟ್ ತೀರ್ಪಿನ ಪ್ರಕಾರ, ಪ್ರತಿವರ್ಷ ತಮಿಳುನಾಡಿಗೆ 177.25 ಟಿಎಂಸಿ ಅಡಿ ನೀರನ್ನು ಹಂಚಿಕೆ ಮಾಡಲಾಗಿದೆ. 2016ರಿಂದ 2026ರವರೆಗೆ ಒಟ್ಟು 1772.5 ಟಿಎಂಸಿ ಅಡಿ ನೀರು ಬಿಡಬೇಕಿತ್ತು. ಆದರೆ, ಬಿಳಿಗುಂಡ್ಲು ಜಲಮಾಪನ ಕೇಂದ್ರದಲ್ಲಿ ಕಳೆದ 10 ವರ್ಷಗಳಲ್ಲಿ ದಾಖಲಾದ ನೀರಿನ ಒಟ್ಟು ಪ್ರಮಾಣ 2,746 ಟಿಎಂಸಿ ಅಡಿ.

## ❖ 'ನೀರು ಹರಿಸಲು ಸಾಧ್ಯವಿಲ್ಲ'

- 'ಕಾವೇರಿ ನೀರು ನಿಯಂತ್ರಣ ಸಮಿತಿಯ ಆದೇಶದಂತೆ ತಮಿಳುನಾಡಿಗೆ ನೀರು ಹರಿಸಲು ಸಾಧ್ಯವಿಲ್ಲ' ಎಂದು ಜಲ ಸಂಪನ್ಮೂಲ ಸಚಿವ ರಾಮಲಿಂಗಾರೆಡ್ಡಿ ಸ್ಪಷ್ಟವಾಗಿ ಹೇಳಿದರು.
- ಇಲಾಖೆಯ ಹಿರಿಯ ಅಧಿಕಾರಿಗಳ ಜೊತೆ ವಿಧಾನಸೌಧದಲ್ಲಿ ಬುಧವಾರ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

Dr Rajkumar IAS/KAS Academy

- 'ತಮಿಳುನಾಡಿನ ಮೆಟ್ಟೂರು ಜಲಾಶಯದಲ್ಲಿ 36 ಟಿಎಂಸಿ ಅಡಿ, ಭವಾನಿ ಸಾಗರ ಜಲಾಶಯದಲ್ಲಿ 5 ಟಿಎಂಸಿ ಅಡಿ ಸೇರಿ 41 ಟಿಎಂಸಿ ಅಡಿ ನೀರಿದ್ದು, ನೆರೆ ರಾಜ್ಯಕ್ಕೆ ಸದ್ಯಕ್ಕೆ ನೀರಿನ ಅಗತ್ಯ ಇಲ್ಲ' ಎಂದು ಅವರು ಹೇಳಿದರು.

## ❖ ಯೋಜನೆಗೆ ಘಟನೋತ್ತರ ಪರಿಸರ ಅನುಮತಿ ಕೇಂದ್ರದ ಆದೇಶ ರದ್ದುಗೊಳಿಸಿದ 'ಸುಪ್ರೀಂ': 'ಪರಿಸರ' ಪೂರ್ವಾನುಮತಿ ಕಡ್ಡಾಯ

- ಪರಿಸರ ಸಂಬಂಧಿ ಅನುಮತಿ ಪಡೆಯದೆ ಕೈಗೆತ್ತಿಕೊಂಡ ಯೋಜನೆಗಳಿಗೆ ಘಟನೋತ್ತರವಾಗಿ ಪರಿಸರ ಅನುಮತಿ ನೀಡಲು ಅವಕಾಶ ಕಲ್ಪಿಸಿ ಕೇಂದ್ರ ಸರ್ಕಾರ 2021ರಲ್ಲಿ ಹೊರಡಿಸಿದ್ದ ಆದೇಶವನ್ನು ಸುಪ್ರೀಂ ಕೋರ್ಟ್ ಬುಧವಾರ ರದ್ದುಗೊಳಿಸಿದೆ.
- 'ಭವಿಷ್ಯಕ್ಕೆ ಅನ್ವಯವಾಗುವಂತೆ ಈ ತೀರ್ಪು ನೀಡಲಾಗಿದೆ' ಎಂದು ನ್ಯಾಯಾಲಯ ಸ್ಪಷ್ಟಪಡಿಸಿದೆ. ಇದರಿಂದಾಗಿ, ಕರ್ನಾಟಕದ ವಿಜಯಪುರದಲ್ಲಿ ನಿರ್ಮಾಣಗೊಂಡಿರುವ ವಿಮಾನ ನಿಲ್ದಾಣ ಸೇರಿದಂತೆ 'ನೆಲಸಮ'ದ ಭೀತಿ ಎದುರಿಸುತ್ತಿರುವ ಹಲವಾರು ಸಾರ್ವಜನಿಕ ಯೋಜನೆಗಳ ಬಗ್ಗೆ ಮೂಡಿದ್ದ ಆತಂಕ ದೂರವಾಗಿದೆ.
- ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿಗಳಾದ ಜಾಯ್ ಮಾಲ್ಯಾ ಬಾಗ್ಚಿ ಹಾಗೂ ವಿಪುಲ್ ಎಂ. ಪಂಚೋಲಿ ಅವರ ಪೀಠವು, ಪರಿಸರ ಸುರಕ್ಷತಾ ಕ್ರಮಗಳನ್ನು ಮತ್ತಷ್ಟು ಬಲಪಡಿಸುವ ಈ ಮಹತ್ವದ ತೀರ್ಪು ನೀಡಿತು.
- ಕೇಂದ್ರ ಸರ್ಕಾರವು 1986ರ ಪರಿಸರ (ಸಂರಕ್ಷಣೆ) ಕಾಯ್ದೆಯ ಸೆಕ್ಷನ್ 3ರ ಅಡಿಯಲ್ಲಿ ಘಟನೋತ್ತರವಾಗಿ ಪರಿಸರ ಅನುಮತಿ ಕಾರ್ಯವಿಧಾನವನ್ನು ರೂಪಿಸುವ ಅಧಿಕಾರವನ್ನು ಹೊಂದಿದೆಯಾದರೂ, ಕೇವಲ ಆದೇಶದ ಮೂಲಕ ಆ ಅಧಿಕಾರ ಚಲಾಯಿಸಲು ಸಾಧ್ಯವಿಲ್ಲ ಎಂದು ಪೀಠವು ಅಭಿಪ್ರಾಯಪಟ್ಟಿದೆ. ಸರ್ಕಾರವು ಅಂತಹ ಅಧಿಕಾರವನ್ನು ಶಾಸನಬದ್ಧ ಅಧಿಸೂಚನೆಯ ಮೂಲಕವೇ ತರಬೇಕು ಎಂದು ಸ್ಪಷ್ಟಪಡಿಸಿತು.
- 'ನಾವು 2021ರ ಕೇಂದ್ರ ಸರ್ಕಾರದ ಆದೇಶ ಅನೂರ್ಜಿತ ಎಂದು ಪರಿಗಣಿಸುತ್ತೇವೆ ಮತ್ತು ಭವಿಷ್ಯಕ್ಕೆ ಅನ್ವಯಯವಾಗುವಂತೆ ಅದನ್ನು ರದ್ದುಗೊಳಿಸುತ್ತೇವೆ. ಸಂವಿಧಾನದ 142ನೇ ವಿಧಿಯ ಅಡಿಯಲ್ಲಿ ನಮ್ಮ ಅಧಿಕಾರ ಬಳಸಿಕೊಂಡು ಈ ನಿರ್ಧಾರ ತೆಗೆದುಕೊಂಡಿದ್ದೇವೆ' ಎಂದು ಪೀಠ ಹೇಳಿದೆ.

**'ಹಾಲಿ ಯೋಜನೆಗಳಿಗೆ ಅನ್ವಯಿಸದು'**

- ತನ್ನ ತೀರ್ಪು ಈಗಾಗಲೇ ಚಾಲ್ತಿಯಲ್ಲಿರುವ ಮತ್ತು ಪೂರ್ಣಗೊಂಡಿರುವ ಯೋಜನೆಗಳಿಗೆ ಅನ್ವಯಿಸದು, ಭವಿಷ್ಯದ ಪ್ರಕರಣಗಳಿಗಷ್ಟೇ ಅನ್ವಯಿಸಲಿದೆ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ.
- ಈಗಾಗಲೇ ಚಾಲ್ತಿಯಲ್ಲಿರುವ ಹಲವಾರು ಯೋಜನೆಗಳಲ್ಲಿ ಸಾರ್ವಜನಿಕ ಹಿತಾಸಕ್ತಿಯೂ ಅಡಗಿರುವುದನ್ನು ಪೀಠವು ಗಮನಿಸಿತು.
- ಯೋಜನೆಗಳ ಆರಂಭಕ್ಕೂ ಮುನ್ನ ಪರಿಸರ ಸಂಬಂಧಿ ಅನುಮತಿ ಪಡೆಯದೆ ಕೈಗೆತ್ತಿಕೊಂಡ ಹಲವು ಯೋಜನೆಗಳು ಇವೆ.

**ಪ್ರಮುಖ ಅಂಶಗಳು**

- ಯೋಜನೆಗಳಿಗೆ ಘಟನೋತ್ತರ ಪರಿಸರ ಅನುಮತಿ ನೀಡುವ ವ್ಯವಸ್ಥೆಯನ್ನು ಜಾರಿಗೆ ತರುವ ಅಧಿಕಾರ ಸರ್ಕಾರಕ್ಕೆ ಇದೆಯಾದರೂ, ಅದನ್ನು ಸೂಕ್ತ ಶಾಸನಬದ್ಧ ಅಧಿಸೂಚನೆಯ ಮೂಲಕವೇ ಮಾಡಬೇಕು ಎಂಬುದನ್ನು ತೀರ್ಪು ಸ್ಪಷ್ಟಪಡಿಸಿದೆ.
- 'ಪರಿಸರ ನಿಯಮ ಉಲ್ಲಂಘನೆಯ ಪ್ರಕರಣಗಳನ್ನು ನಿರ್ವಹಿಸಲು ಕೇಂದ್ರ ಸರ್ಕಾರ 2021ರಲ್ಲಿ ಹೊರಡಿಸಿದ್ದ ಆದೇಶವನ್ನು ಪ್ರಶ್ನಿಸಿ 'ವನಶಕ್ತಿ' ಮತ್ತು ಇತರ ಸ್ವಯಂಸೇವಾ ಸಂಸ್ಥೆಗಳು ಸಲ್ಲಿಸಿದ್ದ ಅರ್ಜಿಗಳ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ಈ ತೀರ್ಪು ನೀಡಿದೆ.

Dr. Rajkumar IAS/KAS Academy

- 2021ರ ಆದೇಶ ಮತ್ತು ಅದಕ್ಕೂ ಮುಂಚಿನ 2017ರ ಅಧಿಸೂಚನೆಯ ಅಡಿಯಲ್ಲಿ ಈಗಾಗಲೇ ನೀಡಲಾದ ಪರಿಸರ ಅನುಮೋದನೆಗಳು, ಪ್ರತ್ಯೇಕವಾಗಿ ಪ್ರಶ್ನಿಸಲ್ಪಡದ ಹೊರತು ಮಾನ್ಯವಾಗಿರುತ್ತವೆ. ಇವೆರಡರ ಅಡಿಯಲ್ಲಿ ಯಾವುದೇ ಹೊಸ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಪೀಠವು ಹೇಳಿದೆ.

### ಮೇಕೆದಾಟು: ಯೋಜನೆಯ ಸಮೀಕ್ಷೆಗೆ ಅನುಮತಿ ನೀಡುವುದಕ್ಕೆ ಈ ಕ್ರಮ

# ಎನ್‌ಟಿಸಿಎ ಅಭಿಪ್ರಾಯ ಕೇಳಿದ ಕೇಂದ್ರ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಮೇಕೆದಾಟು ಸಮತೋಲನ ಜಲಾಶಯ ಯೋಜನೆಯ ಸಮೀಕ್ಷೆಗೆ ಅನುಮತಿ ನೀಡುವುದಕ್ಕೆ ಸಂಬಂಧಿಸಿದಂತೆ, ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದಿಂದ (ಎನ್‌ಟಿಸಿಎ) ಕೇಂದ್ರ ಅರಣ್ಯ ಹಾಗೂ ಪರಿಸರ ಸಚಿವಾಲಯವು ಅಭಿಪ್ರಾಯ ಕೇಳಿದೆ.

ಯಾವುದೇ ಅಭಯಾರಣ್ಯದಲ್ಲಿ ಹೊಸ ಅಧ್ಯಯನ ಹಾಗೂ ಸಮೀಕ್ಷೆ ನಡೆಸಲು ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿಯ ಒಪ್ಪಿಗೆ ಅಗತ್ಯ. ಮೇಕೆದಾಟು ಯೋಜನೆಯ ಸಮೀಕ್ಷೆ ನಡೆಸಲು ಅನುಮತಿ ನೀಡುವಂತೆ ಕೋರಿ ಕಾವೇರಿ ನೀರಾವರಿ ನಿಗಮವು ಪಿಸಿಸಿಎಫ್ (ವನ್ಯಜೀವಿ) ಮೂಲಕ ಫೆಬ್ರುವರಿಯಲ್ಲಿ ಪ್ರಸ್ತಾವ ಸಲ್ಲಿಸಿತ್ತು. ಈ ಪ್ರಸ್ತಾವಕ್ಕೆ ರಾಜ್ಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿ ಜೂನ್‌ನಲ್ಲಿ ಅನುಮೋದನೆ ನೀಡಿತ್ತು.

ಮೇಕೆದಾಟು ಯೋಜನೆಗೆ ಕಾವೇರಿ ವನ್ಯಜೀವಿ ಧಾಮದ 4,879 ಹೆಕ್ಟೇರ್ ಅರಣ್ಯ ಭೂಮಿ, 198 ಹೆಕ್ಟೇರ್ ಮೀಸಲು ಅರಣ್ಯ ಮತ್ತು 190 ಹೆಕ್ಟೇರ್ ಕಂದಾಯ ಭೂಮಿ ಬಳಸಿಕೊಳ್ಳಲಾಗುತ್ತದೆ. ಕಾವೇರಿ ವನ್ಯಜೀವಿ ಅರಣ್ಯವು ಕರ್ನಾಟಕ ರಾಜ್ಯದೊಳಗೆ 1,027 ಚದರ ಕಿ.ಮೀ. ವಿಸ್ತೀರ್ಣದಲ್ಲಿ ಹರಡಿಕೊಂಡಿದೆ. ಇದು, ಮೈಸೂರು ಆನೆ ಮೀಸಲು ಪ್ರದೇಶದ ಭಾಗವಾಗಿದೆ. ಹುಲಿಗಳು ಮತ್ತು ಆನೆಗಳ ಕಾರಿಡಾರ್ ಆಗಿದೆ. ಹೀಗಾಗಿ, ಎನ್‌ಟಿಸಿಎ ಅಭಿಪ್ರಾಯವನ್ನು ಅರಣ್ಯ ಸಚಿವಾಲಯ ಕೇಳಿದೆ.

**ಯೋಜನೆಗೆ ಬೇಕಿರುವ ಜಾಗ (ಹೆಕ್ಟೇರ್‌ಗಳಲ್ಲಿ)**

| ಜಿಲ್ಲೆ | ಅರಣ್ಯ ಜಾಗ | ಕಂದಾಯ ಜಾಗ |
|---|---|---|
| ಬೆಂಗಳೂರು ದಕ್ಷಿಣ | 2,163 | 181.2 |
| ಮಂಡ್ಯ | 1,010.66 | 8.99 |
| ಚಾಮರಾಜನಗರ | 1,902.89 | - |
| ಒಟ್ಟು | 5,077 | 190.26 |

ಈ ಯೋಜನೆಯಡಿ 67.16 ಟಿಎಂಸಿ ಅಡಿ ನೀರು ಸಂಗ್ರಹಿಸಲು ಸಮತೋಲನ ಜಲಾಶಯ ನಿರ್ಮಿಸಲಾಗುತ್ತದೆ. ಜತೆಗೆ, ಸೇತುವೆ, ಭೂಗತ ವಿದ್ಯುತ್ ಕೇಂದ್ರ ಹಾಗೂ ಸುರಂಗ ನಿರ್ಮಾಣ ಮಾಡಲಾಗುತ್ತದೆ. ಬೆಂಗಳೂರಿಗೆ 4.75 ಟಿಎಂಸಿ ಅಡಿ ಕುಡಿಯುವ ನೀರು ಪೂರೈಸಲು ಜಾಕ್‌ವೆಲ್ ಕಮ್ ಪಂಪ್‌ಹೌಸ್ ನಿರ್ಮಿಸಲಾಗುತ್ತದೆ. ಯೋಜನೆಯಿಂದಾಗಿ ಮಡಿವಾಳ, ಕೊಂಗೆದೊಡ್ಡಿ, ಸಂಗಮ, ಬೊಮ್ಮಸಂದ್ರ ಹಾಗೂ ಮುತ್ತತ್ತಿ ಗ್ರಾಮಗಳು ಮುಳುಗಡೆಯಾಗಲಿವೆ.

'ಸಮೀಕ್ಷೆ ವೇಳೆ ಆವಾಸಸ್ಥಾನಗಳು ನಾಶವಾಗಲಿವೆ. ಭೂತಾಂತ್ರಿಕ ಅಧ್ಯಯನದಿಂದಾಗಿ ದಟ್ಟವಾದ ಸಸ್ಯವರ್ಗ ನಾಶವಾಗಲಿದೆ. ಜನರ ಓಡಾಟ, ಡ್ರಿಲ್ಲಿಂಗ್ ರಿಗ್‌ಗಳಿಂದ ಶಬ್ದ ಮತ್ತು ಕಂಪನ, ವಾಹನಗಳ ಸಂಚಾರದಿಂದಾಗಿ ಕಾಡುಪ್ರಾಣಿಗಳಿಗೆ ತೊಂದರೆ ಉಂಟಾಗಲಿದೆ. ಅಭಯಾರಣ್ಯ ದಲ್ಲಿ ಕಾಂಕ್ರೀಟ್ ಕಂಬಗಳನ್ನು ಬಳಸುವುದರಿಂದ ಪ್ರಾಣಿಗಳ ಸುರಕ್ಷತೆ ಮತ್ತು ಆವಾಸಸ್ಥಾನದ ಸಮಗ್ರತೆಗೆ ದೀರ್ಘ ಕಾಲೀನ ಅಪಾಯ ಉಂಟಾಗಲಿದೆ' ಎಂದು ಕಾವೇರಿ ನೀರಾವರಿ ನಿಗಮವು ಪ್ರಸ್ತಾವದಲ್ಲಿ ಹೇಳಿತ್ತು.

**ಯಾವ ವಿಷಯಗಳಲ್ಲಿ ಸಮೀಕ್ಷೆ?**

- ಭೂತಾಂತ್ರಿಕ ಅಧ್ಯಯನ
- ಅರಣ್ಯ ತಿರುವು ಪ್ರಸ್ತಾವದ ಭಾಗವಾಗಿ ಕಲ್ಲಿನ ಕಂಬಗಳನ್ನು ಬಳಸಿಕೊಂಡು ಎಫ್‌ಆರ್‌ಎಲ್ ಗಡಿ ಗುರುತಿಸುವಿಕೆ
- ಅರಣ್ಯ ತಿರುವು ಪ್ರಸ್ತಾವದ ಭಾಗವಾಗಿ ಮರಗಳ ಎಣಿಕೆ
- ವನ್ಯಜೀವಿ ಸಂರಕ್ಷಣಾ ಯೋಜನೆಯಿಂದ ಜೀವ ವೈವಿಧ್ಯದ ಮೇಲಾಗುವ ಪರಿಣಾಮಗಳ ಅಧ್ಯಯನ
- ಪರಿಸರ ಪರಿಣಾಮದ ಅಧ್ಯಯನದ ಭಾಗವಾಗಿ ಮೂಲ ದತ್ತಾಂಶ ಸಂಗ್ರಹ

Publication Date
30/07/2026

Presented by ಪ್ರಜಾವಾಣಿ

### ರಾಜ್ಯದ ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳಲ್ಲಿ ಹೆಚ್ಚಿದ ಉತ್ಪಾದನೆ

# ಹೆಚ್ಚುವರಿ ಕಲ್ಲಿದ್ದಲು ಪೂರೈಸಲು ಸಮ್ಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಶಾಖೋತ್ಪನ್ನ ವಿದ್ಯುತ್ ಉತ್ಪಾದನೆ ಪ್ರಮಾಣವನ್ನು ಹೆಚ್ಚಿಸಿದ್ದು ಇದಕ್ಕೆ ಅನುಗುಣವಾಗಿ ಹೆಚ್ಚುವರಿ ಕಲ್ಲಿದ್ದಲು ಪೂರೈಸಲು ಕಂಪನಿಗಳು ಸಮ್ಮತಿಸಿವೆ ಎಂದು ಕರ್ನಾಟಕ ವಿದ್ಯುತ್ ನಿಗಮ (ಕೆಪಿಸಿಎಲ್) ತಿಳಿಸಿದೆ.

ಮಳೆ ಕೊರತೆಯಾಗಿರುವ ಕಾರಣ ಅನಿವಾರ್ಯವಾಗಿ ಶಾಖೋತ್ಪನ್ನ ವಿದ್ಯುತ್ ಉತ್ಪಾದನೆಯನ್ನೇ ಹೆಚ್ಚಾಗಿ ಅವಲಂಬಿಸಿದ್ದು, ಅದಕ್ಕೆ ಅಗತ್ಯವಿರುವ ಹೆಚ್ಚುವರಿ ಕಲ್ಲಿದ್ದಲು ಸಂಗ್ರಹಕ್ಕೆ ನಿಗಮವು ಮುಂದಾಗಿದೆ.

> **ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡಿ, ಹೆಚ್ಚು ವಿದ್ಯುತ್ ಉತ್ಪಾದನೆಗಾಗಿ ಹೆಚ್ಚುವರಿಯಾಗಿ ಕಲ್ಲಿದ್ದಲು ತರಿಸಿಕೊಳ್ಳಲು ಎಲ್ಲ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗಿದೆ**
> **ಕೆ.ಜೆ.ಜಾರ್ಜ್,** ಇಂಧನ ಸಚಿವ

ಕೆಪಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ರಾಜೇಂದ್ರ ಚೋಳನ್ ನೇತೃತ್ವದಲ್ಲಿ ಹಿರಿಯ ಅಧಿಕಾರಿಗಳು ವೆಸ್ಟರ್ನ್ ಕೋಲ್ ಫೀಲ್ಡ್ ಲಿಮಿಟೆಡ್ (ಡಬ್ಲ್ಯುಸಿಎಲ್) ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ ಹೇಮಂತ್ ಶರತ್ ಪಾಂಡೆ ಅವರೊಂದಿಗೆ ಚರ್ಚೆ ನಡೆಸಿದ್ದಾರೆ. ಆರ್‌ಟಿಪಿಎಸ್‌ಗೆ ಈಗ ನೀಡುತ್ತಿರುವ ಕಲ್ಲಿದ್ದಲು ಜೊತೆಗೆ ಪ್ರತಿದಿನ ಹೆಚ್ಚುವರಿಯಾಗಿ 4,000 ಟನ್ ಕಲ್ಲಿದ್ದಲು ಪೂರೈಸಲು ಅವರು ಸಮ್ಮತಿಸಿದ್ದಾರೆ.

ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಸ್ಥಾವರದ ಘಟಕ 1 ಮತ್ತು 2ಕ್ಕೆ ಮೀಸಲಾದ ಬಾರಂಜ್ ಕ್ಯಾಪ್ಟಿವ್ ಕಲ್ಲಿದ್ದಲು ಗಣಿಯಿಂದ ಈಗ ನಿತ್ಯ 16 ಸಾವಿರ ಟನ್ ಕಲ್ಲಿದ್ದಲು ಬರುತ್ತಿದ್ದು, ಇದನ್ನು 25 ಸಾವಿರ ಟನ್‌ಗೆ ಹೆಚ್ಚಿಸಲು ವ್ಯವಸ್ಥೆ ಮಾಡಲಾಗಿದೆ.

'ರಾಯಚೂರು ಶಾಖೋತ್ಪನ್ನ ವಿದ್ಯುತ್ ಸ್ಥಾವರಕ್ಕೆ ಈಗ ಪೂರೈಸುತ್ತಿರುವ ಕಲ್ಲಿದ್ದಲು ಜತೆಗೆ ನಿತ್ಯ 1ರಿಂದ 2 ರೇಕ್ ಹೆಚ್ಚುವರಿಯಾಗಿ ಒದಗಿಸುವಂತೆ ಕೋಲ್ ಇಂಡಿಯಾ ಲಿಮಿಟೆಡ್ ಜತೆಗೂ ಮಾತುಕತೆ ನಡೆಸಲಾಗಿದೆ. ಬೇಡಿಕೆಗೆ ತಕ್ಕಂತೆ ಕಲ್ಲಿದ್ದಲು ಪೂರೈಸಲು ಕೋಲ್ ಇಂಡಿಯಾ ಲಿಮಿಟೆಡ್ ಅಧಿಕಾರಿಗಳು ಸಮ್ಮತಿಸಿದ್ದಾರೆ' ಎಂದು ರಾಜೇಂದ್ರ ಚೋಳನ್ ತಿಳಿಸಿದ್ದಾರೆ.

'ಮಳೆ ಕೊರತೆಯಿಂದಾಗಿ ಜಲ ವಿದ್ಯುತ್ ಉತ್ಪಾದನೆ ಕುಂಠಿತಗೊಂಡಿದ್ದು, ಈ ಕೊರತೆಯನ್ನು ನೀಗಿಸಲು ರಾಯಚೂರು, ಯರಮರಸ್ ಮತ್ತು ಬಳ್ಳಾರಿಯ ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳಲ್ಲಿ ಪ್ರತಿನಿತ್ಯ 100 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದನೆ ಮಾಡಲು ಕೆಪಿಸಿಎಲ್ ನಿರ್ಧರಿಸಿದೆ. ಇದಕ್ಕೆ ಪ್ರತಿನಿತ್ಯ 20 ರೇಕ್‌ವರೆಗೂ ಕಲ್ಲಿದ್ದಲು ಅಗತ್ಯವಿದ್ದು, ಅಷ್ಟನ್ನು ತರಿಸಿಕೊಳ್ಳಲು ವ್ಯವಸ್ಥೆ ಮಾಡಲಾಗಿದೆ' ಎಂದು ಅವರು ಹೇಳಿದ್ದಾರೆ.

## ❖ ಇ-20 ಪೆಟ್ರೋಲ್‌ನಿಂದಾಗಿ ಬಿಎಸ್-3 ವಾಹನದಲ್ಲಿ ಸಮಸ್ಯೆ

- 2005ರ ಏಪ್ರಿಲ್ 1ರಿಂದ 2016ರ ನಡುವೆ ತಯಾರಾದ ಬಿಎಸ್-3 ಮಾದರಿಯ ವಾಹನಗಳಲ್ಲಿ ಇ-20 ಪೆಟ್ರೋಲ್ ಬಳಸಿದಾಗ ಅವುಗಳಲ್ಲಿನ ಕೆಲವು ರಬ್ಬರ್ ಬಿಡಿಭಾಗಗಳು ಹಾಗೂ ಗ್ಯಾಸ್ಕೆಟ್‌ಗಳನ್ನು ಬದಲಾಯಿಸುವ ಪರಿಸ್ಥಿತಿ ಎದುರಾಗಬಹುದು ಎಂದು ಕೇಂದ್ರ ಸರ್ಕಾರವು ಸಂಸತ್ತಿಗೆ ಬುಧವಾರ ತಿಳಿಸಿದೆ.
- ರಾಜ್ಯಸಭೆಗೆ ಲಿಖಿತ ಉತ್ತರ ನೀಡಿರುವ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವ ನಿತಿನ್ ಗಡ್ಕರಿ ಅವರು ಈ ಮಾಹಿತಿ ಒದಗಿಸಿದ್ದಾರೆ. ಇ-20 ಪೆಟ್ರೋಲ್‌ನಿಂದ ವಾಹನಗಳ ಇಂಧನ ದಕ್ಷತೆ ಕಡಿಮೆ ಆಗುತ್ತದೆ ಎಂಬ ಕಳವಳ ಕುರಿತಾಗಿ ಅವರು 'ಇಂಧನ ಮಾತ್ರವೇ ಅಲ್ಲದೆ ವಾಹನಗಳ ಇಂಧನ ದಕ್ಷತೆಯ ಮೇಲೆ ಇತರ ಹಲವು ಅಂಶಗಳೂ ಪ್ರಭಾವ ಬೀರುತ್ತವೆ ಎಂಬುದನ್ನು ವಾಹನ ತಯಾರಿಕಾ ಕಂಪನಿಗಳು ಹಾಗೂ ವಾಹನ ಪರೀಕ್ಷಾ ಸಂಸ್ಥೆಗಳು ಹೇಳಿವೆ' ಎಂದಿದ್ದಾರೆ.
- ಇ-20 ಪೆಟ್ರೋಲ್‌ನಿಂದ ದ್ವಿಚಕ್ರ ವಾಹನ ಹಾಗೂ ಕಾರುಗಳ ಮೇಲೆ ಆಗುವ ಪರಿಣಾಮಗಳ ಬಗ್ಗೆ ಅಧ್ಯಯನ ನಡೆದಿದೆ. ಕಾರು ಅಥವಾ ದ್ವಿಚಕ್ರ ವಾಹನಗಳ ಎಂಜಿನ್‌ನಲ್ಲಿ ಬದಲಾವಣೆ ತರಬೇಕು ಎಂಬ ಅಂಶವನ್ನು ಯಾವ ಅಧ್ಯಯನವೂ ಹೇಳಿಲ್ಲ ಎಂದು ಗಡ್ಕರಿ ವಿವರಿಸಿದ್ದಾರೆ.
- ಹಳೆಯ ವಾಹನಗಳಲ್ಲಿಯೂ ದಕ್ಷತೆಯಲ್ಲಿ ಗಣನೀಯ ವ್ಯತ್ಯಾಸ ಆಗಿಲ್ಲ, ಅವುಗಳಲ್ಲಿ ಅಸಹಜವಾದ ಸವಕಳಿ ಕಂಡುಬಂದಿಲ್ಲ ಎಂದಿದ್ದಾರೆ.

## ❖ ತಮಿಳುನಾಡು: ಶಾಲೆಯಲ್ಲಿ ಮಕ್ಕಳಿಗೆ ಚಿಕನ್ ಬಿರಿಯಾನಿ?

- ತಮಿಳುನಾಡಿನ ಸರ್ಕಾರಿ ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿಯೂಟ ಯೋಜನೆಯಡಿ ಮಕ್ಕಳಿಗೆ ವಾರದಲ್ಲಿ ಒಂದು ಬಾರಿ ಚಿಕನ್ ಬಿರಿಯಾನಿ ನೀಡುವ ಕುರಿತು ಶಾಲಾ ಶಿಕ್ಷಣ ಇಲಾಖೆಯು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದೆ.
- ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಸಮ್ಮತಿಸಿದರೆ ಈ ಕ್ರಮವು ಜಾರಿಗೆ ಬರಲಿದೆ.

- 'ಇಲಾಖೆಯ ಪರಿಶೀಲನಾ ಸಭೆಯಲ್ಲಿ ಮುಖ್ಯಮಂತ್ರಿಗೆ ಹಲವು ಬೇಡಿಕೆಗಳನ್ನು ಸಲ್ಲಿಸಿದ್ದೇವೆ. ಚಿಕನ್ ಬಿರಿಯಾನಿ ನೀಡಬೇಕು ಎಂಬುದು ನನ್ನ ಬಯಕೆಯಾಗಿದ್ದು, ಈ ಬಗ್ಗೆ ಗಮನಹರಿಸುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ' ಎಂದು ಶಾಲಾ ಶಿಕ್ಷಣ ಸಚಿವ ಎ. ರಾಜಾಮೋಹನ್ ತಿಳಿಸಿದ್ದಾರೆ.
- ಈ ಬಗ್ಗೆ ಇನ್ನೂ ಯಾವುದೇ ನಿರ್ಧಾರ ಕೈಗೊಂಡಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ❖ 'ಭಾರತದ 13 ನಾವಿಕರ ರಕ್ಷಣೆಗಾಗಿ ನಿಗಾ'

- 'ಉಕ್ರೇನ್‌ನ ಕಪ್ಪು ಸಮುದ್ರ ಕರಾವಳಿ ಬಳಿ ಡ್ರೋನ್ ಮತ್ತು ಕ್ಷಿಪಣಿ ದಾಳಿಗಳ ಬೆದರಿಕೆಗೆ ಒಳಗಾದ ಎಂವಿ ಎಎಂಐಆರ್ 1 ವ್ಯಾಪಾರಿ ಹಡಗಿನಲ್ಲಿ ಭಾರತದ 13 ನಾವಿಕರಿದ್ದು, ಪರಿಸ್ಥಿತಿ ಯನ್ನು ಸೂಕ್ಷ್ಮವಾಗಿ ಅವಲೋಕಿಸ ಲಾಗುತ್ತಿದೆ' ಎಂದು ಇಲ್ಲಿರುವ ಭಾರತದ ರಾಯಭಾರ ಕಚೇರಿ ಬುಧವಾರ ತಿಳಿಸಿದೆ.
- 'ನಾವಿಕರ ಸುರಕ್ಷತೆಗೆ ಹೆಚ್ಚಿನ ಗಮನ ಹರಿಸಲಾಗಿದ್ದು, ಸಂಬಂಧಿಸಿದ ಎಲ್ಲ ಅಧಿಕಾರಿಗಳೊಂದಿಗೆ ಸಂಪರ್ಕದಲ್ಲಿ ದ್ದೇವೆ' ಎಂದು ಕಚೇರಿಯ 'ಎಕ್ಸ್' ಖಾತೆಯಲ್ಲಿ ತಿಳಿಸಲಾಗಿದೆ.

## ❖ ವಿಜಯಪುರ ವಿಮಾನನಿಲ್ದಾಣಕ್ಕೆ 'ಹಸಿರು'ನಿಶಾನೆ

'ವಿಜಯಪುರ ವಿಮಾನನಿಲ್ದಾಣಕ್ಕೆ ಇದ್ದ ಪರಿಸರ ಅನುಮತಿಯ ಅಡೆತಡೆಯನ್ನು ಸುಪ್ರೀಂಕೋರ್ಟ್‌ನ ತ್ರಿಸದಸ್ಯ ಪೀಠ ನಿವಾರಿಸಿದ್ದು, ಮೂರು ತಿಂಗಳ ಒಳಗೆ ನಿಲ್ದಾಣ ಕಾರ್ಯಾರಂಭ ಮಾಡಲಿದೆ' ಎಂದು ಕೈಗಾರಿಕೆ ಮತ್ತು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ.ಪಾಟೀಲ ಹೇಳಿದರು.

'ಖಾಸಗಿ, ಸಾರ್ವಜನಿಕ ಹಿತಾಸಕ್ತಿಯ ಯೋಜನೆಗಳನ್ನು ಕೈಗೆತ್ತಿ ಕೊಳ್ಳುವಾಗ ಪರಿಸರ ಸಂಬಂಧಿತ ಅನುಮೋದನೆ ಗಳನ್ನು ತೆಗೆದುಕೊಳ್ಳ ಬೇಕು. ನಿಯಮ ಪಾಲಿಸದ ದೇಶದ ಎಲ್ಲಾ ಯೋಜನೆಗಳನ್ನೂ ರದ್ದುಪಡಿಸುವಂತೆ ಸುಪ್ರೀಂಕೋರ್ಟ್ 2025ರಲ್ಲೇ ಆದೇಶಿಸಿತ್ತು. ವಿಜಯಪುರ ವಿಮಾನನಿಲ್ದಾಣಕ್ಕೂ ಸಂಕಷ್ಟ ಎದುರಾಗಿತ್ತು. ಈಗ ಅಂತಿಮ ತೀರ್ಪು ಎಲ್ಲ ಅಡೆತಡೆ ನಿವಾರಿಸಿದೆ. ನಾಗರಿಕ ವಿಮಾನಯಾನ ಮಹಾನಿರ್ದೇಶಕರು ವಿಜಯಪುರಕ್ಕೆ ಭೇಟಿ ನೀಡಲಿದ್ದು, ₹614 ಕೋಟಿ ವೆಚ್ಚ ದಲ್ಲಿ ಒದಗಿಸಿರುವ ನಿಲ್ದಾಣದ ಸೌಕರ್ಯಗಳನ್ನು ಪರಿಶೀಲಿಸಲಿದ್ದಾರೆ' ಎಂದರು.

## ❖ ಟೆಲಿಗ್ರಾಂ ಮಾಲೀಕನನ್ನು 'ವಾಂಟೆಡ್' ಪಟ್ಟಿಗೆ ಸೇರಿಸಿದ ರಷ್ಯಾ

- ಟೆಲಿಗ್ರಾಂ ಆ್ಯಪ್ ಮಾಲೀಕ ಪಾವೆಲ್ ಡೊರಾಫ್ ಅವರು ಭಯೋತ್ಪಾದನೆಗೆ ಸಹಕಾರ ನೀಡುತ್ತಿದ್ದಾರೆ ಎಂದು ಆರೋಪಿಸಿರುವ ರಷ್ಯಾ, ಅವರನ್ನು ಅಂತರರಾಷ್ಟ್ರೀಯ ಮಟ್ಟದ 'ವಾಂಟೆಡ್' ಪಟ್ಟಿಗೆ ಸೇರಿಸಿದೆ.
- ಉಕ್ರೇನ್‌ನ ಗುಪ್ತಚರ ಸಂಸ್ಥೆಗಳು, ಭಯೋತ್ಪಾದಕರು ಮತ್ತು ತೀವ್ರಗಾಮಿ ಗುಂಪುಗಳು ಬಳಸುವ ಹಲವಾರು ಚಾನೆಲ್‌ಗಳು, ಚಾಟ್ ಮತ್ತು ಬೋಟ್‌ಗಳನ್ನು ಟೆಲಿಗ್ರಾಮ್ ಆ್ಯಪ್ ನಿಂದ ತೆಗೆದು ಹಾಕಲಾಗಿಲ್ಲ. ಉಕ್ರೇನ್ ಗುಪ್ತಚರ ಸಂಸ್ಥೆಗಳು, ಭಯೋತ್ಪಾದಕರು ಈ ಆ್ಯಪ್ ಮೂಲಕ ರಷ್ಯಾದಲ್ಲಿ ಭಯೋತ್ಪಾದನೆಯನ್ನೂ ಸಾಮೂಹಿಕ ಹತ್ಯೆಗಳನ್ನೂ, ಸೈಬರ್ ಅಪರಾಧಗಳನ್ನೂ ಎಸಗಲು ಸಂಚು ರೂಪಿಸಿದ್ದಾರೆ' ಎಂದು ರಷ್ಯಾದ ಫೆಡೆರಲ್ ಸೆಕ್ಯೂರಿಟಿ ಸರ್ವೀಸ್ ಆರೋಪಿಸಿದೆ.
- 'ಇವರ ಸಂಚಿನ ಕಾರಣ, ರಷ್ಯಾದಲ್ಲಿ ಹಲವರು ಪ್ರಾಣ ತೆತ್ತಿದ್ದಾರೆ. ಉಕ್ರೇನ್ ಭದ್ರತಾ ಸಿಬ್ಬಂದಿಯೂ ಟೆಲಿಗ್ರಾಮ್ ನಲ್ಲಿ ಡೇಟಿಂಗ್ ಚಾಟ್‌ಬೋಟ್ ಬಳಸಿಕೊಂಡು ನಮ್ಮವರನ್ನು ಭಯೋತ್ಪಾದನೆ ಕೃತ್ಯಗಳಲ್ಲಿ ಭಾಗಿಯಾಗುವಂತೆ ಪ್ರಚೋದಿಸುತ್ತಿದ್ದಾರೆ' ಎಂದು ಫೆಡೆರಲ್ ಸೆಕ್ಯೂರಿಟಿ ಸರ್ವೀಸ್ ಆರೋಪಿಸಿದೆ. ಈ ಆರೋಪಗಳ ಕುರಿತು ಟೆಲಿಗ್ರಾಂ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

Dr. Rajkumar IAS/KAS Academy

## ❖ ವಂದೇ ಮಾತರಂ ಗೀತೆಗೆ ಅಪಮಾನ ಕ್ರಿಮಿನಲ್ ಅಪರಾಧ: 'ವಂದೇ ಮಾತರಂ' : ಮಸೂದೆ ಅಂಗೀಕರಿಸಿದ ರಾಜ್ಯಸಭೆ

- 'ವಂದೇ ಮಾತರಂ' ಗೀತೆಗೆ ಅಪಮಾನ ಮಾಡುವುದು ಕ್ರಿಮಿನಲ್ ಅಪರಾಧ ಎಂದು ಪರಿಗಣಿಸಿ, ಶಿಕ್ಷೆಗೆ ಗುರಿಪಡಿಸಲು ಅನುವು ಮಾಡಿ ಕೊಡುವ ಮಸೂದೆಯನ್ನು ರಾಜ್ಯಸಭೆಯಲ್ಲಿ ಬುಧವಾರ ಧ್ವನಿ ಮತದ ಮೂಲಕ ಅಂಗೀಕರಿಸಲಾಯಿತು.
- ವಿಪಕ್ಷಗಳ ಗದ್ದಲದ ನಡುವೆಯೇ 'ರಾಷ್ಟ್ರೀಯ ಗೌರವಕ್ಕೆ ಅವಮಾನ ತಡೆ (ತಿದ್ದುಪಡಿ) ಮಸೂದೆ, 2026' ಮಸೂದೆ ಕುರಿತ ಚರ್ಚೆಗೆ ಉಪ ಸಭಾಪತಿ ಹರಿವಂಶ್ ಅವರು ಅವಕಾಶ ಮಾಡಿಕೊಟ್ಟರು. ಆಗ ಕಾಂಗ್ರೆಸ್ ನೇತೃತ್ವದ ವಿರೋಧ ಪಕ್ಷಗಳು ಕಲಾಪವನ್ನು ಬಹಿಷ್ಕರಿಸಿ ಹೊರನಡೆದವು.
- ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಖಂಡಿಸಿ ಪ್ರತಿಭಟನೆ ನಡೆಸಿದ ವಿದ್ಯಾರ್ಥಿಗಳ ಮೇಲೆ ಪೊಲೀಸರು ಕೈಗೊಂಡ ಕ್ರಮವನ್ನು ವಿರೋಧಿಸಿ ಪ್ರತಿಪಕ್ಷಗಳು ಸದನದಲ್ಲಿ ನಿರಂತರ ಆಕ್ರೋಶ ವ್ಯಕ್ತಪಡಿಸುತ್ತಲೇ ಬಂದಿದ್ದರಿಂದ ಮಸೂದೆಯು ಒಂದು ವಾರದಿಂದಲೂ ನನೆಗುದಿಗೆ ಬಿದ್ದಿತ್ತು.
- 'ರಾಷ್ಟ್ರೀಯ ಗೌರವಕ್ಕೆ ಅಪಮಾನ': ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿ ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರೈ, 'ತುಷ್ಟೀಕರಣ ರಾಜಕೀಯದ ಮೂಲಕ ರಾಷ್ಟ್ರದ ಹಿರಿಮೆಯಾದ ವಂದೇ ಮಾತರಂ ಗೀತೆಗೆ ಅಪಮಾನ ಮಾಡಲು ಕಾಂಗ್ರೆಸ್ ಯತ್ನಿಸುತ್ತಿತ್ತು. ಈ ಗೀತೆಯನ್ನು ವಿರೋಧಿಸುವುದು ಎಂದರೆ, 'ಭಾರತವನ್ನು ಒಡೆಯುವ ಗುಂಪಿನ (ಭಾರತ್ ತೇರ ತುಕ್ಡೇ ಹೋಂಗೆ ಗ್ಯಾಂಗ್) ಮನೋಬಲವನ್ನು ಹೆಚ್ಚಿಸಿದಂತೆ' ಎಂದು ಹರಿಹಾಯ್ದರು.
- 'ಅನೇಕ ಸದಸ್ಯರು ತಮ್ಮ ವಿಚಾರವನ್ನು ಮಂಡಿಸಿದ್ದಾರೆ. ಆದರೆ ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳು ಮಾತ್ರ ವಿರೋಧಿಸುತ್ತಿರುವುದು ಅಚ್ಚರಿ ಮೂಡಿಸಿದೆ. ದುರದೃಷ್ಟವೆಂದರೆ, 1937ರಲ್ಲಿ ಈ ಗೀತೆಯನ್ನು ಜವಾಹರಲಾಲ್ ನೆಹರೂ ಅವರು ಎರಡು ಚರಣಕ್ಕೆ ಸೀಮಿತಗೊಳಿಸಿದ್ದರು' ಎಂದು ಆರೋಪಿಸಿದರು.



# ಗುಲ್ವೀರ್ ಸಿಂಗ್ ಕೊರಳಿಗೆ 'ಸಿಲ್ವರ್'

### 10 ಸಾವಿರ ಮೀ ಓಟ: ಅಲ್ಪ ಅಂತರದಲ್ಲಿ ಭಾರತದ ಕೈತಪ್ಪಿದ ಚಿನ್ನದ ಪದಕ

ಕಾಮನ್‌ವೆಲ್ತ್ ಗೇಮ್ಸ್ ಗ್ಲಾಸ್ಗೊ 2026

ಗ್ಲಾಸ್ಗೊ (ಪಿಟಿಐ): ಭಾರತದ ಗುಲ್ವೀರ್ ಸಿಂಗ್ ಅವರು ಕಾಮನ್‌ವೆಲ್ತ್ ಕ್ರೀಡಾಕೂಟದ 10 ಸಾವಿರ ಮೀಟರ್ಸ್ ಓಟದಲ್ಲಿ ಬೆಳ್ಳಿ ಪದಕ ಜಯಿಸಿದರು.

ಮಳೆಯಿಂದಾಗಿ ತೇವವಾಗಿದ್ದ ಟ್ರ್ಯಾಕ್‌ನಲ್ಲಿ ನಡೆದ ಸ್ಪರ್ಧೆಯಲ್ಲಿ ಗುಲ್ವೀರ್ 27 ನಿಮಿಷ, 49.78ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಮಂಗಳವಾರ ನಡೆದ ಸ್ಪರ್ಧೆಯಲ್ಲಿ ಆಸ್ಟ್ರೇಲಿಯಾದ ಕೀ ರಾಬಿನ್ಸನ್ ಅವರು (27ನಿ, 48.93ಸೆ) ಅತ್ಯಲ್ಪ ಅಂತರದಲ್ಲಿ ಚಿನ್ನದ ಪದಕಕ್ಕೆ ಕೊರಳೊಡ್ಡಿದರು.

ಸ್ಕಾಟ್‌ಸ್ಟೌನ್ ಕ್ರೀಡಾಂಗಣದಲ್ಲಿ ಭಾರಿ ಮಳೆ ಸುರಿದಿತ್ತು. ಅದರಿಂದಾಗಿ ಟ್ರ್ಯಾಕ್ ತೇವವಾಗಿತ್ತು. ವಾತಾವರಣವೂ ತಂಪಾಗಿತ್ತು. ಈ ಕಠಿಣ ಪರಿಸ್ಥಿತಿಯಲ್ಲಿಯೂ 28 ವರ್ಷದ ಗುಲ್ವೀರ್ ಅವರು ನಿರೀಕ್ಷಿತ ಸಾಮರ್ಥ್ಯ ಪ್ರದರ್ಶಿಸಿದರು. ನಿಕಟ ಪೈಪೋಟಿ ಏರ್ಪಟ್ಟಿದ್ದ ಗುಂಪಿನಲ್ಲಿಯೇ ಹೆಚ್ಚು ಹೊತ್ತು ಸಾಗಿದರು. ಛಲಬಿಡದ ಅವರು ಅಂತಿಮ ಹಂತದ ಲ್ಯಾಪ್‌ನಲ್ಲಿ ವೇಗ ಹೆಚ್ಚಿಸಿಕೊಂಡು ಗುರಿ ಮುಟ್ಟಿದ ರೀತಿ ಅಮೋಘವಾಗಿತ್ತು.

'ಪದಕ ಜಯಿಸುವುದು ಯಾವಾಗಲೂ ಸಂತಸದ ಸಂಗತಿ. ರೇಸ್ ತುಂಬಾ ಚೆನ್ನಾಗಿತ್ತು. ಮಳೆ ಬಂದು ಹೋಗಿತ್ತು. ಆದರೆ ಅದರಿಂದ ನನ್ನ ಪ್ರದರ್ಶನಕ್ಕೆ ತೊಂದರೆಯಾಗಲಿಲ್ಲ. ಮಳೆ, ಬಿಸಿಲು, ಕಾವು ಮತ್ತೇನೇ ಇದ್ದರೂ ಗುರಿಯ ಮೇಲಷ್ಟೇ ನನ್ನ ಗಮನ. ರೇಸ್ ಆರಂಭವಾಗುವ ಮುನ್ನ ಎಲ್ಲವನ್ನೂ ದೇವರ ಮೇಲೆ ಭಾರ ಹಾಕಿಬಿಟ್ಟೆ. ಮುಂದೇನಿದ್ದರೂ ನೀನೇ ನೋಡಿಕೊ ಎಂದು ಕೈಮುಗಿದಿದ್ದೆ. ಪರಮಾತ್ಮ ನನ್ನ ಮೇಲೆ ಕೃಪೆ ತೋರಿದ' ಎಂದು ಗುಲ್ವೀರ್ ಹೇಳಿದರು.

ಉತ್ತರಪ್ರದೇಶದ ಅತ್ರೋಲಿಯ ಗುಲ್ವೀರ್ ಭಾರತೀಯ ಸೇನೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

'ನಾನು ಇಲ್ಲಿ ಪದಕ ಗಳಿಸಿದ ಹೊತ್ತಿನಲ್ಲಿ ಊರಲ್ಲಿರುವ ಕುಟುಂಬದವರು ಮಲಗಿರಬೇಕು. ಅವರ ನಿದ್ದೆ ಕೆಡಿಸುವುದು ಬೇಡ ಎಂಬ ಕಾರಣದಿಂದ ನಾನು ಅವರಿಗೆ ಇದುವರೆಗೆ ಹೇಳಿಲ್ಲ. ನಾಳೆ (ಬುಧವಾರ) ಅವರು ಟಿವಿಯಲ್ಲಿ ನೋಡುತ್ತಾರೆ. ರೇಸ್ ಇರುವ ದಿನವನ್ನು ನಾನು ಅವರಿಗೆ ಯಾವಾಗಲೂ ಹೇಳಿರುವುದಿಲ್ಲ' ಎಂದು ಗುಲ್ವೀರ್ ಮಾಧ್ಯಮ ಪ್ರತಿನಿಧಿಗಳಿಗೆ ಹೇಳಿದರು.

ಗುಲ್ವೀರ್ ಅವರು ಅಮೆರಿಕದಲ್ಲಿ ಸ್ಕಾಟ್ ಸಿಮನ್ಸ್ ಅವರ ಬಳಿ ತರಬೇತಿ ಪಡೆಯುತ್ತಿದ್ದಾರೆ.

ಬ್ರಿಟನ್‌ನ ಅಥ್ಲೀಟ್ ಡೇವಿಡ್ ಮುಲ್ಲರ್‌ಕೀ (27ನಿ, 50.28ಸೆ) ಅವರು ಕಂಚಿನ ಪದಕ ಗೆದ್ದುಕೊಂಡರು.

ಗುಲ್ವೀರ್ ಸಿಂಗ್

Publication Date
30/07/2026

### ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಇಂದು

- **ಅಥ್ಲೆಟಿಕ್ಸ್:** ಪುರುಷರು: ಡೆಕಥ್ಲಾನ್: ತೇಜಸ್ವಿನ್ ಶಂಕರ್ (ಮಧ್ಯಾಹ್ನ 2.40); ಜಾವೆಲಿನ್ ಅರ್ಹತಾ ಸುತ್ತು: ನೀರಜ್ ಚೋಪ್ರಾ, ಯಶ್‌ವೀರ್ ಸಿಂಗ್, ರೋಹಿತ್ ಯಾದವ್ (ಮಧ್ಯಾಹ್ನ 2.55); ಟ್ರಿಪಲ್ ಜಂಪ್ ಅರ್ಹತಾ ಸುತ್ತು: ಸೆಲ್ವಪ್ರಭು ತಿರುಮರನ್, ಪ್ರವೀಣ್ ಚಿತ್ರವೇಲ್ (ಸಂಜೆ 4.55); ಶಾಟ್‌ಪಟ್: ಸಮರ್‌ದೀಪ್ ಸಿಂಗ್ ಗಿಲ್, ತಜಿಂದರ್‌ಪಾಲ್ ಸಿಂಗ್ ತೂರ್ (ರಾತ್ರಿ 11.30); 200 ಮೀ. ಓಟ: ಅನಿಮೇಶ್ ಕುಜೂರ್ (ರಾತ್ರಿ 11.37)
  ಮಹಿಳೆಯರು: ಡಿಸ್ಕಸ್ ಥ್ರೋ: ಸೀಮಾ ಕೆ., ನಿಧಿ ರಾಣಿ (ತಡರಾತ್ರಿ 1.10); 5,000 ಮೀ. ಓಟ: ಪಾರುಲ್ ಚೌಧರಿ (ತಡರಾತ್ರಿ 1.48)
- **ವೇಟ್‌ಲಿಫ್ಟಿಂಗ್:** ಮಾರ್ಟಿನಾ ದೇವಿ ಮೈಬಂ (86+6 ಕೆ.ಜಿ.) (ಸಂಜೆ 6.30); ಲವ್‌ಪ್ರೀತ್ ಸಿಂಗ್ (110+ ಕೆ.ಜಿ.)
- **ಲಾನ್ ಬೌಲ್ಸ್:** ನಯನ್ಮೋನಿ ಸೈಕಿಯಾ– ಎಮ್ಮಾ ಸರೋಜಿ (ಮಲೇಷ್ಯಾ) (ರಾತ್ರಿ 8.55)
- **ಟ್ರ್ಯಾಕ್ ಸೈಕ್ಲಿಂಗ್:** ಲಿಷಾ ದಾಸ್ (ರಾತ್ರಿ 9.44)

**ನೇರಪ್ರಸಾರ:** ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್, ಸೋನಿ ಲೈವ್ ಆ್ಯಪ್

### ಶಾಟ್‌ಪಟ್: ಫೈನಲ್‌ಗೆ ತಜಿಂದರ್

ಗ್ಲಾಸ್ಗೊ (ಪಿಟಿಐ): ಭಾರತದ ಅನುಭವಿ ಶಾಟ್‌ಪಟ್ ಅಥ್ಲೀಟ್‌ಗಳಾದ ತಜಿಂದರ್‌ಪಾಲ್ ಸಿಂಗ್ ಹಾಗೂ ಸಮರದೀಪ್ ಸಿಂಗ್ ಗಿಲ್ ಅವರು ಕಾಮನ್‌ವೆಲ್ತ್ ಕ್ರೀಡಾಕೂಟ ದಲ್ಲಿ ಬುಧವಾರ ಫೈನಲ್ ಸುತ್ತು ಪ್ರವೇಶಿಸಿದರು.

ರಾಷ್ಟ್ರೀಯ ದಾಖಲೆ ಹೊಂದಿರುವ ತಜಿಂದರ್ ತಮ್ಮ ಮೊದಲ ಯತ್ನದಲ್ಲಿ ಲೋಹದ ಗುಂಡನ್ನು 20.14 ಮೀ. ದೂರಕ್ಕೆ ಎಸೆದರು. ಅದರೊಂದಿಗೆ ನೇರ ಅರ್ಹತೆಗೆ ಬೇಕಿದ್ದ (20 ಮೀ.) ಮಾನದಂಡವನ್ನು ಪೂರೈಸಿದರು. ಎ ಗುಂಪಿನಲ್ಲಿದ್ದ ಅವರು ಎರಡನೇ ಯತ್ನದಲ್ಲಿ 19.93 ಮೀ. ದೂರಕ್ಕೆ ಎಸೆದರು. ಮೂರನೇ ಯತ್ನ ಮಾಡಲಿಲ್ಲ.

ಸಮರದೀಪ್ ಅವರು ಬಿ ಗುಂಪಿನಲ್ಲಿ ಮೊದಲ ಯತ್ನದಲ್ಲಿ 19.95 ಮೀ. ಹಾಗೂ ಎರಡನೇ ಯತ್ನದಲ್ಲಿ 19.75 ಮೀ. ಎಸೆದರು. ಮೂರನೇ ಯತ್ನ ಫೌಲ್ ಆಯಿತು. ಫೈನಲ್‌ಗೆ ಅರ್ಹತೆ ಪಡೆದ 12 ಮಂದಿಯಲ್ಲಿ ತಜಿಂದರ್ ಎರಡನೇ ಹಾಗೂ ಸಮರದೀಪ್ ಐದನೇ ಸ್ಥಾನ ಪಡೆದರು. ಹಾಲಿ ಚಾಂಪಿಯನ್, ನ್ಯೂಜಿಲೆಂಡ್‌ನ ಟಾಮ್ ವಾಲ್ಶ್ (21.03 ಮೀ.) ಮೊದಲ ಸ್ಥಾನ ಗಳಿಸಿದರು.

Presented by

# ‘ಭಾರ ಎತ್ತುವ’ ವಿಭಾಗದಲ್ಲಿ ‘ಭಾರತ’ಕ್ಕೆ ಏಳನೇ ಪದಕ

# ರಜತ ಗೆದ್ದ ಹರ್ಜಿಂದರ್ ಕೌರ್

ಗ್ಲಾಸ್ಗೊ (ಪಿಟಿಐ): ಭಾರತದ ವೇಟ್‌ಲಿಫ್ಟರ್ ಹರ್ಜಿಂದರ್ ಕೌರ್ ಅವರು ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಬೆಳ್ಳಿ ಜಯಿಸಿ ಐತಿಹಾಸಿಕ ಸಾಧನೆ ಮಾಡಿದರು.

ಮಂಗಳವಾರ ನಡೆದ 69 ಕೆ.ಜಿ ಮಹಿಳೆಯರ ವಿಭಾಗದಲ್ಲಿ 5.3 ಅಡಿ ಎತ್ತರದ ಹರ್ಜಿಂದರ್ ಒಟ್ಟು 227 ಕೆ.ಜಿ ತೂಕ ಎತ್ತಿದರು. ಪಂಜಾಬ್‌ನ ನಭಾ ಗ್ರಾಮದ ಹರ್ಜಿಂದರ್ ಅವರು 2022ರ ಕಾಮನ್‌ವೆಲ್ತ್ ಕೂಟದಲ್ಲಿ 71 ಕೆ.ಜಿ ವಿಭಾಗದಲ್ಲಿ ಸ್ಪರ್ಧಿಸಿ ಕಂಚು ಗಳಿಸಿದ್ದರು.

ಈ ವರ್ಷ 69 ಕೆ.ಜಿ ವಿಭಾಗದಲ್ಲಿ ತಮ್ಮ ಸಾಮರ್ಥ್ಯ ಮೆರೆದರು. 29 ವರ್ಷದ ಹರ್ಜಿಂದರ್ ಅವರು ಸ್ನ್ಯಾಚ್‌ನಲ್ಲಿ 101 ಕೆ.ಜಿ, ಕ್ಲೀನ್ ಮತ್ತು ಜರ್ಕ್‌ನಲ್ಲಿ 126 ಕೆ.ಜಿ ಭಾರ ಎತ್ತುವ ಮೂಲಕ ದಾಖಲೆ ಬರೆದರು. ಕ್ಲೀನ್ ಮತ್ತು ಜರ್ಕ್‌ನಲ್ಲಿ ಅವರು ಮೊದಲ ಯತ್ನದಲ್ಲಿ 120 ಕೆ.ಜಿ ಭಾರವನ್ನು ಯಶಸ್ವಿಯಾಗಿ ಎತ್ತಿದರು. ನಂತರದ ಪ್ರಯತ್ನಗಳಲ್ಲಿ 123 ಕೆ.ಜಿ ಮತ್ತು 126 ಕೆ.ಜಿ ಎತ್ತುವಲ್ಲಿ ಸಫಲರಾದರು. ಉತ್ತಮವಾದ ಪ್ರದರ್ಶನ ನೀಡಿದರೂ ಚಿನ್ನದ ಪದಕ ಅವರಿಗೆ ಒಲಿಯಲಿಲ್ಲ.

ಏಕೆಂದರೆ; ಕೆನಡಾದ ಶಾರ್ಲೆಟ್ ಸಿಮೊನಿಯು ಅವರು ಒಟ್ಟು 240 ಕೆ.ಜಿ ಭಾರ ಎತ್ತುವ ಮೂಲಕ ಅಗ್ರಸ್ಥಾನ ಗಳಿಸಿದರು. 20 ವರ್ಷದ ವೇಟ್‌ಲಿಫ್ಟರ್ ಸ್ನ್ಯಾಚ್‌ನಲ್ಲಿ 108 ಕೆ.ಮಿ ಮತ್ತು ಕ್ಲೀನ್ ಹಾಗೂ ಜರ್ಕ್‌ನಲ್ಲಿ 132 ಕೆ.ಜಿ ಎತ್ತಿದರು. ಭಾರತದ ಸ್ಪರ್ಧಿಗಿಂತ 13 ಕೆ.ಜಿ ಹೆಚ್ಚು ಎತ್ತಿದ ಸಾಧನೆ ಮಾಡಿದರು. ಅದರೊಂದಿಗೆ ಕಾಮನ್‌ವೆಲ್ತ್ ಕೂಟ ದಾಖಲೆಯನ್ನೂ ಬರೆದರು. ಆಸ್ಟ್ರೇಲಿಯಾದ ನಿಯಾ ಫೆಬಿ ಹೇಮನ್ ಅವರು 218 ಕೆ.ಜಿ ಭಾರ ಎತ್ತಿ ಕಂಚಿನ ಪದಕ ಪಡೆದರು.

ಈ ಕೂಟದಲ್ಲಿ ಭಾರತಕ್ಕೆ ವೇಟ್‌ಲಿಫ್ಟಿಂಗ್ ವಿಭಾಗದಲ್ಲಿ ಸಂದ ಏಳನೇ ಪದಕ ಇದಾಗಿದೆ. ಒಂದು ಚಿನ್ನ , ಐದು ಬೆಳ್ಳಿ ಮತ್ತು ಒಂದು ಕಂಚಿನ ಪದಕ ಇದರಲ್ಲಿವೆ.

ಮಹಿಳೆಯರ 63 ಕೆ.ಜಿ ವಿಭಾಗದಲ್ಲಿ ಭಾರತದ ನಿರುಪಮಾ ದೇವಿ ಅವರು ಆರು ಅವಕಾಶಗಳಲ್ಲಿ ಒಂದರಲ್ಲಿ ಮಾತ್ರ ಯಶಸ್ವಿಯಾದರು. ಅದೂ ಸ್ನ್ಯಾಚ್‌ನಲ್ಲಿ 93 ಕೆ.ಜಿ ಎತ್ತಿದರು. ಅದರಿಂದಾಗಿ ಅವರಿಗೆ ಅಗ್ರ ಮೂರರಲ್ಲಿ ಸ್ಥಾನಪಡೆಯಲು ಸಾಧ್ಯವಾಗಲಿಲ್ಲ.




ಭಾರತದ ಹರ್ಜಿಂದರ್ ಕೌರ್

## ಪದಕ ಪಟ್ಟಿ

| ಸ್ಥಾನ | ದೇಶ | ಚಿನ್ನ | ಬೆಳ್ಳಿ | ಕಂಚು | ಒಟ್ಟು |
|---|---|---|---|---|---|
| 1 | ಆಸ್ಟ್ರೇಲಿಯಾ | 35 | 18 | 28 | 81 |
| 2 | ಕೆನಡಾ | 13 | 11 | 12 | 36 |
| 3 | ಇಂಗ್ಲೆಂಡ್ | 10 | 19 | 15 | 44 |
| 4 | ಸ್ಕಾಟ್ಲೆಂಡ್ | 7 | 4 | 4 | 15 |
| 5 | ನೈಜೀರಿಯಾ | 6 | 4 | 2 | 12 |
| 9 | ಭಾರತ | 2 | 7 | 3 | 12 |

Publication Date
30/07/2026

Presented by ಪ್ರಜಾವಾಣಿ

# ಸಾಕ್ಷಿ, ಅರುಂಧತಿ, ಲವ್ಲಿನಾ, ಜಾದುಮಣಿ ಸೆಮಿಫೈನಲ್‌ಗೆ

# ಬಾಕ್ಸಿಂಗ್‌ನಲ್ಲಿ 10 ಪದಕ ಖಚಿತ

ಗ್ಲಾಸ್ಗೊ (ಪಿಟಿಐ): ಕಾಮನ್‌ವೆಲ್ತ್ ಕ್ರೀಡಾಕೂಟದ ಬಾಕ್ಸಿಂಗ್ ವಿಭಾಗದಲ್ಲಿ ಭಾರತಕ್ಕೆ ಹತ್ತು ಪದಕಗಳು ಲಭಿಸುವುದು ಖಚಿತವಾಗಿದೆ.

ಮಹಿಳೆಯರ ವಿಭಾಗದಲ್ಲಿ ಸಾಕ್ಷಿ ಚೌಧರಿ(51 ಕೆ.ಜಿ), ಪ್ರೀತಿ ಪವಾರ್ (54 ಕೆ.ಜಿ), ಜೈಸ್ಮಿನ್ ಲಂಬೋರಿಯಾ (57 ಕೆ.ಜಿ.), ಪ್ರಿಯಾ ಗಂಗಾಸ್ (60 ಕೆ.ಜಿ), ಅರುಂಧತಿ ಚೌಧರಿ (70ಕೆ.ಜಿ) ಮತ್ತು ಲವ್ಲಿನಾ ಬೊರ್ಗೊಹೈನ್ (75 ಕೆ.ಜಿ) ಸೆಮಿಫೈನಲ್ ಪ್ರವೇಶಿಸಿದ್ದಾರೆ. ಪುರುಷರ ವಿಭಾಗದಲ್ಲಿ ಜಾದುಮಣಿ ಸಿಂಗ್ (55 ಕೆ.ಜಿ), ಸಚಿನ್ ಸಿವಾಚ್ (60 ಕೆ.ಜಿ), ಅಂಕುಶ್ ಪಂಘಲ್ (80 ಕೆ.ಜಿ), ಮತ್ತು ನರೇಂದರ್ ಬರ್ವಾಲ್ (+90 ಕೆ.ಜಿ) ನಾಲ್ಕರ ಘಟ್ಟಕ್ಕೆ ಮುನ್ನಡೆದಿದ್ದಾರೆ.

ನಾಲ್ಕು ವರ್ಷಗಳ ಹಿಂದೆ ಬರ್ಮಿಂಗ್‌ಹ್ಯಾಮ್‌ನಲ್ಲಿ ನಡೆದಿದ್ದ ಕೂಟದಲ್ಲಿ ಭಾರತದ ಬಾಕ್ಸಿಂಗ್ ತಂಡವು ಏಳು ಪದಕ ಜಯಿಸಿತ್ತು. ಅದರಲ್ಲಿ ಮೂರು ಚಿನ್ನ, ಒಂದು ಬೆಳ್ಳಿ ಮತ್ತು ಮೂರು ಕಂಚಿನ ಪದಕಗಳು ಇದ್ದವು. ಇದೀಗ ಆ ದಾಖಲೆಯನ್ನು ಮೀರುವುದು ಖಚಿತವಾಗಿದೆ.



ಭಾರತದ ಸಚಿನ್ ಸಿವಾಚ್ (ಬಲ) ಪುರುಷರ 60 ಕೆ.ಜಿ. ಸ್ಪರ್ಧೆಯ ಕ್ವಾರ್ಟರ್ ಫೈನಲ್‌ನಲ್ಲಿ ಬೋಟ್ಸ್‌ವಾನಾದ ಟ್ರೆಸರ್ ಮೊರೆಮಿಗೆ ಪಂಚ್ ನೀಡಿದ ಪರಿ ಪಿಟಿಐ ಚಿತ್ರ

ಮಹಿಳೆಯರ ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ ಸಾಕ್ಷಿ ಚೌಧರಿ ಅವರು 5–0ಯಿಂದ ಐರ್ಲೆಂಡ್‌ನ ಕೇಟಲಿನ್ ಫ್ರೆಯರ್ಸ್ ವಿರುದ್ಧ ಗೆದ್ದರು. ಅರುಂಧತಿ 3–1ರಿಂದ ನ್ಯೂಜಿಲೆಂಡ್‌ನ ಮಾರ್ಗನ್ ಹಿಂಡರ್ಸನ್ ವಿರುದ್ಧ ಜಯಿಸಿದರು.

ಪುರುಷರ ವಿಭಾಗದಲ್ಲಿ; ಸಚಿನ್ ಸಿವಾಚ್ ಅವರು ಬೋಟ್ಸ್‌ವಾನಾದ ಟ್ರೆಸರ್ ಮೊರೆಮಿ ಅವರನ್ನು 5–0ಯಿಂದ ಸೋಲಿಸಿದರು. ಅಂಕುಶ್ 5–0ಯಿಂದ ಜಿಡ್ ಮಿಕಾಕ್ ವಿರುದ್ಧ ಮೇಲುಗೈ ಸಾಧಿಸಿದರು. ನರೇಂದರ್ ಬೆರ್ವಾಲ್ 3–2ರಿಂದ ಸಮೋವಾದ ಮೈಕೆಲ್ ವಿರುದ್ಧ ರೋಚಕ ಜಯ ಸಾಧಿಸಿದರು.

Publication Date
30/07/2026
Presented by ಪ್ರಜಾವಾಣಿ

# ಕಾಮನ್‌ವೆಲ್ತ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್

# ಪ್ರಶಸ್ತಿ ಸುತ್ತಿಗೆ ಭಾರತ ತಂಡಗಳು

ನವದೆಹಲಿ (ಪಿಟಿಐ): ಭಾರತ ಪುರುಷರ ಮತ್ತು ಮಹಿಳೆಯರ ತಂಡಗಳು ಇಲ್ಲಿ ನಡೆಯುತ್ತಿರುವ 22ನೇ ಕಾಮನ್‌ವೆಲ್ತ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಬುಧವಾರ ಪ್ರಶಸ್ತಿ ಸುತ್ತು ಪ್ರವೇಶಿಸಿದವು.

ಅಜೇಯ ಓಟ ಮುಂದುವರಿಸಿದ ಪುರುಷರ ತಂಡವು ಸೆಮಿಫೈನಲ್‌ನಲ್ಲಿ 3–0ಯಿಂದ ಇಂಗ್ಲೆಂಡ್ ತಂಡವನ್ನು ನಿರಾಯಾಸವಾಗಿ ಸೋಲಿಸಿತು. ಮಾನುಷ್ ಶಾ 11-9, 11-9, 11-6ರಿಂದ ಕಾನರ್ ಗ್ರೀನ್ ವಿರುದ್ಧ; ಮಾನವ್ ಠಕ್ಕರ್ 11-8, 11-4, 11-5ರಿಂದ ಜೋಸೆಫ್ ಹಂಟರ್ ವಿರುದ್ಧ ಮತ್ತು ಅನುಭವಿ ಹರ್ಮೀತ್ ದೇಸಾಯಿ 11-5, 11-5, 11-5ರಿಂದ ಬೆಂಜಮಿನ್ ಪಿಗೋಟ್ ವಿರುದ್ಧ ಗೆಲುವು ಸಾಧಿಸಿದರು. ಅಗ್ರಶ್ರೇಯಾಂಕ ಪಡೆದಿರುವ ಭಾರತ ಪುರುಷರ ತಂಡದ ಆಟಗಾರರು ಈವರೆಗಿನ ಮುಖಾಮುಖಿ-ಗಳಲ್ಲಿ ಒಂದರಲ್ಲೂ ಸೋತಿಲ್ಲ.

ಮಹಿಳೆಯರ ತಂಡವು ನಾಲ್ಕರ ಘಟ್ಟದಲ್ಲಿ 3–1ರಿಂದ ಇಂಗ್ಲೆಂಡ್ ವನಿತೆಯರ ತಂಡದ ಸವಾಲನ್ನು ಮೆಟ್ಟಿನಿಂತಿತು.

ಕಾಮನ್‌ವೆಲ್ತ್ ಗೇಮ್ಸ್ ಪದಕ ವಿಜೇತೆ ಶ್ರೀಜಾ ಅಕುಲಾ ಅವರು ಮೊದಲ ಮುಖಾಮುಖಿಯಲ್ಲಿ 11-6, 11-3, 11-9ರಿಂದ ಚ್ಲೊಕ್ ಲಾಮ್ ಜಾಸ್ಮಿನ್ ವಾಂಗ್ ವಿರುದ್ಧ ಗೆದ್ದರು. ಆದರೆ, ಕನ್ನಡತಿ ಯಶಸ್ವಿನಿ ಘೋರ್ಪಡೆ 9-11, 6-11, 7-11ರಿಂದ ಟಿನ್‌-ಟಿನ್ ಹೋ ವಿರುದ್ಧ ಪರಾಭವಗೊಂಡರು. ಮೂರನೇ ಮುಖಾಮುಖಿಯಲ್ಲಿ ಸಿಂಡ್ರೆಲಾ ದಾಸ್ 11-7, 11-4, 11-9ರಿಂದ ಗೆದ್ದು, ಪಂದ್ಯವನ್ನು ಭಾರತದ ಹಿಡಿತಕ್ಕೆ ತಂದುಕೊಟ್ಟರು.

ನಿರ್ಣಾಯಕ ಮುಖಾಮುಖಿಯಲ್ಲಿ ಮತ್ತೆ ಕಣಕ್ಕಿಳಿದ ಶ್ರೀಜಾ, 11-8, 5-11, 11-6, 8-11, 11-9ರಿಂದ ಟಿನ್‌-ಟಿನ್ ವಿರುದ್ಧ ರೋಚಕ ಜಯ ಸಾಧಿಸಿದರು.

ಭಾರತ ಪುರುಷರ ಮತ್ತು ಮಹಿಳೆಯರ ತಂಡಗಳು ಫೈನಲ್‌ನಲ್ಲಿ ಮಲೇಷ್ಯಾದ ತಂಡಗಳನ್ನು ಎದುರಿಸಲಿವೆ.

Publication Date
30/07/2026
Presented by ಪ್ರಜಾವಾಣಿ

# ಮಾಹಿತಿ ಸಂಗ್ರಹವೇ ಸವಾಲು

## ಗೃಹಜ್ಯೋತಿ: ತಿಂಗಳಲ್ಲಿ ಶೇ 50ರಷ್ಟು ಪೂರ್ಣ, ಆಗಸ್ಟ್ 31ರವರೆಗೆ ಅವಕಾಶ

• ಎ.ಎಂ.ಸುರೇಶ

**ಬೆಂಗಳೂರು:** ಗೃಹಜ್ಯೋತಿ ಯೋಜನೆಯ ಫಲಾನುಭವಿಗಳಿಂದ ಮಾಹಿತಿ ಸಂಗ್ರಹಿಸುವುದೇ ಸಿಬ್ಬಂದಿಗೆ ದೊಡ್ಡ ಸವಾಲಾಗಿದ್ದು, ಇದುವರೆಗೆ 84.84 ಲಕ್ಷ (ಶೇ 50ರಷ್ಟು) ಕುಟುಂಬಗಳ ದಾಖಲಾತಿ ಪರಿಶೀಲನೆಯಷ್ಟೇ ಪೂರ್ಣಗೊಂಡಿದೆ.

ರಾಜ್ಯದಲ್ಲಿ ಒಟ್ಟು 1.65 ಕೋಟಿ ಕುಟುಂಬಗಳು ಈ ಯೋಜನೆಯ ಫಲಾನುಭವಿಗಳಾಗಿವೆ. ಸರ್ಕಾರದ ಸೂಚನೆ ಆಧರಿಸಿ ಈ ತಿಂಗಳ 1ರಿಂದ ಮೀಟರ್ ರೀಡರ್‌ಗಳು ಮನೆ ಮನೆಗೆ ತೆರಳಿ ಮಾಹಿತಿ ಸಂಗ್ರಹಿಸುವ ಕಾರ್ಯದಲ್ಲಿ ತೊಡಗಿದ್ದಾರೆ. ಆದರೆ, ಶ್ರೀಮಂತರು, ಅಪಾರ್ಟ್‌ಮೆಂಟ್‌ಗಳಲ್ಲಿ ವಾಸ ಮಾಡುತ್ತಿರುವ ಹಲವರು ಸಿಬ್ಬಂದಿಗೆ ಸಹಕಾರ ನೀಡದೇ ಇರುವುದು ತಲೆನೋವಾಗಿದೆ.

‘ಬಡವರು, ಮಧ್ಯಮ ವರ್ಗದವರು ಮಾಹಿತಿ ಕೊಡುತ್ತಾರೆ. ಶ್ರೀಮಂತರು ಮನೆ ಒಳಗೆ ಸೇರಿಸಲ್ಲ. ಕೆಲವರು ನಿಮಗೆ ಯಾಕೆ ಮಾಹಿತಿ ಕೊಡಬೇಕು ಎಂಬುದಾಗಿ ಪ್ರಶ್ನೆ ಮಾಡುತ್ತಾರೆ’ ಎಂದು ಮಾಹಿತಿ ಸಂಗ್ರಹ ಕಾರ್ಯದಲ್ಲಿ ತೊಡಗಿರುವ ಮೀಟರ್ ರೀಡರ್ ಒಬ್ಬರು ‘ಪ್ರಜಾವಾಣಿ’ಯೊಂದಿಗೆ ಅಳಲು ತೋಡಿಕೊಂಡರು.

| ಕಂಪನಿ ಹೆಸರು | ದಾಖಲೆ ನೀಡಿದ ಫಲಾನುಭವಿಗಳು |
|---|---|
| ಬೆಸ್ಕಾಂ | 34,62,865 |
| ಚೆಸ್ಕಾಂ | 10,30,917 |
| ಜೆಸ್ಕಾಂ | 7,93,105 |
| ಹೆಸ್ಕಾಂ | 20,23,682 |
| ಮೆಸ್ಕಾಂ | 11,51,702 |
| ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘ | 22,394 |
| ಒಟ್ಟು | 84,84,665 |

ಪರಿಶೀಲನೆ ವೇಳೆ ‘ಆಧಾರ್ ಕಾರ್ಡ್, ಮತದಾರರ ಗುರುತಿನ ಚೀಟಿ, ಬಾಡಿಗೆ ಕರಾರು ಪತ್ರ, ವಿದ್ಯುತ್ ಬಿಲ್ ನೀಡುವುದು ಕಡ್ಡಾಯ. ಸಾಮಾನ್ಯವಾಗಿ ಇಷ್ಟು ದಾಖಲೆಗಳನ್ನು ನೀಡುತ್ತಾರೆ. ಕೆಲವರು ಅದಕ್ಕೂ ತಕರಾರು ತೆಗೆಯುತ್ತಾರೆ. ಹಲವರು ಪ್ಯಾನ್ ಕಾರ್ಡ್ ನೀಡುವುದಿಲ್ಲ. ಈಗಾಗಲೇ ನೋಂದಣಿಯಾಗಿದೆ, ಈಗ ಯಾಕೆ ನೀಡಬೇಕು ಎಂದು ನಮಗೇ ಪ್ರಶ್ನೆ ಮಾಡುತ್ತಾರೆ’ ಎಂದರು.

**ತಡ ಮಾಡುತ್ತಾರೆ:** ‘ಮಾಹಿತಿ ಸಂಗ್ರಹಿಸಲು ಮನೆಗೆ ಹೋದರೆ ಕೆಲವರು ಕಾಫಿ, ಟೀ ಕುಡಿಯಿರಿ ಎನ್ನುತ್ತಾರೆ. ಕೆಲವರು ದಾಖಲೆಗಳನ್ನು ಹುಡುಕಲು ಸಮಯ ಬೇಕು ಎನ್ನುತ್ತಾರೆ. ಹೀಗಾಗಿ ನಿಗದಿತ ಜಾಗವನ್ನು ಗುರುತಿಸಿ, ಅಲ್ಲಿಗೆ ಬಂದು ಮಾಹಿತಿ ನೀಡುವಂತೆ ಆ ಪ್ರದೇಶದ ಜನರಿಗೆ ಮೊದಲೇ ಮಾಹಿತಿ ನೀಡಿರುತ್ತೇವೆ’ ಎಂದು ಮೀಟರ್ ರೀಡರ್ ತಿಳಿಸಿದರು.

‘ಮನೆ ಮನೆಗೆ ಹೋಗಿ ಮಾಹಿತಿ ಸಂಗ್ರಹಿಸಬೇಕು ಎಂಬ ಸೂಚನೆ ಇದೆ. ನಾವು ಮನೆಗೇ ಹೋಗಿ ದಾಖಲೆಗಳ ಪರಿಶೀಲನೆ ಮಾಡುತ್ತೇವೆ. ಮಧ್ಯಾಹ್ನದ ವೇಳೆ ಅಪಾರ್ಟ್‌ಮೆಂಟ್‌ಗಳಲ್ಲಿ ಯಾರೂ ಇರುವುದಿಲ್ಲ ಎಂಬ ಕಾರಣಕ್ಕೆ ಸಂಜೆ ಹೋಗುತ್ತೇವೆ’ ಎಂದು ಮತ್ತೊಬ್ಬ ಮೀಟರ್ ರೀಡರ್ ಹೇಳಿದರು.

‘ಒಬ್ಬ ಮೀಟರ್ ರೀಡರ್‌ಗೆ ದಿನಕ್ಕೆ 75 ಕುಟುಂಬಗಳಿಂದ ಮಾಹಿತಿ ಸಂಗ್ರಹಿಸುವ ಗುರಿ ನಿಗದಿಪಡಿಸಲಾಗಿದೆ. ಆದರೆ, 40ರಿಂದ 50 ಕುಟುಂಬಗಳಿಂದಷ್ಟೇ ಮಾಹಿತಿ ಸಂಗ್ರಹಿಸಲು ಸಾಧ್ಯವಾಗುತ್ತಿದೆ. ಈಗಿರುವ ತಂತ್ರಾಂಶದಲ್ಲಿ ಯಾರ ಮನೆಯ ಮಾಹಿತಿ ಸಂಗ್ರಹಿಸಲಾಗಿದೆ, ಯಾರ ಮನೆಯಿಂದ ಮಾಹಿತಿ ಸಂಗ್ರಹವಾಗಿಲ್ಲ ಎಂದು ಗೊತ್ತಾಗುವುದಿಲ್ಲ. ಮನೆಯಲ್ಲಿ ಯಾರೂ ಇಲ್ಲದಿದ್ದರೆ ಮತ್ತೊಮ್ಮೆ ಹೋಗುತ್ತೇವೆ’ ಎಂದು ತಿಳಿಸಿದರು.

ಮೊದಲಿಗೆ ಜಾತಿ ಪ್ರಮಾಣಪತ್ರವನ್ನು ಕೇಳಲಾಗುತ್ತಿತ್ತು. ಇದಕ್ಕೆ ಗ್ರಾಹಕರಿಂದ ತುಂಬಾ ವಿರೋಧವಿತ್ತು. ಸರ್ಕಾರದ ಸೂಚನೆ ಆಧರಿಸಿ, ಈಗ ಅದನ್ನು ಕೈಬಿಡಲಾಗಿದೆ. ಎಸ್‌ಸಿ, ಎಸ್‌ಟಿ, ಒಬಿಸಿ ಎಂದಷ್ಟೇ ನಮೂದಿಸುತ್ತೇವೆ. ಇದನ್ನು ಪ್ರಶ್ನೆ ಮಾಡುವ ಗ್ರಾಹಕರ ಸಂಖ್ಯೆಯೂ ಕಡಿಮೆಯಾಗಿದೆ ಎಂದರು.

‘ಜುಲೈ 29ರವರೆಗಿನ ಮಾಹಿತಿ ಪ್ರಕಾರ, ಬೆಸ್ಕಾಂ ಸೇರಿದಂತೆ ಎಲ್ಲ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಮೀಟರ್ ರೀಡರ್‌ಗಳು ಶೇ 50ರಷ್ಟು ಫಲಾನುಭವಿಗಳಿಂದ ಅಗತ್ಯ ದಾಖಲೆಗಳನ್ನು ಸಂಗ್ರಹಿಸಿದ್ದಾರೆ. ಆಗಸ್ಟ್ 31ರ ಒಳಗೆ ಗುರಿ ಮುಟ್ಟಲಿದ್ದೇವೆ’ ಎಂದು ಇಂಧನ ಇಲಾಖೆಯ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

### ಗ್ರಾಹಕರಲ್ಲಿ ಆತಂಕ

ಆಗಸ್ಟ್ 31ರವರೆಗೂ ಮಾಹಿತಿ ಸಂಗ್ರಹ ಪ್ರಕ್ರಿಯೆ ಮುಂದುವರಿಯಲಿದೆ. ಯಾವ ವರ್ಗದವರನ್ನು ಕೈಬಿಡಬೇಕು ಎಂಬ ಬಗ್ಗೆ ಸರ್ಕಾರದ ಮಟ್ಟದಲ್ಲಿ ಇನ್ನೂ ಚರ್ಚೆಯಾಗಿಲ್ಲ. ಆದರೂ, ಪರಿಶೀಲನೆ ಬಳಿಕ ಯೋಜನೆಯ ಲಾಭ ಕೈತಪ್ಪಲಿದೆ ಎಂಬ ಆತಂಕ ಕೆಲವರಲ್ಲಿ ಇದೆ.

ತಿಂಗಳಿಗೆ 200 ಯೂನಿಟ್ ಒಳಗೆ ವಿದ್ಯುತ್ ಬಳಕೆ ಮಾಡುವ ಗ್ರಾಹಕರಿಗೆ ಈಗ ಉಚಿತ ವಿದ್ಯುತ್ ಸೌಲಭ್ಯವಿದೆ. ಪರಿಶೀಲನೆ ನಂತರ, ರಾಜ್ಯದಲ್ಲಿ ಮತದಾನದ ಹಕ್ಕು ಹೊಂದಿಲ್ಲದೇ ಇರುವವರು, ಆದಾಯ ತೆರಿಗೆ ಪಾವತಿದಾರರು ಸೇರಿದಂತೆ ಕೆಲವರನ್ನು ಕೈಬಿಡುವ ಸಾಧ್ಯತೆ ಇದೆ.

Publication Date
31/07/2026

Presented by ಪ್ರಜಾವಾಣಿ

## ❖ ಎಐ ಆಧಾರಿತ 'ಎಲೆಕ್ಟಾ ಇವೋ' ತಂತ್ರಜ್ಞಾನಕ್ಕೆ ಚಾಲನೆ

- ಕ್ಯಾನ್ಸರ್ ಚಿಕಿತ್ಸೆಯನ್ನು ನಿಖರ ಹಾಗೂ ವೈಯಕ್ತಿಕಗೊಳಿಸುವ ಉದ್ದೇಶದಿಂದ ಇಲ್ಲಿನ ಮಣಿಪಾಲ್ ಆಸ್ಪತ್ರೆಯಲ್ಲಿ ಅಳವಡಿಸಿರುವ ದೇಶದ ಮೊದಲ ಕೃತಕ ಬುದ್ಧಿಮತ್ತೆ ಆಧಾರಿತ ಅಡಾಪ್ಟಿವ್ ಸಿಟಿ-ಲಿನ್ಯಾಕ್ ವೇದಿಕೆ 'ಎಲೆಕ್ಟಾ ಇವೋ' ತಂತ್ರಜ್ಞಾನ ವ್ಯವಸ್ಥೆಗೆ ಚಾಲನೆ ನೀಡಲಾಯಿತು.
- 'ಈ ಅತ್ಯಾಧುನಿಕ ತಂತ್ರಜ್ಞಾನವು ಚಿಕಿತ್ಸೆಯ ಅವಧಿಯಲ್ಲಿ ರೋಗಿಯ ದೇಹದಲ್ಲಿ ಉಂಟಾಗುವ ಬದಲಾವಣೆಗಳನ್ನು ಗುರುತಿಸಿ, ಅದಕ್ಕೆ ಅನುಗುಣವಾಗಿ ಪ್ರತಿದಿನ ರೇಡಿಯೋಥೆರಪಿ ಚಿಕಿತ್ಸೆಯನ್ನು ಹೊಂದಾಣಿಕೆ ಮಾಡುತ್ತದೆ. ಟ್ಯೂಮರ್‌ಗೆ ಹೆಚ್ಚು ನಿಖರವಾಗಿ ವಿಕಿರಣ ನೀಡಿ ಆರೋಗ್ಯಕರ ಅಂಗಾಂಶಗಳಿಗೆ ಆಗುವ ಹಾನಿಯನ್ನು ಕುಗ್ಗಿಸಬಹುದು' ಎಂದು ಆಸ್ಪತ್ರೆಯ ರೇಡಿಯೇಷನ್ ಅಂಕಾಲಜಿ ವಿಭಾಗದ ಲೀಡ್ ಕನ್ಸಲ್ಟೆಂಟ್ ಡಾ.ವಿಕ್ರಮ್ ಮೈಯಾ ತಿಳಿಸಿದರು.

# ಪೆಲೆಟ್ ಗನ್ ನಿಷೇಧ ಇಲ್ಲ: 'ಸುಪ್ರೀಂ'

**ಬಳಕೆಗೆ ಪೊಲೀಸ್ ನಿಯಮಗಳಲ್ಲಿ ಅವಕಾಶ • ವಿದ್ಯಾರ್ಥಿಗಳ ಮೇಲೆ ಪೆಲೆಟ್ ಗನ್ ಬಳಕೆ ಆರೋಪ ಪ್ರಕರಣದ ವಿಚಾರಣೆ**

ನವದೆಹಲಿ(ಪಿಟಿಐ): ವಿಶೇಷ ಸನ್ನಿವೇಶಗಳಲ್ಲಿ ಗುಂಪುಗಳನ್ನು ನಿಯಂತ್ರಿಸಲು ಪೆಲೆಟ್ ಗನ್‌ಗಳನ್ನು ಬಳಸುವುದಕ್ಕೆ ಪೊಲೀಸ್ ನಿಯಮಗಳಲ್ಲಿ ಅವಕಾಶ ಇದೆ. ಇಂತಹ ಅನುಮತಿ ಇರುವವರೆಗೆ ಈ ಗನ್‌ಗಳ ಬಳಕೆ ನಿಷೇಧಿಸಲು ಸಾಧ್ಯ ಇಲ್ಲ ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ.

'ಪೆಲೆಟ್ ಗನ್‌ಗಳನ್ನು ದುರುಪಯೋಗಪಡಿಸಿಕೊಳ್ಳಲಾಗಿದೆ ಎಂಬ ಆರೋಪಗಳ ಕುರಿತಂತೆ ಆಯಾ ಪ್ರಕರಣದ ಆಧಾರದಲ್ಲಿ ಪರಿಶೀಲಿಸಲಾಗುವುದು' ಎಂದೂ ಸ್ಪಷ್ಟಪಡಿಸಿದೆ.



ಪ್ರತಿಭಟನೆ ನಿರತ ವಿದ್ಯಾರ್ಥಿಗಳನ್ನು ಚದುರಿಸುವ ವೇಳೆ ಪೆಲೆಟ್ ಗನ್‌ಗಳನ್ನು ಬಳಕೆ ಮಾಡಲಾಗಿದೆ ಎಂದು ಆರೋಪಿಸಿ ಸಲ್ಲಿಸಲಾಗಿರುವ ಮೇಲ್ಮನವಿ ವಿಚಾರಣೆ ವೇಳೆ ನ್ಯಾಯಾಲಯ ಈ ಮಾತು ನೀಡಿದೆ.

ಮುಖ್ಯನ್ಯಾಯಮೂರ್ತಿ ಸೂರ್ಯ ಕಾಂತ್, ನ್ಯಾಯಮೂರ್ತಿಗಳಾದ ಜಾಯ್‌ಮಾಲ್ಯಾ ಬಾಗ್ಚಿ ಹಾಗೂ ವಿ.ಮೋಹನಾ ಅವರು ಇದ್ದ ನ್ಯಾಯಪೀಠ ಈ ಕುರಿತ ಅರ್ಜಿಗಳ ವಿಚಾರಣೆ ನಡೆಸಿತು.

ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ವಿರುದ್ಧ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸುತ್ತಿದ್ದ ವೇಳೆ, ಜಂತರ್ ಮಂತರ್‌ನಲ್ಲಿ ನಿಯೋಜನೆಗೊಂಡಿದ್ದ ಕ್ಷಿಪ್ರ ಕಾರ್ಯ ಪಡೆಗೆ(ಆರ್‌ಎಎಫ್) ಸಂಬಂಧಿಸಿದ 'ಶಸ್ತ್ರಾಸ್ತ್ರ ಬಳಕೆ ಕುರಿತು ಮಾಹಿತಿ ದಾಖಲಿಸುವ ಪುಸ್ತಕ'ವನ್ನು ಸಂರಕ್ಷಿಸಿ ಇಡುವಂತೆ ಕೇಂದ್ರ ಸರ್ಕಾರಕ್ಕೆ ಪೀಠ ಇದೇ ವೇಳೆ ಸೂಚಿಸಿತು.

ಅರ್ಜಿದಾರರ ಪರ ಹಾಜರಿದ್ದ ಹಿರಿಯ ವಕೀಲೆ ವೃಂದಾ ಗ್ರೋವರ್ ಈ ಕುರಿತು ಸಲ್ಲಿಸಿದ ನಿವೇದನೆ ಪರಿಗಣಿಸಿದ ನ್ಯಾಯಪೀಠ, ಜುಲೈ 20ರಂದು ನಡೆದ ಪ್ರತಿಭಟನೆ ವೇಳೆ ಪೆಲೆಟ್ ಗನ್‌ನಿಂದಾಗಿ ಗಾಯಗೊಂಡಿರುವ ಪ್ರಶಾಂತ ಕುಮಾರ್, ಶೇಖ್ ಇರ್ಷಾದ್ ಮನ್ಸೂರಿ ಹಾಗೂ ಇತರರಿಗೆ ಉತ್ತಮ ಚಿಕಿತ್ಸೆ ನೀಡುವಂತೆ ದೆಹಲಿ ಸರ್ಕಾರಕ್ಕೆ ನಿರ್ದೇಶನ ನೀಡಿತು.

**ಪೆಲೆಟ್ ಗನ್ ನಿಷೇಧಕ್ಕೆ ಮನವಿ:** ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಬೇಕಾದ ಸಂದರ್ಭಗಳಲ್ಲಿ ಮೆಟಾಲಿಕ್ ಪೆಲೆಟ್ ಗನ್ ಬಳಕೆ ಮಾಡುವುದನ್ನು ಸಂಪೂರ್ಣವಾಗಿ ನಿಷೇಧಿಸುವಂತೆ ಅರ್ಜಿದಾರರಾದ ಮಾಜಿ ಕೇಂದ್ರ ಮಾಹಿತಿ ಆಯುಕ್ತರೂ ಆಗಿರುವ ನಿವೃತ್ತ ಐಪಿಎಸ್ ಅಧಿಕಾರಿ ಯಶೋವರ್ಧನ ಆಜಾದ್ ಹಾಗೂ ಇತರ ಇಬ್ಬರು ಸಂತ್ರಸ್ತರು ಕೋರಿದ್ದಾರೆ.

ಈ ಕುರಿತು ಪ್ರಸ್ತಾಪಿಸಿದ ನ್ಯಾಯಮೂರ್ತಿ ಬಾಗ್ಚಿ, 'ಜನರ ಗುಂಪು ಚದುರಿಸುವ ವೇಳೆ ಪೆಲೆಟ್ ಗನ್ ಬಳಕೆ ನಿಷೇಧಿಸಬೇಕು ಎಂಬ ಬೇಡಿಕೆಯೇ ಗೊಂದಲದಿಂದ ಕೂಡಿದೆ. ಪೊಲೀಸ್ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ(ಬಿಪಿಆರ್‌ಡಿ)ಸಲಹೆಗಳ ಪ್ರಕಾರ, ಪೊಲೀಸರು ಈ ಗನ್‌ಗಳನ್ನು ಬಳಸುವುದಕ್ಕೆ ಅನುಮತಿ ನೀಡಲಾಗಿದೆ' ಎಂದರು.

'ಅಂಥ ಯಾವ ನಿಯಮಗಳು ಇರುವುದು ಕಂಡುಬರುವುದಿಲ್ಲ. ಹಾಗೊಂದು ವೇಳೆ ಇದ್ದಲ್ಲಿ ಅವುಗಳ ಕುರಿತು ಅಧಿಕೃತ ದಾಖಲೆಗಳನ್ನು ಹಾಜರುಪಡಿಸುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಬೇಕು' ಎಂದು ಗ್ರೋವರ್ ಕೋರಿದರು.

'ಆರ್‌ಎಎಫ್‌ನ ಶಸ್ತ್ರಾಗಾರದಲ್ಲಿ ಪೆಲೆಟ್ ಗನ್‌ಗಳು ಇರಬೇಕು ಅಥವಾ ಇರಬಾರದು ಎಂಬ ಬಗ್ಗೆ ನಾನು ಹೇಳುತ್ತಿಲ್ಲ. ಈಗ ನಮ್ಮ ಮುಂದಿರುವ ವಿಚಾರವೇ ಭಿನ್ನ. ವಿದ್ಯಾರ್ಥಿಗಳ ಮೇಲೆ ಆರ್‌ಎಎಫ್ ಸಿಬ್ಬಂದಿ ಈ ಗನ್‌ಗಳನ್ನು ಬಳಕೆ ಮಾಡಿದ್ದಾರೆ' ಎಂದರು.

'ಸಿ.ಸಿ. ಟಿ.ವಿ, ಡ್ರೋನ್, ಬಾಡಿ ಕ್ಯಾಮೆರಾದ ದೃಶ್ಯಗಳು ಹಾಗೂ ವೈರ್‌ಲೆಸ್ ಲಾಗ್‌ನಲ್ಲಿನ ಮಾಹಿತಿ ಸಂರಕ್ಷಿಸಿ ಇಡುವಂತೆ ಸುಪ್ರೀಂ ಕೋರ್ಟ್ ಇದೇ 28ರಂದು ನಿರ್ದೇಶನ ನೀಡಿದೆ. ಆದರೆ, ಆರ್‌ಎಎಫ್‌ನ ಯುದ್ಧಸಾಮಗ್ರಿಗಳ ಕುರಿತ ದಾಖಲೆ ಪುಸ್ತಕದ ಬಗ್ಗೆ ನಿರ್ದಿಷ್ಟ ಸೂಚನೆ ನೀಡಿಲ್ಲ' ಎಂದೂ ವೃಂದಾ ಗ್ರೋವರ್ ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ,'ತನಿಖೆಗೆ ಅಗತ್ಯವಿರುವ ಎಲ್ಲ ಸಾಕ್ಷ್ಯಗಳನ್ನು ಸಂರಕ್ಷಿಸಿ ಇಡಲಾಗುವುದು' ಎಂದು ಪೀಠಕ್ಕೆ ತಿಳಿಸಿದರು.

Publication Date
31/07/2026

## ಯುವಜನರನ್ನು ಸಮಾಧಾನ ಪಡಿಸುವುದೇ ಗುರಿ: ಖರ್ಗೆ



ಮಲ್ಲಿಕಾರ್ಜುನ ಖರ್ಗೆ ಅವರು ರಾಜ್ಯಸಭೆಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳ (ಅಕ್ರಮಗಳ ತಡೆ) ತಿದ್ದುಪಡಿ ಮಸೂದೆ 2026 ಕುರಿತು ಮಾತನಾಡಿದರು –ಪಿಟಿಐ ಚಿತ್ರ

**ಯುವಜನರ ಛಲದ ಹೋರಾಟ ಮತ್ತು ಸಂಸತ್ತಿನಲ್ಲಿ ವಿರೋಧ ಪಕ್ಷಗಳು ನಡೆಸಿದ ಪ್ರತಿಭಟನೆಯಿಂದಾಗಿ ಸರ್ಕಾರ ಅಂತಿಮವಾಗಿ ಮಣಿದಿದೆ**

**ಮಲ್ಲಿಕಾರ್ಜುನ ಖರ್ಗೆ,** ರಾಜ್ಯಸಭೆ ವಿರೋಧ ಪಕ್ಷದ ನಾಯಕ

ನವದೆಹಲಿ (ಪಿಟಿಐ): 'ಪ್ರಶ್ನೆಪತ್ರಿಕೆ ಸೋರಿಕೆ ತಡೆ ಕಾನೂನಿಗೆ ತಿದ್ದುಪಡಿ ತಂದಿರುವುದು ಪ್ರತಿಭಟನೆ ನಡೆಸುತ್ತಿರುವ ಯುವಜನರನ್ನು ಸಮಾಧಾನಪಡಿಸಲು ಮಾತ್ರವೇ ಹೊರತು, ಸಮಸ್ಯೆಯನ್ನು ಪರಿಹರಿಸಲು ಅಲ್ಲ' ಎಂದು ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಗುರುವಾರ ಆರೋಪಿಸಿದರು.

'ಸ್ಪರ್ಧಾತ್ಮಕ ಪರೀಕ್ಷೆಗಳ (ಅಕ್ರಮಗಳ ತಡೆ) ತಿದ್ದುಪಡಿ ಮಸೂದೆ- 2026' ಕುರಿತು ಮಾತನಾಡಿದ ಖರ್ಗೆ, ಪ್ರಶ್ನೆಪತ್ರಿಕೆ ಸೋರಿಕೆಯಾಗದಂತೆ ಪರೀಕ್ಷೆಗಳನ್ನು ಹೇಗೆ ನಡೆಸಲಾಗುತ್ತದೆ ಎಂಬುದನ್ನು ಸರ್ಕಾರ ವಿವರಿಸಿಲ್ಲ ಎಂದು ಹೇಳಿದರು.

ಹೆಚ್ಚಿನ ದಂಡ ಮತ್ತು ಕಠಿಣ ಶಿಕ್ಷೆ ವಿಧಿಸುವುದು ಹಾಗೂ ತ್ವರಿತಗತಿ ನ್ಯಾಯಾಲಯಗಳನ್ನು ಸ್ಥಾಪಿಸುವ ಕ್ರಮಗಳ ಮೂಲಕ ಪ್ರಶ್ನೆಪತ್ರಿಕೆ ಸೋರಿಕೆ ಘಟನೆಗಳನ್ನು ತಡೆಯಲು ಸಾಧ್ಯವಿಲ್ಲ ಎಂದು ಅವರು ಅಭಿಪ್ರಾಯಪಟ್ಟರು.

'ಪರೀಕ್ಷೆ ಆಯೋಜಿಸುವ ಸಂಸ್ಥೆಗಳ ಆಡಳಿತ ಮತ್ತು ಪರೀಕ್ಷಾ ವ್ಯವಸ್ಥೆಯಲ್ಲಿ ಸುಧಾರಣೆ ತಂದು ಹೊಣೆಗಾರಿಕೆಯನ್ನು ನಿಗದಿಪಡಿಸದ ಹೊರತು ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಗಳು ನಡೆಯುತ್ತಲೇ ಇರುತ್ತವೆ. ನಾವು ಮತ್ತೆ ಮತ್ತೆ ಇದೇ ವಿಷಯದ ಬಗ್ಗೆ ಚರ್ಚಿಸುತ್ತಿರುತ್ತೇವೆ' ಎಂದರು.

'ರಾಹುಲ್ ಗಾಂಧಿ ಅವರು ತಮ್ಮ ಭಾರತ್ ಜೋಡೋ ಯಾತ್ರೆ ಸಂದರ್ಭದಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ ವಿಷಯವನ್ನು ಪ್ರಸ್ತಾಪಿಸಿದ್ದರು. 2024ರಲ್ಲಿ ಈ ಮಸೂದೆಯನ್ನು ಮೊದಲು ಅಂಗೀಕರಿಸಿದಾಗ ಪ್ರತಿಪಕ್ಷಗಳು ಕಠಿಣ ಕಾನೂನಿಗೆ ಆಗ್ರಹಿಸಿದ್ದವು' ಎಂದು ಅವರು ಪ್ರತಿಪಾದಿಸಿದರು.

'ಆದರೆ, ರಾಜಕೀಯ ಕಾರಣಕ್ಕಾಗಿ ಸರ್ಕಾರ ಅಂದು ತರಾತುರಿಯಲ್ಲಿ ಕಾನೂನು ಜಾರಿಗೊಳಿಸಿತು. ಇದೀಗ ಎರಡು ವರ್ಷಗಳ ಒಳಗಾಗಿ ತಿದ್ದುಪಡಿ ಮಾಡಬೇಕಾಗಿ ಬಂದಿದೆ. ಆದರೂ, ಮಸೂದೆ ಇನ್ನೂ ಅಪೂರ್ಣವಾಗಿದೆ' ಎಂದರು.

Presented by

## ❖ ಪರೀಕ್ಷೆ ಅಕ್ರಮ ತಡೆ ಮಸೂದೆ: ರಾಜ್ಯಸಭೆ ಅಸ್ತು

- ಸ್ಪರ್ಧಾತ್ಮಕ ಪರೀಕ್ಷೆಗಳ (ಅಕ್ರಮಗಳ ತಡೆ) ತಿದ್ದುಪಡಿ ಮಸೂದೆಗೆ ರಾಜ್ಯಸಭೆಯು ಗುರುವಾರ ಧ್ವನಿಮತದ ಮೂಲಕ ಅನುಮೋದನೆ ನೀಡಿತು.
- ಈ ವೇಳೆ ವಿರೋಧ ಪಕ್ಷಗಳ ಸದಸ್ಯರು ಸಭಾತ್ಯಾಗ ನಡೆಸಿದರು.
- ಈ ಮಸೂದೆ ಬುಧವಾರ ವಷ್ಟೇ ಲೋಕಸಭೆ ಯಲ್ಲಿ ಅನುಮೋದನೆ ಪಡೆದಿತ್ತು. ಪರೀಕ್ಷಾ ಪ್ರಶ್ನೆಪತ್ರಿಕೆ ಸೋರಿಕೆ ತಡೆ ಮತ್ತು ಅದರಲ್ಲಿ ಭಾಗಿ ಯಾದವರಿಗೆ ಕಠಿಣ ಶಿಕ್ಷೆ ವಿಧಿಸುವ ಅಂಶಗಳನ್ನು ಒಳಗೊಂಡಿದೆ.

## ❖ ಲೋಕಸಭೆಯಲ್ಲಿ ಮಸೂದೆ ಅಸ್ತು; ಗದ್ದಲದ ನಡುವೆ ಸಂಸತ್‌ನಲ್ಲಿ ಸಂಕ್ಷಿಪ್ತ ಚರ್ಚೆ: ವಂದೇ ಮಾತರಂ: ಮಸೂದೆಗೆ ಅಸ್ತು

- ರಾಷ್ಟ್ರೀಯ ಗೀತೆ ವಂದೇ ಮಾತರಂ ಅವಮಾನಿಸುವುದು ಶಿಕ್ಷಾರ್ಹ ಅಪರಾಧ ಎಂದು ಪರಿಗಣಿಸುವ ಮಸೂದೆಯನ್ನು ವ್ಯಾಪಕ ಗದ್ದಲದ ನಡುವೆಯೇ ಲೋಕಸಭೆಯಲ್ಲಿ ಗುರುವಾರ ಅಂಗೀಕಾರಗೊಂಡಿದೆ.
- 'ರಾಷ್ಟ್ರೀಯ ಗೌರವಕ್ಕೆ ಅವಮಾನ ತಡೆ (ತಿದ್ದುಪಡಿ) ಮಸೂದೆ, 2026' ಮಸೂದೆಯು ಲೋಕಸಭೆಯಲ್ಲಿ ಅಂಗೀಕಾರಗೊಂಡಿತು. ಹೊಸ ಮಸೂದೆ ಪ್ರಕಾರ, ರಾಷ್ಟ್ರಗೀತೆ 'ಜನಗಣಮನ'ದ ಸ್ಥಾನಮಾನವೇ ವಂದೇ ಮಾತಂರಂಗೂ ಸಿಗಲಿದೆ. 'ವಂದೇ ಮಾತರಂ'ಗೆ ಮಾಡುವ ಯಾವುದೇ ಅವಮಾನವನ್ನು ಕ್ರಿಮಿನಲ್ ಅಪರಾಧವಾಗಿದೆ.
- ಮಸೂದೆ ಕುರಿತಂತೆ ಕೆಳಮನೆ (ಲೋಕಸಭೆ)ಯಲ್ಲಿ ನಡೆದ ಸಂಕ್ಷಿಪ್ತ ಚರ್ಚೆಯಲ್ಲಿ ಇಬ್ಬರು ಸಂಸದರು ಮಾತ್ರ ಪಾಲ್ಗೊಂಡರು.
- ಈ ವೇಳೆ ಮಾತನಾಡಿದ ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರಾಯ್, '76 ವರ್ಷಗಳ ಆಳ್ವಿಕೆಯಲ್ಲಿ ಕಾಂಗ್ರೆಸ್ ಪಕ್ಷವು ವಂದೇ ಮಾತರಂಗೆ ಸೂಕ್ತ ಗೌರವ ನೀಡಬೇಕಿತ್ತು. ಆದರೆ ತುಷ್ಟೀಕರಣ ರಾಜಕಾರಣವನ್ನು ಆಶ್ರಯಿಸಿತು. ನರೇಂದ್ರ ಮೋದಿ ನೇತೃತ್ವದ ಸರ್ಕಾರವು ರಾಷ್ಟ್ರೀಯ ಗೀತೆಯ ಸ್ಥಾನಮಾನ ನೀಡಿದ್ದು, ಅದಕ್ಕೆ ಅರ್ಹವಾದ ಗೌರವ ಸಂದಿದೆ' ಎಂದು ತಿಳಿಸಿದ್ದಾರೆ.

- 'ಏಕ ಭಾರತ- ಶ್ರೇಷ್ಠ ಭಾರತ' ಎಂದು ಉಲ್ಲೇಖಿಸಿದ ಅವರು, ವಂದೇ ಮಾತರಂನ ಆರು ಚರಣವನ್ನು ಪೂರ್ತಿಯಾಗಿ ಹಾಡಬೇಕು' ಎಂದು ಈ ವೇಳೆ ಪ್ರತಿಪಾದಿಸಿದರು.
- ರಾಷ್ಟ್ರೀಯ ಗೌರವಕ್ಕೆ ಅವಮಾನ ತಡೆ (ತಿದ್ದುಪಡಿ) ಮಸೂದೆ ಅನ್ವಯ, ವಂದೇ ಮಾತರಂ ಹಾಡುವ ವೇಳೆ ಅವಮಾನವೆಸಗಿದರೆ, ಮೂರು ವರ್ಷ ಜೈಲು ಹಾಗೂ ದಂಡ ವಿಧಿಸಲು ಅವಕಾಶ ಇರಲಿದೆ. ಎರಡನೇ ಸಲ ತಪ್ಪು ಪುನಾರವರ್ತನೆಯಾದರೆ, ಒಂದು ವರ್ಷದವರೆಗೂ ಶಿಕ್ಷೆ ವಿಧಿಸಬಹುದಾಗಿದೆ. ಇಬ್ಬರು ಸಂಸದರು ಮಾತನಾಡಿದ ಬಳಿಕ ಧ್ವನಿಮತದ ಮೂಲಕ ಲೋಕಸಭೆಯಲ್ಲಿ ಮಸೂದೆಯನ್ನು ಅಂಗೀಕರಿಸಲಾಯಿತರು, ವಿರೋಧಪಕ್ಷಗಳು ತಂದ ತಿದ್ದುಪಡಿಯನ್ನು ತಿರಸ್ಕರಿಸಲಾಯಿತು. ಈ ವೇಳೆ ಸಿಟ್ಟಿಗೆದ್ದ ಡಿಎಂಕೆ ಪಕ್ಷದ ಎ.ರಾಜಾ, ಮಸೂದೆಗೆ ಸಂಬಂಧಿಸಿದ ದಾಖಲೆಗಳನ್ನು ಹರಿದು, ಸದನದ ಮುಂಭಾಗಕ್ಕೆ ಎಸೆದರು.
- 'ರಾಷ್ಟ್ರೀಯತೆಯ ವೇಷದ ಮೇಲೆ ಹಿಂದುತ್ವ ಅಜೆಂಡಾವನ್ನು ಜಾರಿಗೆ ತಂದಿರುವ ಮಸೂದೆಯನ್ನು ಪಕ್ಷವು ವಿರೋಧಿಸುತ್ತದೆ' ಎಂದು ಡಿಎಂಕೆ ಸಂಸದ ಕನಿಮೋಳಿ ಹೇಳಿದರು.

## ❖ ಏಕರೂಪದ ಬಡ್ಡಿ ದರಕ್ಕೆ ಸೂಚನೆ

- ಗ್ರಾಹಕರು ಯಾವುದೇ ಶಾಖೆಯ ಮೂಲಕ ಠೇವಣಿ ಇರಿಸಿದರೂ ತಾರತಮ್ಯ ಎಸಗದೆ ಒಂದೇ ಪ್ರಮಾಣದ ಬಡ್ಡಿ ನೀಡಬೇಕು ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ), ವಾಣಿಜ್ಯ ಬ್ಯಾಂಕ್‌ಗಳಿಗೆ ಸೂಚನೆ ನೀಡಿದೆ.
- ಬ್ಯಾಂಕ್‌ಗಳು ತಮ್ಮ ವೆಬ್‌ಸೈಟ್ ಮೂಲಕ ಪ್ರಕಟಿಸುವ ಬಡ್ಡಿ ದರವನ್ನೇ ಗ್ರಾಹಕರಿಗೆ ನೀಡಬೇಕು ಎಂದು ಆರ್‌ಬಿಐ ಹೇಳಿದೆ. 'ಎಲ್ಲ ಶಾಖೆಗಳಲ್ಲಿ, ಎಲ್ಲ ಗ್ರಾಹಕರಿಗೆ ಬಡ್ಡಿ ದರವು ಸಮಾನ ಆಗಿರಬೇಕು. ಒಂದೇ ದಿನದಲ್ಲಿ ಬೇರೆ ಬೇರೆ ಶಾಖೆಗಳ ಮೂಲಕ ಸ್ವೀಕರಿಸುವ ಠೇವಣಿಗಳು ಒಂದೇ ಮೊತ್ತದ್ದಾಗಿದ್ದಾಗ, ಅವುಗಳಿಗೆ ನೀಡುವ ಬಡ್ಡಿ ದರದಲ್ಲಿ ವ್ಯತ್ಯಾಸ ಇರಬಾರದು' ಎಂದು ಅದು ಹೇಳಿದೆ.
- ದೊಡ್ಡ ಮೊತ್ತದ ಠೇವಣಿಗಳಿಗೆ ನೀಡುವ ಬಡ್ಡಿ ದರ ಎಷ್ಟು ಎಂಬುದನ್ನು ಬ್ಯಾಂಕುಗಳು ತಮ್ಮ ವೆಬ್‌ಸೈಟ್ ಮೂಲಕ ಪ್ರತಿದಿನ ಬೆಳಿಗ್ಗೆ 10 ಗಂಟೆಗೆ ಮಾಹಿತಿ ಒದಗಿಸಬೇಕು. ಇದರಲ್ಲಿ 10 ನಿಮಿಷ ಮಾತ್ರ ವಿಳಂಬಕ್ಕೆ ಅವಕಾಶ ಇದೆ ಎಂದು ತಾಕೀತು ಮಾಡಿದೆ. ಈ ಸೂಚನೆಗಳು ಅಕ್ಟೋಬರ್ 1ರಿಂದ ಜಾರಿಗೆ ಬರಲಿವೆ.

## ❖ ಬ್ರಿಕ್ಸ್ ಶೃಂಗ- ಭಾರತಕ್ಕೆ ಬೆಂಬಲ: ಚೀನಾ

- ಭಾರತದ ಅಧ್ಯಕ್ಷತೆಯಲ್ಲಿ ಈ ವರ್ಷ ನಡೆಯಲಿರುವ ಬ್ರಿಕ್ಸ್ ಶೃಂಗಸಭೆಯು ಸಂಪೂರ್ಣ ಯಶಸ್ವಿಯಾಗಲು ಬೆಂಬಲ ನೀಡುವುದಾಗಿ ಚೀನಾ ಹೇಳಿದೆ. ಆದರೆ, ಶೃಂಗದಲ್ಲಿ ಚೀನಾ ಅಧ್ಯಕ್ಷ ಷಿ-ಜಿನ್‌ಪಿಂಗ್ ಪಾಲ್ಗೊಳ್ಳುವರೇ, ಇಲ್ಲವೇ ಎಂಬುದರ ಬಗ್ಗೆ ಗೌಪ್ಯತೆ ಮುಂದುವರಿಸಿದೆ.
- ಚೀನಾ ವಿದೇಶಾಂಗ ಸಚಿವಾಲಯದ ವಕ್ತಾರೆ ಮಾವೊ ನಿಂಗ್ ಈ ಕುರಿತು ಮಾಧ್ಯಮಗಳೊಂದಿಗೆ ಮಾತನಾಡಿ, 'ಉದಯೋನ್ಮುಖ ಮಾರುಕಟ್ಟೆಗಳು ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳ ನಡುವಿನ ಸಹಕಾರ ಹೆಚ್ಚಳಕ್ಕೆ ಬ್ರಿಕ್ಸ್ ಶೃಂಗವು ಪ್ರಮುಖ ವೇದಿಕೆಯಾಗಿದೆ' ಎಂದಿದ್ದಾರೆ. ಸೆಪ್ಟೆಂಬರ್ 12-13ರಂದು ಬ್ರಿಕ್ಸ್ ಶೃಂಗಸಭೆ ಭಾರತದಲ್ಲಿ ನಡೆಯಲಿದೆ.

## ❖ ಟಿಬೆಟ್‌ನಲ್ಲಿ ಚೀನಾದ ಡ್ರೋನ್ ಕೇಂದ್ರ

- ಗಡಿಭಾಗದಲ್ಲಿ ಭದ್ರತೆ, ವ್ಯಾಪಾರ ಮತ್ತು ಸಾಗಣೆ ವ್ಯವಸ್ಥೆಯನ್ನು ಬಲಪಡಿಸಲು ಮಾನವರಹಿತ ವೈಮಾನಿಕ ಸಾಧನಗಳನ್ನು ನಿಯೋಜಿಸುವ ಉದ್ದೇಶದಿಂದ ಚೀನಾವು ಟಿಬೆಟ್‌ನಲ್ಲಿನ ಮೌಂಟ್ ಎವರೆಸ್ಟ್ ಶಿಖರದ ಬಳಿ ಡ್ರೋನ್ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರವನ್ನು ಆರಂಭಿಸಿದೆ.
- ವಿಶ್ವದ ಚಾವಣಿ ಎಂದು ಕರೆಯಲಾಗುವ ಟಿಬೆಟ್ ಸಮುದ್ರ ಮಟ್ಟದಿಂದ 4 ಸಾವಿರ ಮೀಟರ್ ಎತ್ತರದಲ್ಲಿದೆ. ಈ ತಂಪಾದ ಪ್ರದೇಶದಲ್ಲಿ ಆಮ್ಲಜನಕದ ಕೊರತೆ ಇದೆ. ಒರಟಾದ ನೆಲವನ್ನು

ಹೊಂದಿರುವ ಮತ್ತು ಕ್ಷಿಪ್ರವಾಗಿ ಹವಮಾನ ಬದಲಾವಣೆಯಾಗುವ ಈ ಪ್ರದೇಶ ಡ್ರೋನ್ ಅಭಿವೃದ್ಧಿಗೆ ಸೂಕ್ತವಾಗಿದೆ ಎಂದು ಚೀನಾದ ಎಂಜಿನಿಯರ್‌ಗಳು ಅಭಿಪ್ರಾಯಪಟ್ಟಿದ್ದಾರೆ.

- ಎತ್ತರದ ಪ್ರದೇಶದಲ್ಲಿ ವೈಮಾನಿಕ ಸಾಧನೆಗಳ ನಿಯೋಜನೆ, ಅಭಿವೃದ್ಧಿ ಮತ್ತು ಸಂಶೋಧನೆಗಾಗಿಯೇ ಪೂರ್ಣವಾಗಿ ಮೀಸಲಾಗಿರುವ ಡ್ರೋನ್ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರವನ್ನು ಕ್ಸಿಜಾಂಗ್ (ಟಿಬೆಟ್) ವಿಶ್ವವಿದ್ಯಾಲಯದಲ್ಲಿ ಆರಂಭಿಸಲಾಗಿದೆ ಎಂದು ಚೀನಾದ ಸರ್ಕಾರಿ ಸ್ವಾಮ್ಯದ ಮಾಧ್ಯಮ ವರದಿ ಮಾಡಿದೆ.
- ತಂತ್ರಜ್ಞಾನ ವಲಯದಲ್ಲಿ ಅಮೆರಿಕ ಮತ್ತು ಚೀನಾದ ನಡುವಿನ ಸ್ಪರ್ಧೆಯು ಈ ಮೂಲಕ ಮತ್ತಷ್ಟು ತೀವ್ರಗೊಂಡಿದೆ.

ಮುಖ್ಯ ಚುನಾವಣಾ ಆಯುಕ್ತರ ನೇಮಕ ಪ್ರಕ್ರಿಯೆ • ಆದೇಶ ಕಾಯ್ದಿರಿಸಿದ 'ಸುಪ್ರೀಂ'

## 'ಆಯ್ಕೆ ಸಮಿತಿಯಿಂದ ಸಿಜೆಐ ಹೊರಗಿಟ್ಟಿದ್ದೇಕೆ?'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಚುನಾವಣಾ ಆಯೋಗವು ಸ್ವತಂತ್ರವಾಗಿ ಕಾರ್ಯ ನಿರ್ವಹಣೆ ಮಾಡಬೇಕು ಎಂಬುದು ಒಪ್ಪತಕ್ಕದ್ದು. ಆದರೆ, ಮುಖ್ಯ ಚುನಾವಣಾ ಆಯುಕ್ತರನ್ನು ನೇಮಕ ಮಾಡುವ ಆಯ್ಕೆ ಸಮಿತಿಯಿಂದ ಭಾರತದ ಮುಖ್ಯ ನ್ಯಾಯಮೂರ್ತಿ(ಸಿಜೆಐ) ಅವರನ್ನು ಹೊರಗಿಡಲು ಸಂಸತ್ ನಿರ್ಧರಿಸಿದ್ದು ಏಕೆ' ಎಂದು ಸುಪ್ರೀಂ ಕೋರ್ಟ್ ಗುರುವಾರ ಪ್ರಶ್ನಿಸಿದೆ.



'ಸಿಜೆಐ ಅವರು ಸಿಬಿಐ ನಿರ್ದೇಶಕ, ಲೋಕಪಾಲದಂತಹ ಉನ್ನತ ಹುದ್ದೆಗಳಿಗೆ ಆಯ್ಕೆ ಮಾಡುವ ಸಮಿತಿಗಳ ಭಾಗವಾಗಿದ್ದಾರೆ. ಮುಖ್ಯ ಚುನಾವಣಾ ಆಯುಕ್ತರಂತಹ(ಸಿಇಸಿ) ಅತ್ಯಂತ ಮಹತ್ವದ ಸಾಂವಿಧಾನಿಕ ಹುದ್ದೆಗೆ ಆಯ್ಕೆ ಮಾಡುವ ಸಮಿತಿಯಿಂದ ಸಿಜೆಐ ಅವರನ್ನು ಹೊರಗಿಟ್ಟಿರುವುದು ಸಮರ್ಥನೀಯವೇ?' ಎಂದು ನ್ಯಾಯಮೂರ್ತಿಗಳಾದ ದೀಪಂಕರ್ ದತ್ತಾ ಹಾಗೂ ಸತೀಶ್ಚಂದ್ರ ಶರ್ಮಾ ಅವರು ಇದ್ದ ಪೀಠ ಹೇಳಿದೆ.

'ಮುಖ್ಯ ಚುನಾವಣಾ ಆಯುಕ್ತ ಮತ್ತು ಇತರ ಚುನಾವಣಾ ಆಯುಕ್ತರ(ನೇಮಕ, ಸೇವಾ ನಿಯಮಗಳು) ಕಾಯ್ದೆ, 2023' ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಅರ್ಜಿಗಳ ವಿಚಾರಣೆಯನ್ನು ಪೀಠ ನಡೆಸಿತು.

'ಸಿಇಸಿ ಸ್ವತಂತ್ರವಾಗಿ ಕಾರ್ಯ ನಿರ್ವಹಿಸುವ ವ್ಯಕ್ತಿಯಾಗಿರಬೇಕು. ಇಂತಹ ವ್ಯಕ್ತಿಯ ಆಯ್ಕೆಯು ನಿಷ್ಪಕ್ಷಪಾತವಾಗಿ ನಡೆಯಬೇಕಲ್ಲವೇ? ಹಾಗಂತ, ಸಿಜೆಐ ಇಲ್ಲದ ಈ ಸಮಿತಿಯು ನಿಷ್ಪಕ್ಷಪಾತದಿಂದ ನಡೆದುಕೊಂಡಿಲ್ಲ ಎಂದು ನಾವು ಹೇಳುತ್ತಿಲ್ಲ' ಎಂದು ನ್ಯಾಯಮೂರ್ತಿ ದತ್ತಾ ಹೇಳಿದರು.

ಈ ವಿಚಾರವನ್ನು ಸಂವಿಧಾನ ಪೀಠಕ್ಕೆ ಒಪ್ಪಿಸಬೇಕು ಎಂಬ ಕೇಂದ್ರ ಸರ್ಕಾರದ ಮನವಿಗೆ ಸಂಬಂಧಿಸಿದ ತನ್ನ ಆದೇಶವನ್ನು ಪೀಠವು ಕಾಯ್ದಿರಿಸಿ, ವಿಚಾರಣೆ ಮುಂದೂಡಿತು.

ಕಾಂಗ್ರೆಸ್ ಸಂಸದೆ ಜಯಾ ಠಾಕೂರ್ ಅವರಿಂದ ಹಾಗೂ ಎನ್‌ಜಿಒಗಳಾದ ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್, ಲೋಕ ಪ್ರಹರಿಯಿಂದ ಈ ಕಾಯ್ದೆ ಪ್ರಶ್ನಿಸಿ ಅರ್ಜಿ ಸಲ್ಲಿಕೆಯಾಗಿವೆ.

### 'ನಾವು ಭಾರತದಲ್ಲಿದ್ದೇವೆ; ವಾಸ್ತವಿಕವಾಗಿ ಕ್ರಮ ಕೈಗೊಳ್ಳಿ'

**ಹುಳು ಪತ್ತೆ; ಹೋಟೆಲ್ ಪರವಾನಗಿ ರದ್ದು ಪ್ರಕರಣ**

ಮುಂಬೈ(ಪಿಟಿಐ): ನವಿಮುಂಬೈನ ಐಷಾರಾಮಿ ಹೋಟೆಲ್‌ವೊಂದರಲ್ಲಿ ತಯಾರಿಸಿದ ಖಾದ್ಯಗಳಲ್ಲಿ ಎರಡು ಸಣ್ಣ ಹುಳುಗಳು ಪತ್ತೆಯಾಗಿದ್ದ ಕಾರಣಕ್ಕೆ ಆ ಹೋಟೆಲ್‌ನ ಪರವಾನಗಿಯನ್ನು ಅಮಾನತು ಮಾಡಿದ ಮಹಾರಾಷ್ಟ್ರದ ಆಹಾರ ಮತ್ತು ಔಷಧ ಪ್ರಾಧಿಕಾರದ (ಎಫ್‌ಡಿಎ) ನಡೆಗೆ ಅಸಮಾಧಾನ ವ್ಯಕ್ತಪಡಿಸಿರುವ ಬಾಂಬೆ ಹೈಕೋರ್ಟ್, ಇಂತಹ ವಿಚಾರಗಳಲ್ಲಿ ವಾಸ್ತವಿಕ ನೆಲೆಗಟ್ಟಿನಲ್ಲಿ ಕ್ರಮ ಜರುಗಿಸಬೇಕು ಎಂದು ಕಿವಿಮಾತು ಹೇಳಿದೆ.

'ನಾವು ಭಾರತದಲ್ಲಿ ವಾಸಿಸುತ್ತಿದ್ದೇವೆ ಎಂಬುದನ್ನು ಗಮನಿಸಿ, ವ್ಯಾವಹಾರಿಕ ದೃಷ್ಟಿಕೋನದಿಂದ ಕ್ರಮ ಕೈಗೊಳ್ಳಬೇಕು' ಎಂದಿರುವ ಹೈಕೋರ್ಟ್, ಹೋಟೆಲ್ ಪರವಾನಗಿ ಅಮಾನತುಗೊಳಿಸಿರುವ ಎಫ್‌ಡಿಎ ಆದೇಶ ರದ್ದು ಮಾಡಿದೆ.

ಎಫ್‌ಡಿಎ ಕ್ರಮ ಪ್ರಶ್ನಿಸಿ ಹೋಟೆಲ್ ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆಯನ್ನು ಹಂಗಾಮಿ ಮುಖ್ಯ ನ್ಯಾಯಾಧೀಶ ರವೀಂದ್ರ ಘುಗೆ ಹಾಗೂ ನ್ಯಾಯಮೂರ್ತಿ ಗೌತಮ ಅಂಖಡ್ ಅವರು ಇದ್ದ ನ್ಯಾಯಪೀಠ ನಡೆಸಿತು.

ನವಿಮುಂಬೈನಲ್ಲಿರುವ ರ್‍ಯಾಡಿಸನ್ ಪಾರ್ಕ್ ಇನ್ ಹೋಟೆಲ್‌ಗೆ ದಿಢೀರ್ ಭೇಟಿ ನೀಡಿದ್ದ ಎಫ್‌ಡಿಎ ಅಧಿಕಾರಿಗಳು, 'ಹೋಟೆಲ್‌ನಲ್ಲಿ ನೈರ್ಮಲ್ಯದ ಕೊರತೆ ಇದೆ, ಆಹಾರ ಪದಾರ್ಥಗಳ ಶೇಖರಣೆ ಹಾಗೂ ನಿರ್ವಹಣೆಯಲ್ಲಿ ಲೋಪಗಳಿವೆ' ಎಂಬ ಕಾರಣ ನೀಡಿ, ಹೋಟೆಲ್‌ನ ಪರವಾನಗಿ ಅಮಾನತಿನಲ್ಲಿಟ್ಟು ಜುಲೈ 3ರಂದು ಆದೇಶಿಸಿದ್ದರು.

'ಎಫ್‌ಡಿಎ ಕೈಗೊಂಡ ಕ್ರಮ ಕಠಿಣ ಹಾಗೂ ಅಸಮಂಜಸವೂ ಆಗಿದೆ' ಎಂದು ದೂರಿದ್ದ ಹೋಟೆಲ್, ಇದನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿತ್ತು.

'ಆಹಾರದಲ್ಲಿ ಎರಡು ಹುಳು ಪತ್ತೆಯಾಗಿವೆ ಎಂಬ ಕಾರಣಕ್ಕೆ ಪರವಾನಗಿಯನ್ನು ಅಮಾನತುಗೊಳಿಸಿರುವುದು ಸಮರ್ಥನೀಯ ಎನಿಸುವುದಿಲ್ಲ' ಎಂದು ಪೀಠ ಹೇಳಿದೆ. ಕಳೆದ ವಾರ ನಮ್ಮ ಊಟದಲ್ಲಿ ಜಿರಳೆ ಸಿಕ್ಕಿತ್ತು. ಒಂದು ನೊಣ ಕೂಡ ಇತ್ತು' ಎಂದು ಹಂಗಾಮಿ ನ್ಯಾಯಮೂರ್ತಿ ಘುಗೆ ಅವರು ಲಘುಧಾಟಿಯಲ್ಲಿ ಹೇಳಿ, ವಿಚಾರಣೆ ಶುಕ್ರವಾರಕ್ಕೆ ಮುಂದೂಡಿದರು.

Publication Date
31/07/2026

Presented by ಪ್ರಜಾವಾಣಿ

## ❖ ಸೌರ ಕೃಷಿ ಪಂಪ್‌ಸೆಟ್ ಬಳಕೆ ಹೆಚ್ಚಳ

- ರಾಜ್ಯದಲ್ಲಿ ಸೌರ ಕೃಷಿ ಪಂಪ್‌ಸೆಟ್ ಬಳಕೆ ಹೆಚ್ಚುತ್ತಿರುವುದರಿಂದಾಗಿ, ಸುಮಾರು 144 ಮೆಗಾ ವಾಟ್ ಗ್ರಿಡ್ ವಿದ್ಯುತ್ ಬೇಡಿಕೆ ಇಳಿಕೆಯಾಗಿದೆ ಎಂದು ಇಂಧನ ಇಲಾಖೆ ಹೇಳಿದೆ.
- ಇದರಿಂದ ವರ್ಷಕ್ಕೆ 24 ಕೋಟಿ ಯೂನಿಟ್ ವಿದ್ಯುತ್ ಖರೀದಿ ತಪ್ಪಿಸುವ ಮೂಲಕ ಎಸ್ಕಾಂಗಳಿಗೆ ಸುಮಾರು ₹146 ಕೋಟಿ ವಿದ್ಯುತ್ ಖರೀದಿ ವೆಚ್ಚ ಉಳಿತಾಯವಾಗಲಿದೆ. ಅಲ್ಲದೆ, ಕೃಷಿ ಪಂಪ್‌ಸೆಟ್‌ಗಳಿಗೆ ನೀಡುವ ವಿದ್ಯುತ್ ಸಹಾಯಧನದಲ್ಲೂ ವರ್ಷಕ್ಕೆ ₹200 ಕೋಟಿ ಉಳಿತಾಯವಾಗುತ್ತದೆ ಎಂದು ಇಲಾಖೆ ಪ್ರಕಟಣೆ ಹೇಳಿದೆ. ಈಗ ಕೃಷಿ ವಲಯದಲ್ಲಿ ಸೌರ ಕೃಷಿ ಪಂಪ್‌ಸೆಟ್‌ಗೆ ಉತ್ತಮ ಬೇಡಿಕೆ ಬರುತ್ತಿದ್ದು, ಒಂದು ಲಕ್ಷಕ್ಕೂ ಹೆಚ್ಚು ರೈತರು ಸೌರ ಪಂಪ್‌ಸೆಟ್‌ಗಳಿಗಾಗಿ ಅರ್ಜಿ ಸಲ್ಲಿಸಿದ್ದಾರೆ. 27,7000ಕ್ಕೂ ಹೆಚ್ಚು ಸೌರ ಕೃಷಿ ಪಂಪ್‌ಸೆಟ್‌ಗಳು ಅಳವಡಿಕೆಯಾಗಿ ಕಾರ್ಯಾರಂಭ ಮಾಡಿವೆ. 40 ಸಾವಿರ ಸೌರ ಪಂಪ್‌ಸೆಟ್‌ಗಳ ಗುರಿ ಮುಟ್ಟುವ ನಿಟ್ಟಿನಲ್ಲಿ ತ್ವರಿತವಾಗಿ ಮುನ್ನಡೆ ಸಾಧಿಸಲಾಗುತ್ತಿದೆ ಎಂದು ಹೇಳಿದೆ.

- ಸೌರ ಕೃಷಿ ಪಂಪ್‌ಸೆಟ್‌ಗಳನ್ನು ಅಳವಡಿಸಿಕೊಳ್ಳಲು ರೈತರಿಗೆ ಉತ್ತೇಜನ ನೀಡುವ ಉದ್ದೇಶದಿಂದ ಕರ್ನಾಟಕ ಸರ್ಕಾರವೇ ಶೇಕಡ 50ರಷ್ಟು ಸಹಾಯಧನ ನೀಡುತ್ತಿದೆ. ಇದರಿಂದ ಸಾವಿರಾರು ರೈತರು ಕಡಿಮೆ ವೆಚ್ಚದಲ್ಲಿ ಸೌರವಿದ್ಯುತ್ ಬಳಸಲು ಸಾಧ್ಯವಾಗಿದೆ. ಇದರಿಂದ ಸಾಂಪ್ರ ದಾಯಿಕ ವಿದ್ಯುತ್ ಮೇಲಿನ ಅವಲಂಬನೆಗಣನೀಯವಾಗಿ ಕಡಿಮೆಯಾಗಿದೆ ಎಂದು ಪ್ರಕಟಣೆ ವಿವರಿಸಿದೆ.

# ಶ್ರೀಶಂಕರ್‌ಗೆ ಸತತ 2ನೇ ಬಾರಿ ಬೆಳ್ಳಿ

**ಗ್ಲಾಸ್ಗೊ (ಪಿಟಿಐ):** ಭಾರತದ ಲಾಂಗ್‌ಜಂಪ್ ತಾರೆ ಮುರಳಿ ಶ್ರೀಶಂಕರ್ ಅವರು ಕಾಮನ್‌ವೆಲ್ತ್ ಕ್ರೀಡೆಗಳಲ್ಲಿ ಬುಧವಾರ ರಾತ್ರಿ ಬೆಳ್ಳಿ ಪದಕ ಗೆದ್ದು, ದೇಶದ ಅಥ್ಲೆಟಿಕ್ ಇತಿಹಾಸದಲ್ಲಿ ಹೊಸ ಅಧ್ಯಾಯ ಬರೆದರು. ಸತತ ಎರಡು ಕ್ರೀಡೆಗಳಲ್ಲಿ ಬೆಳ್ಳಿ ಗೆದ್ದ ದೇಶದ ಮೊದಲ ಲಾಂಗ್‌ಜಂಪ್ ಸ್ಪರ್ಧಿ ಎನಿಸಿದರು.

2022ರ ಬರ್ಮಿಂಗ್‌ಹ್ಯಾಮ್ ಕ್ರೀಡೆಗಳಲ್ಲೂ ಬೆಳ್ಳಿ ಗೆದ್ದಿದ್ದ 27 ವರ್ಷ ವಯಸ್ಸಿನ ಶ್ರೀಶಂಕರ್ ಬುಧವಾರ 8.09 ಮೀ. ದೂರ ಜಿಗಿದರು. ಹೋದ ವರ್ಷ ಕಾಣಿಸಿಕೊಂಡ ಮೊಣಕಾಲಿನ ಗಂಭೀರ ಗಾಯವು ಅವರ ಕ್ರೀಡಾಜೀವನವನ್ನು ಆಪೋಶನ ತೆಗೆದುಕೊಳ್ಳಬಹುದೆಂಬ ಆತಂಕಗಳು ಎದುರಾಗಿದ್ದವು. ಹೀಗಾಗಿ ಪದಕ ಒಲಿದಿದ್ದು ಅವರ ಪಾಲಿಗೆ ಭಾವನಾತ್ಮಕ ಕ್ಷಣವಾಯಿತು.



ಪುರುಷರ ಹೈಜಂಪ್ ಸ್ಪರ್ಧೆಯಲ್ಲಿ ಜಿಗಿದ ಭಾರತದ ಮುರಳಿ ಶ್ರೀಶಂಕರ್ ಪಿಟಿಐ ಚಿತ್ರ

ಶ್ರೀಶಂಕರ್ ಅವರಿಗಿಂತ ಮೊದಲು ಸುರೇಶ್ ಬಾಬು (1978ರಲ್ಲಿ ಕಂಚು), ಅಂಜು ಬಾಬಿ ಜಾರ್ಜ್ (2002ರಲ್ಲಿ ಕಂಚು) ಮತ್ತು ಎಂ.ಪ್ರಜುಷಾ (2010ರಲ್ಲಿ ಬೆಳ್ಳಿ) ಅವರು ಕಾಮನ್‌ವೆಲ್ತ್ ಕ್ರೀಡೆಗಳ ಲಾಂಗ್‌ಜಂಪ್‌ನಲ್ಲಿ ಪದಕ ಗೆದ್ದಿದ್ದರು.

ಮಾಜಿ ವಿಶ್ವ ಚಾಂಪಿಯನ್ ತಾಜೆ ಗೇಲ್ (ಜಮೈಕಾ) ಅವರ 8.15 ಮೀ.ಗಳ ಅತ್ಯುತ್ತಮ ಜಿಗಿತದೊಡನೆ ಚಿನ್ನದ ಪಕದ ಗೆದ್ದರು. ಸ್ಥಳೀಯ ಸ್ಪರ್ಧಿ ಸ್ಟೀಫನ್ ಮೆಕೆಂಝಿ 8.08 ಮೀ. ಜಿಗಿದು ಕಂಚಿನ ಪದಕ ತಮ್ಮದಾಗಿಸಿಕೊಂಡರು.

**ಸಂಭ್ರಮ:** ಶ್ರೀಶಂಕರ್ ಅವರು ಪದಕ ಗೆದ್ದ ಖುಷಿಯಲ್ಲಿದ್ದರೂ, ಚಿನ್ನ ಕೈತಪ್ಪಿದ ನಿರಾಶೆಯೂ ಅವರ ಮುಖದಲ್ಲಿ ಗೋಚರಿಸಿತು. 'ಪದಕ ಗೆದ್ದಿರುವುದರಿಂದ ತುಂಬಾ ಸಂತಸವಾಗಿದೆ. ವಿಶ್ವ ವೇದಿಕೆಯಲ್ಲಿ ಭಾರತವನ್ನು ಮತ್ತೊಮ್ಮೆ ಪ್ರತಿನಿಧಿಸಲು ಸಾಧ್ಯವಾಗಿರುವುದಕ್ಕೆ ಕೃತಜ್ಞನಾಗಿದ್ದೇನೆ' ಎಂದರು.

ಎರಡು ವರ್ಷಗಳ ಹಿಂದೆ ಗ್ಲಾಸ್ಗೊದಲ್ಲಿ ದೇಶವನ್ನು ಪ್ರತಿನಿಧಿಸಲು ಸಾಧ್ಯವಾಗಲಿಕ್ಕಿಲ್ಲವೆಂಬ ಆತಂಕ ಮೂಡಿತ್ತು. ದೇವರ ದೆಯ. ಮತ್ತೊಮ್ಮೆ ದೇಶಕ್ಕೆ ಬೆಳ್ಳಿ ಗೆಲ್ಲಲು ಸಾಧ್ಯವಾಗಿದೆ' ಎಂದು ಕೇರಳದ ಶ್ರೀಶಂಕರ್ ನಿಟ್ಟುಸಿರುಬಿಟ್ಟರು. ಮಂಡಿಯ ಚಿಪ್ಪಿನಿಂದ ಕಾಲಿನ ಗಂಟಿನವರೆಗೆ ಸಂಪರ್ಕಿಸುವ ಅಂಗಾಂಶಕ್ಕೆ ಹಾನಿಯಾಗಿ ಅವರು ತೀವ್ರ ನೋವು ಅನುಭವಿಸಿದ್ದರು.

ಇದರಿಂದಾಗಿ ಪ್ಯಾರಿಸ್ ಒಲಿಂಪಿಕ್‌ನಲ್ಲಿ ಭಾಗವಹಿಸುವ ಅವಕಾಶ ಅವರಿಗೆ ಕೈತಪ್ಪಿತ್ತು. ಮತ್ತೆ ಅವರು ಹಿಂದಿನಂತೆ ಜಿಗಿಯಬಲ್ಲರೇ ಎಂಬ ಸಂದೇಹಗಳೂ ಮೂಡಿದ್ದವು.

'ಬರ್ಮಿಂಗ್‌ಹ್ಯಾಮ್‌ನಲ್ಲಿ ಗೆದ್ದ ಬೆಳ್ಳಿ ನಂತರ ಇಲ್ಲಿ ಚಿನ್ನ ಗೆಲ್ಲುವ ಗುರಿಯಿತ್ತು. ನನ್ನ ನಿರ್ವಹಣೆ ತೃಪ್ತಿ ಮೂಡಿಸಿಲ್ಲ. ನನ್ನ ಕೌಶಲವನ್ನು ಮತ್ತಷ್ಟು ಸುಧಾರಿಸಬೇಕಾಗಿದೆ' ಎಂದು ಹೇಳಿದರು.

ವಿಶ್ವಾಸದಿಂದ ಆರಂಭ ಮಾಡಿದ ಅವರು ಮೊದಲ ಯತ್ನದಲ್ಲಿ 8.09 ಮೀ. ಜಿಗಿದರು. ಎರಡನೇ ಯತ್ನದಲ್ಲಿ 8.09 ಜಿಗಿದು ಅಗ್ರಸ್ಥಾನಕ್ಕೆ ಏರಿದರು. ಆದರೆ ಅವರ ಚಿನ್ನದ ಆಸೆ ಕ್ಷಣಿಕವಾಯಿತು. ಜಮೈಕಾದ ಗೇಲ್ 8.15 ಮೀ. ನೆಗೆದು ಅಗ್ರಸ್ಥಾನ ತಮ್ಮದಾಗಿಸಿಕೊಂಡರು. ಶ್ರೀಶಂಕರ್ ಅವರು ಎರಡು ಫೌಲ್‌ಗಳ ನಂತರ ಕೊನೆಯ ಯತ್ನದಲ್ಲಿ 7.94 ಮೀ. ದೂರ ಜಿಗಿದರು.

ಈ ವರ್ಷ ಶ್ರೀಶಂಕರ್ ಹಲವು 8 ಮೀ. ಮೈಲಿಗಲ್ಲನ್ನು ಅನೇಕ ಬಾರಿ ಜಿಗಿದಿದ್ದಾರೆ. ಭುನವೇಶ್ವರದಲ್ಲಿ ನಡೆದಿದ್ದ ರಾಷ್ಟ್ರೀಯ ಅಂತರರಾಜ್ಯ ಸೀನಿಯರ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಅವರು 8.38 ಮೀ. ಜಿಗಿದಿದ್ದರು.

ಕಣದಲ್ಲಿದ್ದ ಭಾರತದ ಇನ್ನೊಬ್ಬ ಸ್ಪರ್ಧಿ ಲೋಕೇಶ್ ಸತ್ಯನಾಥನ್ ಅವರು ಮೊದಲ ಯತ್ನದಲ್ಲಿ ದಾಖಲಿಸಿದ 7.97 ಮೀಗಳ ಜಿಗಿತದೊಡನೆ ಐದನೇ ಸ್ಥಾನ ಪಡೆದರು.

# ಪ್ಯಾರಾ 100 ಮೀ: ಭಾರತಕ್ಕೆ ಡಬಲ್

## ದಿಲೀಪ್ ಮಹದು ಗಾವಿತ್‌ಗೆ ಚಿನ್ನ, ಮೊಹಮ್ಮದ್ ಬಾಸಿಲ್‌ಗೆ ರಜತ ಸಂಭ್ರಮ

ಗ್ಲಾಸ್ಗೊ (ಪಿಟಿಐ): ಕಾಮನ್‌ವೆಲ್ತ್ ಗೇಮ್ಸ್‌ನ ಪ್ಯಾರಾ ಅಥ್ಲೆಟಿಕ್ಸ್‌ನಲ್ಲಿ ಭಾರತ ಹೊಸ ಇತಿಹಾಸ ಬರೆದಿದೆ. ಪುರುಷರ 100 ಮೀಟರ್ (ಟಿ47) ಓಟದಲ್ಲಿ ದಿಲೀಪ್ ಮಹದು ಗಾವಿತ್ ಚಿನ್ನ ಗೆದ್ದರೆ, ಮೊಹಮ್ಮದ್ ಬಾಸಿಲ್ ಬೆಳ್ಳಿ ಪದಕಕ್ಕೆ ಕೊರಳೊಡ್ಡಿದ್ದಾರೆ. ಒಂದೇ ಸ್ಪರ್ಧೆಯಲ್ಲಿ ಭಾರತಕ್ಕೆ ಮೊದಲೆರಡು ಪದಕ ಲಭಿಸಿದೆ.

ಮಹಾರಾಷ್ಟ್ರದ 23 ವರ್ಷದ ಗಾವಿತ್ ಅವರು 10.71 ಸೆಕೆಂಡುಗಳಲ್ಲಿ ಗುರಿ ತಲುಪಿ ಕೂಟದ ದಾಖಲೆಯೊಂದಿಗೆ ಈ ಋತುವಿನ ತಮ್ಮ ಅತ್ಯುತ್ತಮ ಸಮಯ ದಾಖಲಿಸಿದರು. ಕೇರಳದ 21 ವರ್ಷದ ಬಾಸಿಲ್ 10.83 ಸೆಕೆಂಡುಗಳಲ್ಲಿ ಸ್ಪರ್ಧೆ ಮುಗಿಸಿದರು. ಇಂಗ್ಲೆಂಡ್‌ನ ಕೆವಿನ್ ಸ್ಯಾಂಟೋಸ್ (10.85 ಸೆಕೆಂಡ್) ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಕೂಟದಲ್ಲಿ ಭಾರತಕ್ಕೆ ಇದು ಮೂರನೇ ಚಿನ್ನದ ಪದಕ. ಇದಕ್ಕೂ ಮುನ್ನ ಮಹಿಳೆಯರ 48 ಕೆಜಿ ವೇಟ್‌ಲಿಫ್ಟಿಂಗ್‌ನಲ್ಲಿ ಮೀರಾಬಾಯಿ ಚಾನು ಮತ್ತು ಮಹಿಳೆಯರ ಶಾಟ್‌ಪಟ್ (ಎಫ್57) ನಲ್ಲಿ ಶರ್ಮಿಳಾ ಧನಕರ್ ಸ್ವರ್ಣ ಗೆದ್ದಿದ್ದರು. ಇದರೊಂದಿಗೆ ಭಾರತದ ಪದಕಗಳ ಸಂಖ್ಯೆ 15ಕ್ಕೆ ಏರಿಕೆಯಾಗಿದೆ. ಅದರಲ್ಲಿ 9 ಬೆಳ್ಳಿ ಮತ್ತು 3 ಕಂಚಿನ ಪದಕಗಳೂ ಸೇರಿವೆ.

'ಮಳೆಯಿಂದಾಗಿ ಟ್ರ್ಯಾಕ್ ಒದ್ದೆಯಾಗಿದ್ದರಿಂದ ಸ್ಪರ್ಧಿಸುವುದು ಸವಾಲಾಗಿತ್ತು. ಸ್ಪರ್ಧೆಯ ವೇಳೆ ನಿಧಾನವಾಗಿ ವೇಗ ಹೆಚ್ಚಿಸಿಕೊಂಡು ಗೆಲುವು ಸಾಧಿಸಿದ್ದು ಸಂತಸ ತಂದಿದೆ' ಎಂದು ಗಾವಿತ್ ಗೆಲುವಿನ ಬಳಿಕ ಪ್ರತಿಕ್ರಿಯಿಸಿದರು.

'ಲಾಸ್ ಏಂಜಲೀಸ್‌ನ ಪ್ಯಾರಾಲಿಂಪಿಕ್ಸ್ ಮತ್ತು ಜಪಾನ್‌ನಲ್ಲಿ ನಡೆಯಲಿರುವ ಪ್ಯಾರಾ ಏಷ್ಯನ್ ಗೇಮ್ಸ್‌ನಲ್ಲಿ ಪದಕ ಗೆಲ್ಲುವುದು ನನ್ನ ಮುಂದಿನ ಗುರಿಯಾಗಿದೆ' ಎಂದು ಅವರು ಹೇಳಿದರು.

ಟಿ47 ಎಂಬುದು ದೇಹದ ಒಂದು ಭಾಗದ ಚಲನೆ, ಶಕ್ತಿ ಅಥವಾ ಸಮನ್ವಯದ ಕೊರತೆ ಇರುವ ಅಥ್ಲೀಟ್‌ಗಳಿಗೆ ಇರುವ ಓಟದ ಸ್ಪರ್ಧೆಯಾಗಿದೆ.

ಮಹಾರಾಷ್ಟ್ರದ ಗ್ರಾಮೀಣ ಭಾಗದಲ್ಲಿ ಜನಿಸಿದ ಗಾವಿತ್ ಅವರಿಗೆ ಬಾಲ್ಯದಲ್ಲಿ ಸರಿಯಾದ ವೈದ್ಯಕೀಯ ಸೌಲಭ್ಯ ಸಿಗದ ಕಾರಣ ಎಡಗೈಯನ್ನು ಕಳೆದುಕೊಂಡರು. ಆದಾಗ್ಯೂ, ಕೋಚ್ ವೈಜನಾಥ್ ಕಾಳೆ ಅವರು ಗಾವಿತ್ ಅವರ ಕ್ರೀಡಾ ಪ್ರತಿಭೆಯನ್ನು ಗುರುತಿಸಿ, ಪ್ರೋತ್ಸಾಹಿಸಿದ್ದಾರೆ.

ಪ್ಯಾರಾ ಅಥ್ಲೆಟಿಕ್ಸ್‌ಗೆ ಬರುವ ಮೊದಲು ಗಾವಿತ್ ಅವರು ಸಾಮಾನ್ಯ ಕ್ರೀಡಾಪಟುಗಳ ಸ್ಪರ್ಧೆಗಳಲ್ಲಿ ಭಾಗವಹಿಸಿ 'ಖೇಲೊ ಇಂಡಿಯಾ ಯೂತ್ ಗೇಮ್ಸ್'ನಲ್ಲೂ ಎರಡು ಪದಕ ಮತ್ತು 18 ವರ್ಷದೊಳಗಿನವರ ಸ್ಪರ್ಧೆಯಲ್ಲೂ ಒಂದು ಪದಕ ಗೆದ್ದಿದ್ದರು. ನಾಸಿಕ್‌ನಲ್ಲಿ ಪಡೆದ ತರಬೇತಿಯು ಅವರ ಕ್ರೀಡಾ ಜೀವನಕ್ಕೆ ಹೊಸ ತಿರುವು ನೀಡಿತು.

'ಗಾವಿತ್ ಅವರಿಗೆ ಪ್ಯಾರಾ ಕ್ರೀಡಾಕೂಟಗಳ ಬಗ್ಗೆ ಏನೂ ತಿಳಿದಿರಲಿಲ್ಲ. ಅವರು ಸಾಮಾನ್ಯ ಕ್ರೀಡಾಪಟುಗಳ ಜೊತೆಗೆ ಸ್ಪರ್ಧಿಸುತ್ತಿದ್ದರು. ಅಲ್ಲೂ ಉತ್ತಮ ಪ್ರದರ್ಶನ ನೀಡುತ್ತಿದ್ದರು. ಶಾಲೆಯಲ್ಲಿ ಅವರ ಪ್ರತಿಭೆಯನ್ನು ನೋಡಿ, ಅವರ ಪೋಷಕರನ್ನು ಒಪ್ಪಿಸಿ ತರಬೇತಿ ನೀಡಿದೆ' ಎಂದು ವೈಜನಾಥ್ ಕಾಳೆ ತಿಳಿಸಿದರು.

ದಿಲೀಪ್ ಮತ್ತು ಬಾಸಿಲ್ ಅವರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಎಕ್ಸ್‌ನಲ್ಲಿ ಶುಭಾಶಯ ಕೋರಿದ್ದಾರೆ. 'ನಿಮ್ಮ ಈ ಐತಿಹಾಸಿಕ ಸಾಧನೆಯು ಭಾರತ ಪ್ಯಾರಾ ಅಥ್ಲೆಟಿಕ್ಸ್‌ನಲ್ಲಿ ಹೊಸ ಅಧ್ಯಾಯ ಬರೆದಿದೆ' ಎಂದು ಶ್ಲಾಘಿಸಿದ್ದಾರೆ.

**ಅನಿಮೇಶ್‌ಗೆ ನಿರಾಸೆ:** ರಾಷ್ಟ್ರೀಯ ದಾಖಲೆ ಹೊಂದಿರುವ ಅನಿಮೇಶ್ ಕುಜೂರ್ ಗುರುವಾರ ರಾತ್ರಿ ನಡೆದ ಕಾಮನ್‌ವೆಲ್ತ್ ಕ್ರೀಡಾಕೂಟದ ಪುರುಷರ 200 ಮೀಟರ್ ಓಟದ ಫೈನಲ್‌ಗೆ ಪ್ರವೇಶಿಸುವಲ್ಲಿ ವಿಫಲರಾದರು.

ಅವರು ಸೆಮಿಫೈನಲ್ ಹೀಟ್ಸ್‌ನಲ್ಲಿ 20.65 ಸೆಕೆಂಡ್‌ಗಳ ಸಾಧಾರಣ ಸಮಯದೊಂದಿಗೆ ಗುರಿ ತಲುಪಿದರು.

ಸೆಮಿಗೆ ಅರ್ಹತೆ ಪಡೆದಿದ್ದ 16 ಮಂದಿಯಲ್ಲಿ ಎಂಟು ಮಂದಿ ಫೈನಲ್‌ಗೆ ಮುನ್ನಡೆದರು. ಕುಜೂರ್ ಒಟ್ಟಾರೆ 10ನೇ ಸ್ಥಾನ ಗಳಿಸಿದರು.


ಘಾನಾದ ಜೋಸೆಫ್ ಪಾಲ್ ಅಮೋವಾ 20.24 ಸೆಕೆಂಡುಗಳಲ್ಲಿ ಗುರಿ ತಲುಪಿ ಅಗ್ರಸ್ಥಾನಿಯಾದರು.

ಕಾಮನ್‌ವೆಲ್ತ್ ಗೇಮ್ಸ್
ಗ್ಲಾಸ್ಗೊ 2026

**ಪದಕ ಪಟ್ಟಿ**

| ಸ್ಥಾನ | ದೇಶ | ಚಿನ್ನ | ಬೆಳ್ಳಿ | ಕಂಚು | ಒಟ್ಟು |
|---|---|---|---|---|---|
| 1 | ಆಸ್ಟ್ರೇಲಿಯಾ | 50 | 23 | 35 | 108 |
| 2 | ಇಂಗ್ಲೆಂಡ್ | 15 | 30 | 18 | 63 |
| 3 | ಕೆನಡಾ | 15 | 12 | 17 | 44 |
| 4 | ಸ್ಕಾಟ್ಲೆಂಡ್ | 9 | 7 | 8 | 24 |
| 5 | ನೈಜೀರಿಯಾ | 7 | 5 | 2 | 14 |
| 9 | ಭಾರತ | 3 | 9 | 3 | 15 |




ಚಿನ್ನದ ಪದಕ ಗೆದ್ದ ದಿಲೀಪ್ ಮಹದು ಗಾವಿತ್ (ಎಡ) ಬೆಳ್ಳಿ ಗೆದ್ದ ಮೊಹಮ್ಮದ್ ಬಾಸಿಲ್ ಪಿಟಿಐ/ಎಕ್ಸ್ ಚಿತ್ರ

## ಚೋಪ್ರಾ ಸೇರಿ ಭಾರತದ ಮೂವರು ಫೈನಲ್‌ಗೆ

ಗ್ಲಾಸ್ಗೊ (ಪಿಟಿಐ): ಎರಡು ಬಾರಿಯ ಒಲಿಂಪಿಕ್ಸ್ ಪದಕ ವಿಜೇತ ನೀರಜ್ ಚೋಪ್ರಾ ಅವರು ಗುರುವಾರ ಭಾರತದ ಇನ್ನಿಬ್ಬರು ಸ್ಪರ್ಧಿಗಳೊಂದಿಗೆ ಕಾಮನ್‌ವೆಲ್ತ್ ಕ್ರೀಡೆಗಳ ಜಾವೆಲಿನ್ ಥ್ರೊ ಫೈನಲ್‌ಗೆ ಸ್ಥಾನ ಕಾದಿರಿಸಿದ್ದಾರೆ.

ಅರ್ಹತಾ ಸುತ್ತಿನ ಎರಡು ಗುಂಪುಗಳಲ್ಲಿ ಮೊದಲ 12 ಸ್ಥಾನ ಪಡೆದವರು ಫೈನಲ್‌ಗೆ ಅರ್ಹತೆ ಪಡೆಯುತ್ತಾರೆ. 2018ರಲ್ಲಿ ಈ ಕೂಟದಲ್ಲಿ ಸ್ವರ್ಣ ಗೆದ್ದಿದ್ದ ಚೋಪ್ರಾ ತಮ್ಮ ಐದನೇ ಯತ್ನದಲ್ಲಿ 79.61 ಮೀ. ಥ್ರೋ ಮಾಡಿ ಐದನೇ ಸ್ಥಾನದೊಡನೆ ಅರ್ಹತೆ ಪಡೆದರು.

ರೋಹಿತ್ ಯಾದವ್ ಅವರು ಭರ್ಚಿಯನ್ನು 78.37 ಮೀ. ದೂರಕ್ಕೆ ಎಸೆದರೆ, ಯಶ್‌ವೀರ್ ಸಿಂಗ್ ಅವರು 78.36 ಮೀ. ದೂರ ಎಸೆದು ಅರ್ಹತ ಸುತ್ತಿನಲ್ಲಿ ಕ್ರಮವಾಗಿ ಒಂಬತ್ತು ಮತ್ತು ಹತ್ತನೇ ಸ್ಥಾನ ಪಡೆದು ಫೈನಲ್‌ಗೆ ಮುನ್ನಡೆದರು.

ಸರದಿಯಲ್ಲಿ ಕೊನೆಯವರಾಗಿ ಭರ್ಜಿ ಎಸೆಯುತ್ತಿದ್ದ ಚೋಪ್ರಾ ಅವರಿಗೆ ಫೈನಲ್‌ನಲ್ಲಿ ಸ್ಥಾನ ಪಡೆಯುವುದು ಖಚಿತವಾದ ಕಾರಣ ಮೂರನೇ ಹಾಗೂ ಅಂತಿಮ ಯತ್ನವನ್ನು ತೆಗೆದುಕೊಳ್ಳಲಿಲ್ಲ.

**ಪ್ರತಿಕೂಲ ಹವೆ:** ಸ್ಕಾಟ್ಸ್‌ಟನ್ ಕ್ರೀಡಾಂಗಣದಲ್ಲಿ ಜೋರಾಗಿ ಗಾಳಿ ಬೀಸುತ್ತಿದ್ದು ತಾಪಮಾನ 18 ಡಿಗ್ರಿಗೆ ಕುಸಿದಿದ್ದರಿಂದ ಸ್ಪರ್ಧಿಗಳಿಗೆ ಉತ್ತಮ ಥ್ರೋ ದಾಖಲಿಸುವುದು ಸವಾಲಾಯಿತು. ಚೋಪ್ರಾ ಮಂಕಿಕ್ಯಾಪ್ ಧರಿಸಿದ್ದರು. 84 ಮೀ. ಅರ್ಹತಾ ಮಾನದಂಡವಾಗಿದ್ದು, ಯಾರೂ ಅದನ್ನು ದಾಟಲಿಲ್ಲ.

ವರ್ಷದಿಂದ ಉತ್ತಮ ಲಯದಲ್ಲಿರುವ ಶ್ರೀಲಂಕಾ ರುಮೇಶ್ ತರಂಗ ಪಥಿರಗೆ ಅವರು 82.84 ಮೀ. ಸಾಧನೆಯೊಡನೆ ಅರ್ಹತಾ ಸುತ್ತಿನಲ್ಲಿ ಅಗ್ರಸ್ಥಾನ ಪಡೆದರು.



ಫೈನಲ್‌ಗೆ ಅರ್ಹತೆ ಪಡೆದ ಯಶ್‌ವೀರ್ ಸಿಂಗ್, ರೋಹಿತ್ ಯಾದವ್ ಮತ್ತು ನೀರಜ್ ಚೋಪ್ರಾ –ಪಿಟಿಐ ಚಿತ್ರ

ಮಾಜಿ ವಿಶ್ವ ಚಾಂಪಿಯನ್ ನೀರಜ್ 76.28 ಮೀ.ನೊಡನೆ ಮೊದಲ ಯತ್ನ ಆರಂಭಿಸಿದರು. ಮೊದಲ ಸುತ್ತಿನ ನಂತರ ಅವರು ಆರನೇ ಸ್ಥಾನದಲ್ಲಿದ್ದರು. ಎರಡನೇ ಯತ್ನದಲ್ಲಿ 76.28 ಮೀ. ಎಸೆದು ಐದನೇ ಸ್ಥಾನಕ್ಕೇರಿದರು.

ಯಶ್‌ವೀರ್ (ವೈಯಕ್ತಿಕ ಶ್ರೇಷ್ಠ ಸಾಧನೆ: 83.72 ಮೀ.) ಕೂಡ ಉತ್ತಮ ಆರಂಭ ಮಾಡಿದರು. ಮೊದಲು 73.89 ಮೀ. ಎಸೆದ 24 ವರ್ಷದ ಯಶವೀರ್ ಎರಡನೇ ಯತ್ನದಲ್ಲಿ 74.45 ಮೀ. ಮತ್ತು ಅಂತಿಮ ಯತ್ನದಲ್ಲಿ 78.36 ಮೀ. ಎಸೆದು ಅರ್ಹತೆ ಖಚಿಪಡಿಸಿಕೊಂಡರು.

ರೋಹಿತ್ 77.04 ಮೀ. ಎಸೆದು ವಿಶ್ವಾಸದೊಡನೆ ಆರಂಭ ಮಾಡಿದರು. ನಂತರ ಸುಧಾರಿಸಿ 78.37 ದೂರ ಎಸೆದರು. ಅವರೂ ಅಂತಿಮ ಯತ್ನಕ್ಕೆ ಮುಂದಾಗಲಿಲ್ಲ.

2025ರ ಸೆಪ್ಟೆಂಬರ್‌ನಲ್ಲಿ ನೀರಜ್‌ಗೆ ಬೆನ್ನಿನ ಕೆಳಭಾಗದಲ್ಲಿ ನೋವು ಕಾಣಿಸಿಕೊಂಡಿತ್ತು. ಗಾಯದ ಸಮಸ್ಯೆಯಿಂದ ಅವರು ಪುನರಾಗಮನ ವಿಳಂಬವಾಯಿತು.

Publication Date
31/07/2026

Presented by

### ❖ ಕುಸ್ತಿ: ನಿಕಿತಾಗೆ ಚಿನ್ನದ ಪದಕ

- ಭಾರತದ ನಿಕಿತಾ ಸೆಹ್ರಾವತ್ ಅವರು 17 ವರ್ಷದೊಳಗಿ ನವರ ವಿಶ್ವ ಕುಸ್ತಿ ಚಾಂಪಿಯನ್‌ಷಿಪ್‌ನ ಮಹಿಳೆಯರ ವಿಭಾಗದಲ್ಲಿ ಗುರುವಾರ ಬೆಳ್ಳಿ ಪದಕ ಗೆದ್ದುಕೊಂಡರು.

- 57 ಕೆ.ಜಿ. ವಿಭಾಗದ ಫೈನಲ್‌ನಲ್ಲಿ ಅವರು ಪ್ರಬಲ ಸ್ಪರ್ಧಿ, ಅಮೆರಿಕದ ಎಪಿನೇಸಾ ಎಲಿಸನ್ ಎದುರು 0-6 ರಿಂದ ಸೋತರು. ಎಪಿನೇಸಾ ಅವರು 2025ರ ಚಾಂಪಿಯನ್ ಆಗಿದ್ದಾರೆ.
- ಭಾರತದ ಕುಸ್ತಿಪಟು ಕಾಮ್ನಾ ಬಾಬಲ್ ಅವರು 49 ಕೆ.ಜಿ. ವಿಭಾಗದ ಕಂಚಿನ ಪದಕಕ್ಕೆ ನಡೆದ ಹಣಾಹಣಿಯಲ್ಲಿ ರಷ್ಯಾದ ಸ್ಪರ್ಧಿ ಐರಿನಾ ಸಿದೀವಾ ಅವರನ್ನು ಸೋಲಿಸಿದರು.

# ಕಾಮನ್‌ವೆಲ್ತ್ ಟೇಬಲ್ ಟೆನಿಸ್ ಭಾರತ ತಂಡಗಳಿಗೆ ಅವಳಿ ಪ್ರಶಸ್ತಿ

ನವದೆಹಲಿ (ಪಿಟಿಐ): ಮಾನುಷ್ ಶಾ ಅವರ ಅಮೋಘ ಆಟದ ನೆರವಿನಿಂದ ಭಾರತ ಪುರುಷರ ತಂಡವು 22ನೇ ಕಾಮನ್‌ವೆಲ್ತ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದಿತು. ಭಾರತ ಮಹಿಳೆಯರ ತಂಡವೂ ಕಿರೀಟ ಧರಿಸಿತು.

ಗುರುವಾರ ನಡೆದ ಫೈನಲ್ ಪಂದ್ಯದಲ್ಲಿ ಭಾರತ ತಂಡವು 3-2 ರಿಂದ ಮಲೇಷ್ಯಾ ವಿರುದ್ಧ ಜಯಿಸಿತ್ತು.

ಮಾನವ್ ಠಕ್ಕರ್ ಅವರು ಜವೇನ್ ಚೂಂಗ್ ವಿರುದ್ಧ 12-10, 11-7, 5-11, 11-5ರಿಂದ ಗೆದ್ದರು. ಮಾನುಷ್ ಶಾ ಅವರು 11-13, 11-9, 11-7, 2-11, 11-7 ಕೀ ಶೆನ್ ವಾಂಗ್ ವಿರುದ್ಧ ಜಯಿಸಿದರು.

ಇನ್ನೊಂದು ಪಂದ್ಯದಲ್ಲಿ ಜಿ. ಸತಿಯನ್ 7-11, 8-11, 10-12 ರಿಂದ ಹಾಂಗ್ ಯು ತೆ ವಿರುದ್ಧ ಸೋತರು. ಮತ್ತೊಂದು ಸುತ್ತಿನಲ್ಲಿ ಮಾನವ್ ಅವರು 11-4, 8-11, 11-8, 7-11, 1-11ರಿಂದ ವಾಂಗ್ ಎದುರು ಸೋತರು. ಮಾನುಷ್ ಅವರು 11-7, 11-4, 11-4 ರಿಂದ ಚೂಂಗ್ ಎದುರು ಜಯಿಸಿದರು.

ಮಹಿಳೆಯರ ವಿಭಾಗದಲ್ಲಿ ಸ್ವಸ್ತಿಕಾ ಘೋಷ್ 11-7, 11-2, 9-11, 11-9ರಿಂದ ಏಯಿ ಶಿನ್ ಟೀ ವಿರುದ್ಧ; ಶ್ರೀಜಾ ಅಕುಲಾ 9-11, 11-6, 11-4, 5-11, 11-3ರಿಂದ ಕರೆನ್ ಲೈನ್ ಅನಕ್ ಡಿಕ್ ವಿರುದ್ಧ ಗೆದ್ದರು. ಕನ್ನಡತಿ ಯಶಸ್ವಿನಿ ಘೋರ್ಪಡೆ 7-11, 11-3, 17-15, 11-5ರಿಂದ ಅಲ್ಯೆದ್ ಲೀ ಸಿಯಾನ್ ಚಾಂಗ್ ಎದುರು ಗೆದ್ದರು.

21ನೇ ಆವೃತ್ತಿಯಲ್ಲೂ ಭಾರತದ ಉಭಯ ತಂಡಗಳು ಪ್ರಶಸ್ತಿ ಗೆದ್ದಿದ್ದವು.


Publication Date
31/07/2026

Presented by ಪ್ರಜಾವಾಣಿ

## ❖ ಮಕ್ಕಳ ಆರೋಗ್ಯದ ದೃಷ್ಟಿಯಿಂದ ಆಹಾರ ಸುರಕ್ಷತೆ ಇಲಾಖೆ ಮುಂದಡಿ * ಮಾರಾಟ ಮಾಡಿದಲ್ಲಿ ₹3 ಲಕ್ಷದವರೆಗೂ ದಂಡ: ಶಾಲಾ-ಕಾಲೇಜುಗಳಲ್ಲಿ ಕುರುಕಲು ತಿಂಡಿ ನಿಷೇಧ

- ಮಕ್ಕಳ ಆರೋಗ್ಯದ ದೃಷ್ಟಿಯಿಂದ, ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯು ಶಾಲಾ-ಕಾಲೇಜುಗಳ ಆವರಣ ಮತ್ತು ಸುತ್ತಮುತ್ತಲಿನ 50 ಮೀಟರ್ ವ್ಯಾಪ್ತಿಯಲ್ಲಿ ಕುರುಕಲು ತಿಂಡಿಗಳ (ಜಂಕ್ ಫುಡ್) ಮಾರಾಟವನ್ನು ನಿಷೇಧಿಸಿದೆ.
- ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆರೋಗ್ಯ ಸಚಿವ ಯು.ಟಿ.ಖಾದರ್ ಈ ವಿಷಯ ತಿಳಿಸಿದರು.
- 'ಅಧಿಕ ಕೊಬ್ಬು, ಅಧಿಕ ಸಕ್ಕರೆ ಹಾಗೂ ಅಧಿಕ ಸೋಡಿಯಂ/ಉಪ್ಪು ಹೊಂದಿರುವ ಆಹಾರ ಪದಾರ್ಥಗಳು ಮತ್ತು ಪಾನೀಯಗಳು ಆರೋಗ್ಯಕ್ಕೆ ಮಾರಕ, ವಿದ್ಯಾರ್ಥಿಗಳಿಗೆ ಸುರಕ್ಷಿತ, ಗುಣಮಟ್ಟದ ಹಾಗೂ ಆರೋಗ್ಯಕರ ಆಹಾರ ಲಭ್ಯತೆಯನ್ನು ಖಚಿತಪಡಿಸುವ ಉದ್ದೇಶದಿಂದ ಇಲಾಖೆಯು ಜುಲೈ ತಿಂಗಳು ರಾಜ್ಯದಾದ್ಯಂತ 134 ಶಾಲೆ-ಕಾಲೇಜುಗಳ ಆವರಣದಲ್ಲಿ ಪರಿಶೀಲನೆ ನಡೆಸಿತ್ತು. ಈ ಸಂದರ್ಭದಲ್ಲಿ, ಸಂಶಯಾಸ್ಪದವಾಗಿ ಕಂಡುಬಂದ 53 ಆಹಾರ ಪದಾರ್ಥಗಳ ಮಾದರಿಗಳನ್ನು ಸಂಗ್ರಹಿಸಿ, ಪ್ರಯೋಗಾಲಯದ ವಿಶ್ಲೇಷಣೆಗೆ ಕಳುಹಿಸಲಾಗಿದೆ. ನೂರಕ್ಕೂ ಅಧಿಕ ಕಡೆ ಶಿಕ್ಷಣ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕುರುಕಲು ತಿಂಡಿಗಳ ಮಾರಾಟವು ಗಮನಕ್ಕೆ ಬಂದಿದೆ' ಎಂದರು.
- 'ಶಾಲಾ-ಕಾಲೇಜು ಆವರಣದಲ್ಲಿ ಕುರುಕಲು ತಿಂಡಿಗಳನ್ನು ಮಾರಾಟ ಮಾಡಿದಲ್ಲಿ ಕಾನೂನಿನಡಿ ಕ್ರಮ ಕೈಗೊಳ್ಳಲಾಗುವುದು. ₹3 ಲಕ್ಷದವರೆಗೂ ದಂಡ ವಿಧಿಸಲು ಅವಕಾಶವಿದೆ. ಶಿಕ್ಷಣ ಇಲಾಖೆಯ ಸಹಯೋಗದಲ್ಲಿ ಶಾಲಾ-ಕಾಲೇಜು ಆಡಳಿತ ಮಂಡಳಿಗಳಿಗೂ ಅರಿವು ಮೂಡಿಸಲಾಗುವುದು' ಎಂದು ಹೇಳಿದರು.
- 'ಆಡಳಿತ ಮಂಡಳಿಗಳು ನಿಷೇಧಕ್ಕೆ ಪೂರಕವಾಗಿ ಕ್ರಮ ಕೈಗೊಳ್ಳಬೇಕು. ಪ್ರಮುಖ ಸ್ಥಳಗಳಲ್ಲಿ ಎಚ್ಚರಿಕೆ ಫಲಕ ಗಳನ್ನು ಪ್ರದರ್ಶಿಸಬೇಕು. ಶಾಲೆಗಳ ಸಮೀಪದಲ್ಲಿರುವ ಎಲ್ಲ ಆಹಾರ ಮಳಿಗೆಗಳು, ಹೋಟೆಲ್‌ಗಳು, ಬೇಕರಿ ಗಳು, ಕ್ಯಾಂಟೀನ್‌ಗಳು ಹಾಗೂ ಇತರ ಆಹಾರೋದ್ಯಮ ಸಂಸ್ಥೆಗಳು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ- 2006ರ ಅಡಿ ಕಡ್ಡಾಯವಾಗಿ ನೋಂದಣಿಯಾಗಿ, ಪರವಾನಗಿ ಪಡೆಯ ಬೇಕು. ಸ್ವಚ್ಛತೆ ಹಾಗೂ ಆಹಾರ ಸುರಕ್ಷತಾ ಮಾನದಂಡಗಳನ್ನು ಪಾಲಿಸಬೇಕು' ಎಂದರು.
- 'ಆಹಾರ ಸುರಕ್ಷತಾ ಅಧಿಕಾರಿಗಳು ಶಾಲಾ-ಕಾಲೇಜುಗಳ ಸುತ್ತಮುತ್ತಲಿನ ಆಹಾರ ಮಳಿಗೆಗಳನ್ನು ಪರಿಶೀಲಿಸಿ, ನಿಯಮ ಉಲ್ಲಂಘಿಸಿದ್ದಲ್ಲಿ ಕಾನೂನು ಕ್ರಮ ಕೈಗೊಳ್ಳಬೇಕು. ಪರವಾನಗಿ ರದ್ದತಿಯಂತಹ ಕ್ರಮಕ್ಕೆ ಕಾನೂನಿನಡಿ ಅವಕಾಶವಿದೆ. ಶಾಲಾ- ಕಾಲೇಜುಗಳಲ್ಲಿ ಮಕ್ಕಳಿಗೆ ನೀಡುವ ಆಹಾರ ಪದಾರ್ಥ ಗಳು ಆಹಾರ ಸುರಕ್ಷತಾ ಮಾರ್ಗಸೂಚಿ ಅನುಸಾರ ಇರಬೇಕು. ಸುರಕ್ಷಿತ ಹಾಗೂ ಸಮತೋಲಿತ ಆಹಾರ ಪದಾರ್ಥಗಳನ್ನು ನೀಡಬೇಕು' ಎಂದು ಹೇಳಿದರು.
- ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆ ಆಯುಕ್ತ ಕೆ. ಶ್ರೀನಿವಾಸ, ಆರೋಗ್ಯ ಇಲಾಖೆ ಆಯುಕ್ತ ಗುರುದತ್ತ ಹೆಗಡೆ ಉಪಸ್ಥಿತರಿದ್ದರು.

Dr Rajkumar IAS/KAS Academy




Publication Date
01/08/2026

Presented by ಪ್ರಜಾವಾಣಿ

- ಮುಸಲ್ಮಾನರಲ್ಲಿರುವ ಬಹುಪತ್ನಿತ್ವ- ಅಸಾಂವಿಧಾನಿಕ ಎಂದು ಕೋರಿ ಅರ್ಜಿ: ಕೇಂದ್ರ ಸರ್ಕಾರದ ಪ್ರತಿಕ್ರಿಯೆ ಕೇಳಿದ ಸುಪ್ರೀಂ ಕೋರ್ಟ್
- ಮುಸಲ್ಮಾನರಲ್ಲಿರುವ ಬಹುಪತ್ನಿತ್ವವನ್ನು ಅಸಾಂವಿಧಾನಿಕ ಎಂದು ಘೋಷಿಸುವಂತೆ ಕೋರಿ ಸಲ್ಲಿಸಿದ್ದ ಅರ್ಜಿಯ ಕುರಿತಂತೆ ಸುಪ್ರೀಂ ಕೋರ್ಟ್ ಕೇಂದ್ರ ಸರ್ಕಾರದ ಅಭಿಪ್ರಾಯವನ್ನು ಕೋರಿದೆ.
- 'ಬಹುಪತ್ನಿತ್ವವು ಸಂವಿಧಾನದ ಆಶಯಗಳನ್ನು ಉಲ್ಲಂಘಿಸುತ್ತದೆ' ಎಂದು ಅರ್ಜಿಯಲ್ಲಿ ತಿಳಿಸಲಾಗಿದೆ.
- ಮಹಿಳಾ ಹೋರಾಟಗಾರರಾದ ಝಾಕಿಯಾ ಸೋಮನ್, ನೂರ್‌ಜೆಹಾನ್ ಸಫಿಯಾ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿಗಳಾದ ಜಾಯ್‌ಮಾಲ್ಯಾ ಬಾಗ್ಚಿ, ವಿ.ಮೋಹನಾ ಅವರಿದ್ದ ಪೀಠವು, ಈ ಸಂಬಂಧ ಪ್ರತಿಕ್ರಿಯೆ ಸಲ್ಲಿಸುವಂತೆ ಕೇಂದ್ರ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿದೆ.
- ಪೀಠವು ಅರ್ಜಿಯನ್ನು ಬಾಕಿ ಇರುವ ಅರ್ಜಿಗಳೊಂದಿಗೆ ಸೇರಿಸಿತು.
- ದ್ವಿಪತ್ನಿತ್ವವನ್ನು ಏಕರೂಪವಾಗಿ ಶಿಕ್ಷಿಸುವ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 82 ಅನ್ನು ಅನ್ವಯಿಸುವಂತೆ, ಮುಸ್ಲಿಂ ಕಾನೂನು ಮಂಡಳಿಗೆ ನೀಡಿರುವ ವಿನಾಯಿತಿಯನ್ನು ರದ್ದುಪಡಿಸುವಂತೆ ಕೋರಿ ಅರ್ಜಿದಾರರು ಮನವಿ ಮಾಡಿದ್ದರು.



ನಾಲ್ಕು ವರ್ಷದ ಬಾಲೆ ಮುದ್ದುಮುದ್ದಾಗಿ ಮಾತಾಡಿಕೊಂಡು ಎಲ್ಲರ ಕಣ್ಮಣಿಯಾಗಿದ್ದಳು. ಅದೊಂದು ದಿನ ಲಾರಿಯೊಂದು ಡಿಕ್ಕಿ ಹೊಡೆದು ಈ ಬಾಲಕಿಯ ಕಾಲು ಕಿತ್ತುಕೊಂಡಿತು. ಅಂಗವೈಕಲ್ಯಕ್ಕೆ ಒಳಗಾದ ಹುಡುಗಿಯ ಭವಿಷ್ಯ ಹೇಗಪ್ಪ ಎಂಬ ಚಿಂತೆಯು ಕುಟುಂಬವನ್ನು ಕಾಡಿತು. ಆದರೆ ಆ ಘಟನೆ ನಡೆದು ಮೂರು ದಶಕಗಳ ನಂತರ ಅದೇ ಹುಡುಗಿಯ ಸಾಧನೆಗೆ ಇಡೀ ದೇಶವೇ ಹೆಮ್ಮೆಪಡುತ್ತಿದೆ. ಆ ಬಾಲಕಿ ಬೇರಾರೂ ಅಲ್ಲ; ಸ್ಕಾಟ್ಲೆಂಡ್‌ನ ಗ್ಲಾಸ್ಗೊದಲ್ಲಿ ನಡೆಯುತ್ತಿರುವ ಕಾಮನ್‌ವೆಲ್ತ್ ಕ್ರೀಡಾಕೂಟದ ಪ್ಯಾರಾ ಅಥ್ಲೆಟಿಕ್ಸ್ ವಿಭಾಗದಲ್ಲಿ ಕಂಚಿನ ಪದಕ ಗೆದ್ದ **ಕೆ.ಎಸ್. ಶಿಲ್ಪಾ**. ಮೈಸೂರು ಜಿಲ್ಲೆಯ ಕೆ.ಆರ್. ನಗರದ ಕಂಬುಗಾರಕೊಪ್ಪಲಿನ ಈ ಸಾಧಕಿ 'ಪ್ರಜಾವಾಣಿ'ಗೆ ನೀಡಿರುವ ಸಂದರ್ಶನದ ವಿವರ ಇಲ್ಲಿದೆ

**• ಈ ಪದಕ ಜಯದ ನಂತರ ನಿಮ್ಮ ಬದುಕಿನಲ್ಲಿ ಯಾವ ರೀತಿ ಬದಲಾವಣೆ ಆಗಿದೆ ಮತ್ತು ನಿರೀಕ್ಷೆಗಳೇನು?**

ನಾನು ಕ್ರೀಡೆಯಲ್ಲಿ ತರಬೇತಿ ಪಡೆಯುವ ಬಗ್ಗೆ ಬಹಳ ಜನಕ್ಕೆ ಹೇಳಿಕೊಂಡಿರಲಿಲ್ಲ. ಏಕೆಂದರೆ ಮಾತನಾಡುವುದಕ್ಕಿಂತ ಸಾಧಿಸಿ ತೋರಿಸುವುದು ಮುಖ್ಯ. ಆದ್ದರಿಂದ ನನ್ನ ಪಾಡಿಗೆ ನಾನು ಅಭ್ಯಾಸ ಮಾಡಿಕೊಂಡಿದ್ದೆ. ಈ ಬಗ್ಗೆ ಗೊತ್ತಿದ್ದ ಕೆಲವರು ಲಕ್ಷಾಂತರ ರೂಪಾಯಿ ಸಾಲ ಮಾಡಿ ಇದೆಲ್ಲ ಬೇಕಿತ್ತಾ? ನೌಕರಿಯನ್ನು ಬಿಟ್ಟು ಆಟಕ್ಕೆ ಹೋಗಿದ್ದು ಸರಿನಾ ಎಂದು ಕೇಳಿದ್ದರು. ಆದರೆ ನಾನು ಅತ್ತ ಗಮನ ಕೊಡದೇ ಗುರಿಯತ್ತ ಸಾಗಿದೆ. ಅವತ್ತು ಪ್ರಶ್ನಿಸಿದವರಿಗೆಲ್ಲ ಇವತ್ತು ಈ ಪದಕ ಸಾಧನೆಯ ಮೂಲಕ ಉತ್ತರ ಸಿಕ್ಕಿದೆ ಎಂದುಕೊಳ್ಳುತ್ತೇನೆ.

2028ರ ಪ್ಯಾರಾಲಿಂಪಿಕ್ಸ್‌ನಲ್ಲಿ ಸ್ಪರ್ಧಿಸುವ ಗುರಿ ಇದೆ. ಅದಕ್ಕಾಗಿ ಪ್ರೋತ್ಸಾಹದ ನಿರೀಕ್ಷೆಯಲ್ಲಿದ್ದೇನೆ. ಪ್ಯಾರಾ ಗೇಮ್ಸ್‌ನಲ್ಲಿ ತರಬೇತಿ ಪಡೆಯಲು ಸ್ವಂತ ಹಣ ವಿನಿಯೋಗಿಸಬೇಕಾಗುತ್ತದೆ. ದೊಡ್ಡ ಹಂತಕ್ಕೆ ಹೋದಂತೆಲ್ಲ ವೆಚ್ಚ ಹೆಚ್ಚು. ಆದ್ದರಿಂದ ಧನಸಹಾಯ, ಪ್ರಾಯೋಜಕತ್ವಗಳು ದೊರೆತರೆ ಅನುಕೂಲ. ಇನ್ನೂ ದೊಡ್ಡ ಸಾಧನೆ ಮಾಡಬಹುದೆಂಬ ವಿಶ್ವಾಸ ಇದೆ.

# 'ದೇಶಕ್ಕೆ ಪದಕ ತಂದುಕೊಟ್ಟ ಹೆಮ್ಮೆ'

• ಗಿರೀಶ ದೊಡ್ಡಮನಿ

ಪ್ರಜಾವಾಣಿ ಸಂದರ್ಶನ

**• ಕಂಬುಗಾರಕೊಪ್ಪಲಿನಿಂದ ಕಾಮನ್‌ವೆಲ್ತ್ ಕಂಚಿನ ಪದಕ ಜಯದವರೆಗಿನ ನಿಮ್ಮ ಪಯಣ ಹೇಗಿತ್ತು?**

ಬಹಳ ಹೆಮ್ಮೆ ಮತ್ತು ಸಂತೋಷ ಎರಡೂ ಆಗುತ್ತಿದೆ. ಜೀವನದಲ್ಲಿ ಕಷ್ಟಗಳು ಬಂದಾಗ ಎಲ್ಲವೂ ಮುಗಿಯಿತು ಅಂದುಕೊಳ್ಳುವುದು ನಮ್ಮೆಲ್ಲರ ಸಹಜ ಗುಣ. ಆದರೆ ಆ ಸವಾಲನ್ನು ದಾಟಿ ಬಂದಾಗ ಅದೇ ಬದುಕು ನಮಗೆ ಚೆಂದದ ಅವಕಾಶ ಕೊಡುತ್ತದೆ. ನಾಲ್ಕು ವರ್ಷದವಳಿದ್ದೆ. ಒಂದು ಮದುವೆ ಸಮಾರಂಭ ಮುಗಿಸಿಕೊಂಡು ಮನೆಗೆ ಮರಳುತ್ತಿದ್ದೆವು. ಚುಂಚನಕಟ್ಟೆಯಲ್ಲಿ ರಸ್ತೆ ಅಪಘಾತವಾಯಿತು. ಲಾರಿ ಹಾಯ್ದು ಗಾಯಗೊಂಡೆ. ಎಡಗಾಲಿನ ಪಾದ ಜಖಂ ಆಗಿತ್ತು. ಆದರೆ ಆ ಕಾಲದಲ್ಲಿ ಆಸ್ಪತ್ರೆಗಳಲ್ಲಿ ಕಾಲು ಉಳಿಸಿಕೊಡುವಂತಹ ಶಸ್ತ್ರಚಿಕಿತ್ಸೆಯ ತಂತ್ರಜ್ಞಾನ ಅಷ್ಟಾಗಿ ಇರಲಿಲ್ಲ. ಪಾದವನ್ನಷ್ಟೆ ತೆಗೆದರೆ, ಕಾಲಿನ ಉಳಿದ ಭಾಗಕ್ಕೂ ಸೋಂಕು ಹರಡಬಹುದು ಎಂದು ವೈದ್ಯರು ಹೇಳಿದರು. ಆದ್ದರಿಂದ ಎಡಗಾಲು ತೆಗೆದರು. ಸ್ವಲ್ಪ ದೊಡ್ಡವಳಾದ ಮೇಲೆ ಕೃತಕ ಕಾಲಿನ ಸಹಾಯದಿಂದ ನಡೆದಾಡುವಂತಾದೆ. ಎಂ.ಎ., ಎಂ.ಇಡಿ ಮಾಡಿದೆ. ಶಿಕ್ಷಕಿಯಾಗಿ ಮೈಸೂರಿನಲ್ಲಿ ಕೆಲಸ ಮಾಡುತ್ತಿದ್ದೆ. ಆದರೆ ಜೀವನದಲ್ಲಿ ಯಾವಾಗಲೂ ಕ್ರೀಡಾಪಟುವಾಗುವ ಬಗ್ಗೆ ಯೋಚಿಸಿರಲಿಲ್ಲ. ನಮ್ಮ ಕುಟುಂಬದಲ್ಲಿಯೂ ಯಾರೂ ಕ್ರೀಡಾಪಟುಗಳಿಲ್ಲ. ನನ್ನ ತಂದೆ ರೈತರು. ಸಣ್ಣ ಜಮೀನಿದೆ. ಬಿಟ್ಟರೆ ಅಂತಹ ಶ್ರೀಮಂತರೇನಲ್ಲ. ಜೀವನಕ್ಕೆ ತಿರುವು ಸಿಕ್ಕಿದ್ದು 2019ರಲ್ಲಿ. ಕ್ರೀಡೆಯತ್ತ ಹೊರಳಿದ್ದು ಆಗಲೇ.

**• ಕ್ರೀಡೆಯತ್ತ ಹೇಗೆ ಆಸಕ್ತಿ ಬೆಳೆಯಿತು. ಯಾರು ನಿಮಗೆ ಮಾರ್ಗದರ್ಶನ ಮಾಡಿದರು?**

ಮೈಸೂರಿನ ಶಾಲೆಯೊಂದರಲ್ಲಿ ಅತಿಥಿ ಉಪನ್ಯಾಸಕಿಯಾಗಿ ಕೆಲಸ ಮಾಡುತ್ತಿದ್ದೆ. ಪ್ರತಿದಿನ ಮನೆಗೆ ಬಸ್‌ನಲ್ಲಿಯೇ ಓಡಾಡುತ್ತಿದ್ದೆ. ಆ ಬಸ್‌ನಲ್ಲಿ ಗೀತಾ ಎಂಬವರು ಪರಿಚಯವಾಗಿದ್ದರು. ದಿನಾಲೂ ಅವರೊಂದಿಗೆ ಮಾತನಾಡುತ್ತಿದ್ದೆ. ಅದೊಂದು ದಿನ ಅವರು ಸಿಟ್ಟಿಂಗ್ ವಾಲಿಬಾಲ್ ಕುರಿತು ಹೇಳಿದರು. ನನಗೂ ಅದರಲ್ಲಿ ಆಸಕ್ತಿ ಮೂಡಿತು. ಮಂಡ್ಯ ಜಿಲ್ಲೆಯ ರಾಘವೇಂದ್ರ ಎಂಬವರು ಸಿಟ್ಟಿಂಗ್ ವಾಲಿಬಾಲ್ ತರಬೇತಿ ನೀಡುತ್ತಿದ್ದರು. ಅವರ ಬಳಿ ಸೇರಿಕೊಂಡೆ. ಅವರು ಸುಮಾರು ನಾಲ್ಕು ವರ್ಷ ತರಬೇತಿ ನೀಡಿದರು. ಒಂದು ಸಲ ಅವರೇ ನನಗೆ, ವೈಯಕ್ತಿಕ ಕ್ರೀಡೆಯಲ್ಲಿ ಅಭ್ಯಾಸ ಮಾಡಿದರೆ ಒಳ್ಳೆಯ ಸಾಧನೆ ಮಾಡುವ ಸಾಮರ್ಥ್ಯ ಇದೆ ಎಂದು ಹುರಿದುಂಬಿಸಿದರು. ನನಗೆ ಸೂಕ್ತವಾಗುವ ಆಟದ ಕುರಿತು ಶೋಧಿಸಿದೆ. ಅಥ್ಲೆಟಿಕ್ಸ್‌ನಲ್ಲಿ ಸಾಧನೆ ಸಾಧ್ಯ ಎನಿಸಿತು. 2023ರಲ್ಲಿ ಬೆಂಗಳೂರಿಗೆ ಬಂದೆ. ಅಥ್ಲೆಟಿಕ್ಸ್ ಕೋಚ್, ಎಸ್.ಡಿ. ಈಶನ್ (ಏಷ್ಯನ್ ಕ್ರೀಡಾಕೂಟದ ಕಂಚಿನ ಪದಕ ವಿಜೇತರು ಮತ್ತು ಅನುಭವಿ ಕೋಚ್) ಮತ್ತು ಭಾರತ ಪ್ಯಾರಾ ಅಥ್ಲೆಟಿಕ್ಸ್ ತಂಡದ ಮುಖ್ಯ ಕೋಚ್ ಕೆ.ಆರ್. ಸತ್ಯನಾರಾಯಣ ಅವರ ಪರಿಚಯವಾಯಿತು. ಅಲ್ಲಿಂದ ಬದುಕಿಗೆ ಹೊಸ ತಿರುವು ಲಭಿಸಿತು.

**• ಶಾಟ್‌ಪಟ್ ಆಯ್ಕೆ ಮಾಡಿಕೊಂಡಿದ್ದು ಯಾಕೆ?**

ಪ್ಯಾರಾ ವಿಭಾಗದಲ್ಲಿ ಸ್ಪರ್ಧಿಸಲು ವರ್ಗೀಕರಣ ಮಾಡಿದ್ದಾರೆ. ಆಯಾ ಕ್ರೀಡಾಪಟುವಿನ ಅಂಗವೈಕಲ್ಯಕ್ಕೆ ತಕ್ಕ ಹಾಗೆ ಸ್ಪರ್ಧಾ ಮಟ್ಟ ಮತ್ತು ವಿಭಾಗಗಳನ್ನು ನಿರ್ಧರಿಸುತ್ತಾರೆ. ಅಂತರರಾಷ್ಟ್ರೀಯ ಪ್ಯಾರಾಲಿಂಪಿಕ್ಸ್ ಮಾನದಂಡಗಳಿಗೆ ತಕ್ಕಂತೆ ಈ ವರ್ಗೀಕರಣಗಳಿರುತ್ತವೆ. ಆ ಕುರಿತು ನನಗೆ ಅಷ್ಟಾಗಿ ಮಾಹಿತಿ ಗೊತ್ತಿರಲಿಲ್ಲ. ಈಶನ್ ಮತ್ತು ಸತ್ಯನಾರಾಯಣ ಅವರು ವರ್ಗೀಕರಣ ಸಿಗಲು ಸಹಾಯ ಮಾಡಿದರು. ಶಾಟ್‌ಪಟ್‌ನ ಎಫ್ 57 ವರ್ಗೀಕರಣದಲ್ಲಿ ನನಗೆ ಅವಕಾಶ ಲಭಿಸಿತು. 2024ರಲ್ಲಿ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಅಭ್ಯಾಸ ಆರಂಭಿಸಿದೆ. ಆದರೆ ನೌಕರಿ ಮತ್ತು ಕ್ರೀಡಾಭ್ಯಾಸವನ್ನು ಏಕಕಾಲಕ್ಕೆ ನಿರ್ವಹಿಸುವುದು ಕಷ್ಟವಾಯಿತು. ಅದ್ದರಿಂದ ನೌಕರಿ ಬಿಟ್ಟು ಬಂದೆ. ಆದರೆ ಆರ್ಥಿಕವಾಗಿ ಸ್ವಲ್ಪ ಹೊರೆಯಾಯಿತು. ಆಗಲೂ ರಾಘವೇಂದ್ರ, ಸತ್ಯನಾರಾಯಣ ಮತ್ತು ಈಶನ್ ಅವರೆಲ್ಲರೂ ಸಹಾಯ ಮಾಡಿದರು. ದುಬೈನಲ್ಲಿ ನಡೆದ ಅಂತರರಾಷ್ಟ್ರೀಯ ಸ್ಪರ್ಧೆಯಲ್ಲಿ ಅರ್ಹತಾ ಮಟ್ಟವನ್ನು ಪೂರೈಸಿದೆ. ಅದರಿಂದಾಗಿ ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ಅವಕಾಶ ಲಭಿಸಿತು.

**• ನೀವು ಸ್ಪರ್ಧಿಸಿದ ವಿಭಾಗದಲ್ಲಿ ಭಾರತದವರೇ ಆದ ಶರ್ಮಿಳಾ ಧನಕರ್ ಚಿನ್ನದ ಪದಕ ಜಯಿಸಿದರು. ಅವರ ಮತ್ತು ನಿಮ್ಮ ಸ್ನೇಹದ ಕುರಿತು ಹೇಳಿ...**

ಈ ಹಿಂದೆ ಕೆಲವು ಸ್ಪರ್ಧೆಗಳ ಸಂದರ್ಭದಲ್ಲಿ ಮತ್ತು ತರಬೇತಿ ಶಿಬಿರಗಳಲ್ಲಿ ಸಿಕ್ಕಾಗ ಪರಿಚಯ ಮಾತ್ರ ಇತ್ತು. ಔಪಚಾರಿಕ ಮಾತುಕತೆ ಮಾತ್ರ ಆಗುತ್ತಿತ್ತು. ಆದರೆ ಕಾಮನ್‌ವೆಲ್ತ್ ಕೂಟಕ್ಕಾಗಿ 'ಸಾಯ್'ನಲ್ಲಿ ಶಿಬಿರಕ್ಕೆ ಸೇರಿದಾಗ ನಮ್ಮಿಬ್ಬರ ಸ್ನೇಹ ಗಾಢವಾಯಿತು. ಜೀವನದಲ್ಲಿ ಬಹಳ ಕಠಿಣ ಸಮಯವನ್ನು ಎದುರಿಸಿ ಬಂದವರು ಶರ್ಮಿಳಾ. ಇಬ್ಬರೂ ಪರಸ್ಪರ ಸುಖ–ದುಃಖಗಳನ್ನು ಹಂಚಿಕೊಳ್ಳುತ್ತಿದ್ದೆವು. ತರಬೇತಿಯಲ್ಲಿ ಒಬ್ಬರಿಗೊಬ್ಬರು ಅನುಭವ ಹಂಚಿಕೊಂಡು ನಮ್ಮ ಕೌಶಲಗಳನ್ನು ಉತ್ತಮಪಡಿಸಿಕೊಂಡೆವು. ಅದು ನಮಗೆ ಕಾಮನ್‌ವೆಲ್ತ್ ಕೂಟದಲ್ಲಿ ನೆರವಾಯಿತು. ಅಂತಿಮವಾಗಿ ಭಾರತಕ್ಕೆ ನಾವಿಬ್ಬರೂ ಪದಕ ಗೆದ್ದುಕೊಟ್ಟಿದ್ದು ಹೆಮ್ಮೆಯ ಸಂಗತಿ.

**• ಗ್ಲಾಸ್ಗೊದಲ್ಲಿ ಸ್ಪರ್ಧೆ ಹೇಗಿತ್ತು? ವಿದೇಶಗಳ ಪ್ಯಾರಾ ಅಥ್ಲೀಟ್‌ಗಳಿಗೂ ಭಾರತದ ಅಥ್ಲೀಟ್‌ಗಳಿಗೆ ಏನಾದರೂ ವ್ಯತ್ಯಾಸ ಅನಿಸಿತಾ?**

ಇದೊಂದು ಬಹಳ ಒಳ್ಳೆಯ ಅನುಭವ ಕೊಟ್ಟ ಕ್ರೀಡಾಕೂಟ. ಬೇರೆ ಬೇರೆ ದೇಶಗಳ ಅಥ್ಲೀಟ್‌ಗಳ ಪ್ರದರ್ಶನವನ್ನು ನೋಡುವ ಅವಕಾಶ ಸಿಕ್ಕಿದೆ. ಅದರಿಂದ ನಮಗೂ ಮತ್ತಷ್ಟು ಪ್ರೇರಣೆ ದೊರೆಯುತ್ತದೆ. ನಮ್ಮ ವಿಭಾಗದಲ್ಲಿ ಪರದೇಶಗಳ ಅಥ್ಲೀಟ್‌ಗಳನ್ನು ಹಿಂದಿಕ್ಕಿದ್ದು ನಮಗೆ ಹೆಮ್ಮೆ. ಅವರಿಗೂ ನಮಗೂ ಹೆಚ್ಚೇನೂ ವ್ಯತ್ಯಾಸವಿಲ್ಲ. ಇಲ್ಲಿ ಸ್ಪರ್ಧಿಸುವವರೆಲ್ಲರೂ ಜೀವನದಲ್ಲಿ ದೊಡ್ಡ ಸಾಧನೆ ಮಾಡಬೇಕೆಂಬ ಛಲದಿಂದ ಬಂದವರೇ. ಆ ಪ್ರಯತ್ನದಲ್ಲಿ ನಾವು ಪದಕ ಜಯಿಸಿದ್ದೇವೆ. ಇದು ನಮ್ಮ ಮುಂದಿನ ಜೀವನಕ್ಕೆ ಪ್ರೇರಣೆ ಆಗಿದೆ.

Publication Date
01/08/2026

Presented by ಪ್ರಜಾವಾಣಿ

# ತೈಲ, ಅನಿಲ ನಿಕ್ಷೇಪ ಶೋಧಕ್ಕೆ ನೆರವು

## ₹84,084 ಕೋಟಿ ಮೊತ್ತದ ಯೋಜನೆಗೆ ಕೇಂದ್ರ ಸಂಪುಟದ ಒಪ್ಪಿಗೆ | ಪ್ರತಿ ತೈಲ ಬಾವಿಗೂ ₹650 ಕೋಟಿ ವೆಚ್ಚಕ್ಕೆ ನಿರ್ಧಾರ

ನವದೆಹಲಿ (ಪಿಟಿಐ): ಸಮುದ್ರದ ಆಳ ಪ್ರದೇಶಗಳಲ್ಲಿ ತೈಲ ಹಾಗೂ ಅನಿಲ ನಿಕ್ಷೇಪ ಶೋಧಿಸುವ 'ಸಮುದ್ರ ಮಂಥನ' ಯೋಜನೆಗೆ ಕೇಂದ್ರ ಸಚಿವ ಸಂಪುಟವು ಶುಕ್ರವಾರ ಅನುಮೋದನೆ ನೀಡಿದೆ. ₹84,084 ಕೋಟಿ ಮೊತ್ತದ ಅತ್ಯಂತ ದುಬಾರಿ ಯೋಜನೆಯ ಭಾಗಶಃ ವೆಚ್ಚವನ್ನು ಕೇಂದ್ರ ಸರ್ಕಾರವು ವ್ಯಯಿಸಲಿದ್ದು, ತೈಲ ಬಾವಿಗಳನ್ನು ಕೊರೆದು, ಮೂಲಸೌಕರ್ಯಗಳನ್ನು ಒದಗಿಸಲಾಗುತ್ತದೆ.

'ಈ ಯೋಜನೆಯ ಅಡಿಯಲ್ಲಿ ಆಳ ಸಮುದ್ರ ಹಾಗೂ ಅತಿ ಆಳ ಸಮುದ್ರಗಳಲ್ಲಿ ಪ್ರತಿ ತೈಲ ಬಾವಿ ಕೊರೆಯಲು ಕೇಂದ್ರ ಸರ್ಕಾರವು ₹650 ಕೋಟಿ ಆರ್ಥಿಕ ನೆರವು ನೀಡಲಿದೆ. ಆ ಮೂಲಕ ದೇಶೀಯವಾಗಿ ತೈಲ ಹಾಗೂ ಅನಿಲ



ಉತ್ಪಾದಿಸಿ ಸ್ವಾವಲಂಬನೆ ಸಾಧಿಸುವ ಮೂಲಕ ಆಮದು ಕಡಿಮೆ ಮಾಡುವ ಗುರಿ ಹೊಂದಲಾಗಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಆಳ ಸಮುದ್ರದ ತೈಲ ಬಾವಿ ಕೊರೆಯುವಿಕೆಗಾಗಿಯೇ ಮುಂದಿನ ಐದು ವರ್ಷಗಳ ತನಕ ₹43,200 ಕೋಟಿ ಅನುದಾನ ನೀಡಲು ಒಪ್ಪಿಗೆ ನೀಡಲಾಗಿದೆ. ಉಳಿದಂತೆ ₹10 ಸಾವಿರ ಕೋಟಿ ಮೊತ್ತವನ್ನು ತೈಲ ಹಾಗೂ ಅನಿಲ ಉತ್ಪಾದನೆಯ ಮೂಲಸೌಕರ್ಯಕ್ಕೆ ವಿನಿಯೋಗಿಸಲಾಗುತ್ತದೆ. ಅದೇ ರೀತಿ, ₹28,534 ಮೊತ್ತವನ್ನು ಕಡಲಾಚೆಯ ದತ್ತಾಂಶ ಸಂಗ್ರಹ ಹಾಗೂ ₹2 ಸಾವಿರ ಕೋಟಿ ಮೊತ್ತವನ್ನು ತೈಲ ಹಾಗೂ ಅನಿಲ ಉತ್ಪಾದನೆಯ ಸೇವಾ ವಲಯವನ್ನು ಅಭಿವೃದ್ಧಿಪಡಿಸಲು ಬಳಸಿಕೊಳ್ಳಲು ನಿರ್ಧರಿಸಲಾಗಿದೆ.

ಅತೀ ಆಳ ಸಮುದ್ರದಲ್ಲಿ ನೀರಿನ ಆಳದ ಮಟ್ಟವು 1,500 ಮೀಟರ್‌ಗಳಿಗಿಂತಲೂ ಹೆಚ್ಚಾದ ಸಂದರ್ಭದಲ್ಲಿ ಪ್ರತಿ ತೈಲ ಬಾವಿ ಕೊರೆಯಲು ₹950 ಕೋಟಿಯಿಂದ ₹2,400 ಕೋಟಿಯವರೆಗೂ ವೆಚ್ಚವಾಗಲಿದೆ. ಈ ಹೂಡಿಕೆಯು ಹೊಸ ಆವಿಷ್ಕಾರಕ್ಕೆ ಕಾರಣವಾಗುತ್ತದೆಯೇ ಅಥವಾ ದೇಶೀಯವಾಗಿ ಉತ್ಪಾದನೆಯೂ ಹೆಚ್ಚಾಗಲಿದೆಯೇ ಎಂಬುದರ ಬಗ್ಗೆ ಖಚಿತತೆಯಿಲ್ಲ.

ಪ್ರಸ್ತಾವಿತ ಯೋಜನೆಯಿಂದ, ಕಡಲಾಚೆಗಿನ ಪರಿಶೋಧನೆಗೆ ಹೆಚ್ಚಿನ ಶಕ್ತಿ ತುಂಬಲಿದ್ದು, ಹೂಡಿಕೆ ಪ್ರಮಾಣವು ಏರಿಕೆಯಾಗುವ ನಿರೀಕ್ಷೆಯಿದೆ ಎಂದು ಅಧಿಕೃತ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಭಾರತವು ತನ್ನ ಬೇಡಿಕೆಯ ಕಚ್ಚಾ-ತೈಲವನ್ನು ಆಮದು ಮಾಡಿಕೊಳ್ಳುವ ಪ್ರಮಾಣವು ಕಳೆದೊಂದು ದಶಕದಲ್ಲಿ ಶೇಕಡ 77ರಿಂದ ಶೇಕಡ 88ರವರೆಗೆ ಏರಿಕೆಯಾಗಿದೆ. ರಾಸಾಯನಿಕ ಗೊಬ್ಬರ ಉತ್ಪಾದನೆ, ವಾಹನಗಳಿಗೆ ಬಳಸುವ ನೈಸರ್ಗಿಕ ಅನಿಲದ ಬೇಡಿಕೆಯ ಅರ್ಧದಷ್ಟು ಭಾಗವನ್ನು ವಿದೇಶಗಳಿಂದಲೇ ಆಮದು ಮಾಡಿಕೊಳ್ಳುತ್ತಿದೆ. ಪಶ್ಚಿಮ ಏಷ್ಯಾದಲ್ಲಿ ನಡೆದ ಯುದ್ಧದಿಂದ ಇವುಗಳ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿತ್ತು. ಇದನ್ನು ತಪ್ಪಿಸಿ, ದೇಶಿಯ ಉತ್ಪಾದನೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಸರ್ಕಾರವು ಈ ಯೋಜನೆಗೆ ಒಪ್ಪಿಗೆ ನೀಡಿದೆ.

## ಪಿಎಂ–ಎಸ್‌ಎಸ್‌ವೈಗೆ ಅನುಮೋದನೆ

₹5,070 ಕೋಟಿ ವೆಚ್ಚದ 'ತೇಲುವ ಸೌರ ವಿದ್ಯುತ್ ಘಟಕ' ಹಾಗೂ ಸಂಗ್ರಹಣಾ ವ್ಯವಸ್ಥೆಯನ್ನು ಹೆಚ್ಚಿಸುವ 'ಪ್ರಧಾನಮಂತ್ರಿ ಸೂರ್ಯ ಸರೋವರ್ ಯೋಜನೆಗೆ (ಪಿಎಂ–ಎಸ್‌ಎಸ್‌ವೈ) ಕೇಂದ್ರ ಸರ್ಕಾರವು ಶುಕ್ರವಾರ ಅನುಮೋದನೆ ನೀಡಿದೆ.

ಈ ಯೋಜನೆಯು 5 ಸಾವಿರ ಮೆಗಾವಾಟ್ ತೇಲುವ ಸೌರ ಉತ್ಪಾದನಾ ಯೋಜನೆ ಹಾಗೂ ಸಂಗ್ರಹಣಾ ವ್ಯವಸ್ಥೆ ತಲುಪುವ ಗುರಿ ಹೊಂದಲಾಗಿದೆ. 2026ರಿಂದ 2030ರವರೆಗಿನ ಯೋಜನೆಗಳಿಗೆ ಅನುಮೋದನೆ ನೀಡಲು ನಿರ್ಧರಿಸಲಾಗಿದೆ.

Publication Date
01/08/2026

Presented by ಪ್ರಜಾವಾಣಿ

# ಪಿಎಂ–ಕಿಸಾನ್: 5 ವರ್ಷ ವಿಸ್ತರಣೆ

ನವದೆಹಲಿ (ಪಿಟಿಐ): ರೈತರಿಗೆ ವಾರ್ಷಿಕ ₹6 ಸಾವಿರ ಆರ್ಥಿಕ ನೆರವು ಒದಗಿಸುವ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ (ಪಿಎಂ–ಕಿಸಾನ್) ಯೋಜನೆಯನ್ನು 2030–31ರ ಆರ್ಥಿಕ ವರ್ಷದವರೆಗೆ ವಿಸ್ತರಿಸಲು ಕೇಂದ್ರ ಸಚಿವ ಸಂಪುಟ ಸಭೆ ಶುಕ್ರವಾರ ಒಪ್ಪಿಗೆ ನೀಡಿದೆ. ಈ ಅವಧಿಯಲ್ಲಿ ಯೋಜನೆಗಾಗಿ ಸರ್ಕಾರವು ₹3.15 ಲಕ್ಷ ಕೋಟಿ ವೆಚ್ಚ ಮಾಡಲಿದೆ.

'ರೈತರಿಗೆ ಹಣಕಾಸು ನೆರವು ನೀಡುವ ಈ ಯೋಜನೆಯನ್ನು ಐದು ವರ್ಷ ವಿಸ್ತರಿಸುವ (2026–27ರಿಂದ 2030–31ರವರೆಗೆ) ಪ್ರಸ್ತಾವಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯು ಅನುಮೋದನೆ ನೀಡಿದೆ' ಎಂದು ಕೇಂದ್ರ



ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್ ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ.

ಯೋಜನೆಯ ವಿಸ್ತರಣೆಯಿಂದ ಕೃಷಿ ಉತ್ಪಾದನೆ ಹೆಚ್ಚಲಿದ್ದು, ಗ್ರಾಮೀಣ ಆರ್ಥಿಕತೆಯು ಸದೃಢಗೊಳ್ಳಲಿದೆ ಎಂದು ಹೇಳಿದ್ದಾರೆ.

2019ರ ಫೆಬ್ರುವರಿಯಲ್ಲಿ ಪಿಎಂ–ಕಿಸಾನ್ ಯೋಜನೆಯನ್ನು ಆರಂಭಿಸಲಾಯಿತು. ಪ್ರತಿ ಅರ್ಹ ಫಲಾನುಭವಿಗೆ ವಾರ್ಷಿಕ ₹6 ಸಾವಿರ ನೀಡಲಾಗುತ್ತದೆ. ಈ ಹಣವನ್ನು ಫಲಾನುಭವಿಗಳ ಖಾತೆಗೆ ಮೂರು ಸಮಾನ ಕಂತುಗಳಲ್ಲಿ ನೇರ ನಗದು ವರ್ಗಾವಣೆ (ಡಿಬಿಟಿ) ಮೂಲಕ ಜಮಾ ಮಾಡಲಾಗುತ್ತದೆ.

ಯೋಜನೆಯ ಅಡಿ ಇಲ್ಲಿಯವರೆಗೆ 23 ಕಂತುಗಳ ಮೂಲಕ ₹4.47 ಲಕ್ಷ ಕೋಟಿಯನ್ನು ರೈತರ ಖಾತೆಗಳಿಗೆ ವರ್ಗಾಯಿಸಲಾಗಿದೆ. ಈ ಪೈಕಿ ₹1.06 ಲಕ್ಷ ಕೋಟಿ ಮೊತ್ತವನ್ನು ಮಹಿಳಾ ರೈತರ ಖಾತೆಗಳಿಗೆ ಜಮೆ ಮಾಡಲಾಗಿದೆ. ಪ್ರತಿ ನಾಲ್ವರು ಫಲಾನುಭವಿಗಳಲ್ಲಿ ಒಬ್ಬರು ಮಹಿಳೆ ಇದ್ದಾರೆ ಎಂದು ಸಚಿವರು ತಿಳಿಸಿದ್ದಾರೆ.

Publication Date
01/08/2026

Presented by ಪ್ರಜಾವಾಣಿ

# ಜುಡೊ ಮ್ಯಾಟ್‌ನಲ್ಲಿ ಸ್ವರ್ಣ ಸಂಭ್ರಮ

## ಅಸ್ಮಿತಾ ದೇವಿ, ಹರ್ಷ್ ಸಿಂಗ್ ಐತಿಹಾಸಿಕ ಚಿನ್ನದ ಸಾಧನೆ

**• ಯಾಮಿನಿಗೆ ರಜತ • ಭಾರತದ ಪದಕಗಳ ಸಂಖ್ಯೆ 20ಕ್ಕೆ ಏರಿಕೆ**



ಗೆಲುವಿನ ಸಂಭ್ರಮದಲ್ಲಿ ಅಸ್ಮಿತಾ ದೇವಿ ಪಿಟಿಐ ಚಿತ್ರ

ಗ್ಲಾಸ್ಗೊ (ಪಿಟಿಐ): ಕಾಮನ್‌ವೆಲ್ತ್ ಕ್ರೀಡಾಕೂಟದ ಜುಡೊ ಮ್ಯಾಟ್‌ನಲ್ಲಿ ಶುಕ್ರವಾರ ಸಂಜೆ ಭಾರತದ ಸ್ಪರ್ಧಿಗಳು ಚಿನ್ನದ ಸಾಧನೆ ಮಾಡಿದರು.

ಅಸ್ಮಿತಾ ದೇವಿ ಮತ್ತು ಹರ್ಷ್ ಸಿಂಗ್ ಅವರು ಕ್ರಮವಾಗಿ ಮಹಿಳೆಯರ 48 ಕೆ.ಜಿ ಹಾಗೂ ಪುರುಷರ 68 ಕೆ.ಜಿ ವಿಭಾಗದಲ್ಲಿ ಚಿನ್ನದ ಪದಕ ಜಯಿಸಿದರು. ಕೂಟದ ಇತಿಹಾಸದಲ್ಲಿ ಎರಡೂ ವಿಭಾಗಗಳಲ್ಲಿ ಸ್ವರ್ಣಸಾಧನೆ ಮಾಡಿದ ಭಾರತದ ಮೊದಲ ಸ್ಪರ್ಧಾಳುಗಳು ಎಂಬ ಹೆಗ್ಗಳಿಕೆಯೂ ಇವರದ್ದಾಯಿತು.

ಮಹಿಳೆಯರ ಫೈನಲ್‌ನಲ್ಲಿ ಅಸ್ಮಿತಾ ಅವರು ಕೆನಡಾದ ಹೀದಿ ಕ್ವಾಚ್ ವಿರುದ್ಧ ಗೋಲ್ಡನ್ ಸ್ಕೋರ್ ಮೂಲಕ ಗೆದ್ದರು. ತ್ರಿಪುರಾದ 23 ವರ್ಷದ ಅಸ್ಮಿತಾ ಅವರು ಆರಂಭದ ಬೌಟ್‌ನಲ್ಲಿ ಬ್ಯಾಕ್‌ಫುಟ್‌ನಲ್ಲಿದ್ದರು. ಒಂದು ಯುಕೊ ಪಾಯಿಂಟ್ ಕೂಡ ಬಿಟ್ಟುಕೊಟ್ಟರು. ಅದರಿಂದಾಗಿ ಕೆನಡಾದ ಸ್ಪರ್ಧಿ ಬೌಟ್ ಮೇಲೆ ಹಿಡಿತ ಸಾಧಿಸಿದರು. ಆದರೆ ನಂತರದಲ್ಲಿ ಚುರುಕಾಗಿ ತಿರುಗೇಟು ನೀಡಿದ ಅಸ್ಮಿತಾ 1-1ರ ಸಮಬಲ ಸಾಧಿಸಿದರು. ನಾಲ್ಕು ನಿಮಿಷಗಳ ಬೌಟ್ ರೋಚಕವಾಗಿತ್ತು.

ಅಪಾರ ಒತ್ತಡವಿದ್ದರೂ ಶಾಂತಚಿತ್ತ ಮತ್ತು ಏಕಾಗ್ರತೆಯಿಂದ ಎದುರಾಳಿಯ ದಾಳಿಯನ್ನು ಮೆಟ್ಟಿನಿಂತ ಅಸ್ಮಿತಾ ಯುಕೊ ಅಂಕ ಗಳಿಸಿ ಸ್ಮರಣೀಯ ಗೆಲುವು ದಾಖಲಿಸಿದರು.

ಪುರುಷರ ಫೈನಲ್‌ನಲ್ಲಿ 23 ವರ್ಷದ ಹರ್ಷ್ ಸಿಂಗ್ ಅವರು ಆಸ್ಟ್ರೇಲಿಯಾದ ಒಲಿಂಪಿಯನ್ ಜೊಶುವಾ ಕಾಟ್ಜ್ ಅವರನ್ನು ಮಣಿಸಿದರು.

ಇದೇ ಮೊದಲ ಬಾರಿ ಕಾಮನ್‌ವೆಲ್ತ್ ಕೂಟಕ್ಕೆ ಅರ್ಹತೆ ಗಳಿಸಿದ್ದ ಹರ್ಷ್ ಸಿಂಗ್, ಛಲದ ಆಟದ ಮೂಲಕ ಚಿನ್ನಕ್ಕೆ ಕೊರಳೊಡ್ಡಿದರು. ಈ ಬೌಟ್‌ನಲ್ಲಿ ಆಸ್ಟ್ರೇಲಿಯಾದ ಜುಡೊಕಾ ಅವರೇ ಪ್ರಶಸ್ತಿಗೆ ನೆಚ್ಚಿನ ಸ್ಪರ್ಧಿಯಾಗಿದ್ದರು. ಆದರೆ ಹರ್ಷ್ ಅವರ ಚಾಕಚಕ್ಯತೆಯಿಂದಾಗಿ ಅವರು ಮಣಿಯಬೇಕಾಯಿತು.

**ಯಾಮಿನಿಗೆ ಬೆಳ್ಳಿ:** ಭಾರತದ ಅನುಭವಿ ಜುಡೊಕಾ ಯಾಮಿನಿ ಮೌರ್ಯ ಅವರು ಮಹಿಳೆಯರ 57 ಕೆಜಿ ವಿಭಾಗದಲ್ಲಿ ಬೆಳ್ಳಿ ಪದಕ ಗೆದ್ದರು. ಇದು ಜುಡೊ ಸ್ಪರ್ಧೆಯಲ್ಲಿ ಭಾರತಕ್ಕೆ ಲಭಿಸಿದ ಮೂರನೇ ಪದಕವಾಗಿದೆ.

ಕಾಮನ್‌ವೆಲ್ತ್ ಗೇಮ್ಸ್

ಗ್ಲಾಸ್ಗೊ 2026



ಬೆಳ್ಳಿ ಪದಕ ಗೆದ್ದ ಭಾರತದ ಯಾಮಿನಿ ಮೌರ್ಯ

2022ರ ಬರ್ಮಿಂಗ್‌ಹ್ಯಾಮ್ ಆವೃತ್ತಿಯಲ್ಲಿ ಬೆಳ್ಳಿ ಪದಕ ವಿಜೇತೆಯಾಗಿರುವ 28 ವರ್ಷದ ಯಾಮಿನಿ ಫೈನಲ್‌ನಲ್ಲಿ ಇಂಗ್ಲೆಂಡ್‌ನ ಅಸೆಲ್ಯಾ ಟೋಪ್ರಾಕ್ ವಿರುದ್ಧದ ರೋಚಕ ಹೋರಾಟದಲ್ಲಿ ಸೋತರು. ತಾಂತ್ರಿಕ ಸವಾಲಿನಿಂದ ಕೂಡಿದ್ದ ನಾಲ್ಕು ನಿಮಿಷಗಳ ಫೈನಲ್‌ನಲ್ಲಿ ಎದುರಾಳಿಗೆ ತೀವ್ರ ಪೈಪೋಟಿ ನೀಡಿದರು.

ನಿಗದಿತ ಅವಧಿಯಲ್ಲಿ ಸ್ಕೋರ್ ಸಮ ನಾಗಿದ್ದರಿಂದ ಪಂದ್ಯವನ್ನು ಗೋಲ್ಡನ್ ಸ್ಕೋರ್‌ಗೆ ವಿಸ್ತರಿಸಲಾಯಿತು. ಅಲ್ಲಿ ಇಂಗ್ಲೆಂಡ್‌ನ ಸ್ಪರ್ಧಿ ಮೇಲುಗೈ ಸಾಧಿಸಿದರು.

ಮಧ್ಯಪ್ರದೇಶದ ಸಾಗರ್ ಮೂಲದ ಯಾಮಿನಿ ಅವರು ಸೆಮಿಫೈನಲ್‌ನಲ್ಲಿ ದಕ್ಷಿಣ ಆಫ್ರಿಕಾದ ಡೊನೆ ಬ್ರೇಟನ್‌ಬಾಚ್ ವಿರುದ್ಧ; ಕ್ವಾರ್ಟರ್ ಫೈನಲ್‌ನಲ್ಲಿ ಘಾನಾದ ಪ್ರೆಮಾ ಅಗ್ಯೆ ವಿರುದ್ಧ ಜಯ ಸಾಧಿಸಿದ್ದರು.

ಶ್ರದ್ಧಾ ಮತ್ತು ರೋಹಿತ್‌ಗೆ ನಿರಾಸೆ: ಮಹಿಳೆಯರ 52 ಕೆಜಿ ವಿಭಾಗದ ರೆಪೆಷಾಜ್ ಸುತ್ತಿನಲ್ಲಿ ಶ್ರದ್ಧಾ ಚೋಪಡೆ ಅವರು ವೇಲ್ಸ್‌ನ ಲೋಲಾ ಹಾಡ್ಸನ್ ವಿರುದ್ಧ ಸೋತು ಪದಕದ ಸುತ್ತಿನಿಂದ ಹೊರಬಿದ್ದರು.

ರೋಹಿತ್ ಬಸೀರ್ ಮಜ್ಗುಲ್ ಅವರು ಪುರುಷರ 66 ಕೆಜಿ ವಿಭಾಗದ ರೆಪೆಷಾಜ್ ಸುತ್ತಿನಲ್ಲಿ ಇಂಗ್ಲೆಂಡ್‌ನ ಮೈಕೆಲ್ ಫ್ರೈಯರ್ ವಿರುದ್ಧ ಸೋತು ಕೂಟದಿಂದ ನಿರ್ಗಮಿಸಿದರು.



## ಲವ್‌ಪ್ರೀತ್ ಸಿಂಗ್ ಕೈತಪ್ಪಿದ ಚಿನ್ನದ ಪದಕ

ಗ್ಲಾಸ್ಗೊ (ಪಿಟಿಐ): ಪಂಜಾಬ್ ರಾಜ್ಯದ ಗಡಿಭಾಗದ ಬಾಲ್ ಸಿಕಂದರ್ ಗ್ರಾಮದ ಲವ್‌ಪ್ರೀತ್ ಸಿಂಗ್ ಅವರ ತಂದೆ ದರ್ಜಿಯಾಗಿದ್ದಾರೆ. ಅಜ್ಜ ತರಕಾರಿ ಮಾರಾಟ ಮಾಡುತ್ತಿದ್ದರು. ಅದರಿಂದ ಬರುವ ಆದಾಯದಲ್ಲಿ ಕುಟುಂಬದ ನಿರ್ವಹಣೆಯೇ ಕಷ್ಟವಾಗಿದ್ದ ಸಮಯ ಅದು.

ಆದರೂ ಲವ್‌ಪ್ರೀತ್ ಅವರು ದೊಡ್ಡ ಕ್ರೀಡಾಪಟು ಆಗಬೇಕೆಂದು ಅಪ್ಪ ಕನಸು ಕಂಡರು. ಅದಕ್ಕಾಗಿ ಕಷ್ಟಪಟ್ಟು ಮಗನನ್ನು ಬೆಳೆಸಿದರು. ಅದರ ಫಲ ಈಗ ದೊರೆತಿದೆ. ಕಾಮನ್‌ವೆಲ್ತ್ ಕ್ರೀಡಾಕೂಟದ ಪುರುಷರ ವೇಟ್‌ಲಿಫ್ಟಿಂಗ್‌ನಲ್ಲಿ ಲವ್‌ಪ್ರೀತ್ ಬೆಳ್ಳಿ ಪದಕ ಜಯಿಸಿದರು. ಕೇವಲ ಒಂದು ಕಿಲೋಗ್ರಾಂ ಅಂತರದಲ್ಲಿ ಲವ್‌ಪ್ರೀತ್ ಚಿನ್ನ ಕೈತಪ್ಪಿಸಿಕೊಂಡರು.

ಗುರುವಾರ ತಡರಾತ್ರಿ ನಡೆದ ಪುರುಷರ 110 + ಕೆ.ಜಿ ವಿಭಾಗದ ವೇಟ್‌ಲಿಫ್ಟಿಂಗ್‌ನಲ್ಲಿ ಲವ್‌ಪ್ರೀತ್ ಒಟ್ಟು 388 ಕೆ.ಜಿ (ಸ್ನ್ಯಾಚ್‌ನಲ್ಲಿ 176 ಕೆ.ಜಿ ಹಾಗೂ ಕ್ಲೀನ್-ಜರ್ಕ್‌ನಲ್ಲಿ 212 ಕೆ.ಜಿ) ಭಾರ ಎತ್ತಿದ ಸಾಧನೆ ಮಾಡಿದರು. ಆದರೆ, ನ್ಯೂಜಿಲೆಂಡ್‌ನ ಡೇವಿಡ್ ಆ್ಯಂಡ್ರ್ಯೂ ಲಿಟಿ ಅವರು 389 ಕೆ.ಜಿ( ಸ್ನ್ಯಾಚ್ 166 ಕೆಜಿ ಮತ್ತು ಕ್ಲೀನ್ -ಜರ್ಕ್‌ನಲ್ಲಿ 223 ಕೆ.ಜಿ) ಭಾರ ಎತ್ತಿದರು.

ಇಂಗ್ಲೆಂಡ್‌ನ ಆ್ಯಂಡ್ರ್ಯೂ ಗ್ರಿಫಿತ್ 356 ಕೆ.ಜಿ (165ಕೆಜಿ + 223 ಕೆಜಿ) ಅವರು ಕಂಚಿನ ಪದಕ ಪಡೆದರು.

ನಾಲ್ಕು ವರ್ಷಗಳ ಹಿಂದೆ ಬರ್ಮಿಂಗ್‌ಹ್ಯಾಮ್‌ನಲ್ಲಿ ನಡೆದಿದ್ದ ಕೂಟದಲ್ಲಿ ಲವ್‌ಪ್ರೀತ್ ಅವರು ಕಂಚಿನ ಪದಕ ಪಡೆದಿದ್ದರು. ಈ ಬಾರಿ ಅವರು ಅಮೋಘ ಪ್ರದರ್ಶನ ನೀಡಿದರು.

13 ವರ್ಷ ವಯಸ್ಸಿನಿಂದಲೇ ಅವರು ಡಿಎವಿ ಕ್ರೀಡಾಂಗಣದಲ್ಲಿ ಅಭ್ಯಾಸ ಆರಂಭಿಸಿದ್ದರು. ಭಾರತದ ಬಹಳಷ್ಟು ಖ್ಯಾತನಾಮ ವೇಟ್‌ಲಿಫ್ಟರ್‌ಗಳು ಬೆಳೆದ ಕ್ರೀಡಾಂಗಣ ಇದು.

‘ನಾನು ಚಿನ್ನ ಜಯಿಸುವೆ ಎಂಬ ಭರವಸೆ ಪೂರ್ಣಪ್ರಮಾಣದಲ್ಲಿತ್ತು. ಆದರೆ ಅಲ್ಪ ಅಂತರದಲ್ಲಿ ಕೈತಪ್ಪಿದ್ದು ತುಸು ಬೇಸರವಾಗಿದೆ. ಕ್ಲೀನ್-ಜರ್ಕ್‌ನಲ್ಲಿ ಅಂತಿಮ ಪ್ರಯತ್ನದಲ್ಲಿ ಸ್ವಲ್ಪ ಹಿಂದುಳಿದಿದ್ದು ಬೇಜಾರಾಯಿತು. ಏಕೆಂದರೆ; ಅಭ್ಯಾಸ ಮಾಡುವ ಸಂದರ್ಭದಲ್ಲಿ ಇದಕ್ಕಿಂತ ಹೆಚ್ಚಿನ ತೂಕ ಎತ್ತಿದ್ದೆ’ ಎಂದು ಲವ್‌ಪ್ರೀತ್ ಹೇಳಿದರು.

ಸ್ನ್ಯಾಚ್‌ನಲ್ಲಿ ಅವರು 168 ಕೆ.ಜಿ. ಯಿಂದ ತಮ್ಮ ಅಭಿಯಾನ ಆರಂಭಿಸಿದರು. ನಂತರ 173 ಕೆ.ಜಿ ತೂಕವನ್ನು ನಿರಾಯಾಸವಾಗಿ ಎತ್ತಿದರು. ಮೂರನೇ ಪ್ರಯತ್ನದಲ್ಲಿ ಅವರು 176 ಕೆ.ಜಿ ಎತ್ತಿದರು.

ಲಿಟಿ ಅವರು ಸ್ನ್ಯಾಚ್‌ನಲ್ಲಿ ಲವ್‌ಪ್ರೀತ್‌ಗಿಂತ 10 ಕೆ.ಜಿ ಕಡಿಮೆ ತೂಕ ಎತ್ತಿದರು. ಆದರೆ ನ್ಯೂಜಿಲೆಂಡ್ ಲಿಫ್ಟರ್ ಕ್ಲೀನ್-ಜರ್ಕ್‌ನಲ್ಲಿ 207 ಕೆ.ಜಿ. ತೂಕವನ್ನು ಯಶಸ್ವಿಯಾಗಿ ಎತ್ತಿದರು.

ಲವ್‌ಪ್ರೀತ್ 212 ಕೆ.ಜಿ ತೂಕದಿಂದ ಆರಂಭಿಸಿದರು. ಅಂತಿಮ ಅವಕಾಶದಲ್ಲಿ 217 ಕೆ.ಜಿ. ಆಯ್ಕೆ ಮಾಡಿಕೊಂಡರು. ಅದರಲ್ಲಿ ಕ್ಲೀನ್ ಆಗಿ ಎತ್ತಿದರಾದರೂ, ಜರ್ಕ್‌ನಲ್ಲಿ ಸಮತೋಲನ ಕಾಪಾಡಿಕೊಳ್ಳಲಿಲ್ಲ. ಆದ್ದರಿಂದ ಲಿಟಿ ಅವರಿಗೆ ಅವಕಾಶದ ಬಾಗಿಲು ತೆರೆಯಿತು. 223 ಕೆ.ಜಿ ಎತ್ತಿದ ಅವರು ಚಿನ್ನಕ್ಕೆ ಮುತ್ತಿಟ್ಟರು.




ವೇಟ್‌ಲಿಫ್ಟರ್ ಲವಪ್ರೀತ್ ಸಿಂಗ್ ಎಪಿ/ಪಿಟಿಐ ಚಿತ್ರ

**ಪದಕ ಪಟ್ಟಿ**

| ಸ್ಥಾನ | ದೇಶ | ಚಿನ್ನ | ಬೆಳ್ಳಿ | ಕಂಚು | ಒಟ್ಟು |
|---|---|---|---|---|---|
| 1 | ಆಸ್ಟ್ರೇಲಿಯಾ | 53 | 27 | 41 | 121 |
| 2 | ಕೆನಡಾ | 17 | 14 | 18 | 49 |
| 3 | ಇಂಗ್ಲೆಂಡ್ | 16 | 31 | 25 | 72 |
| 4 | ಸ್ಕಾಟ್ಲೆಂಡ್ | 10 | 7 | 16 | 33 |
| 5 | ನೈಜೀರಿಯಾ | 8 | 5 | 3 | 16 |
| 9 | ಭಾರತ | 5 | 11 | 4 | 20 |

## ಬಾಕ್ಸಿಂಗ್‌ನಲ್ಲಿ ಪ್ರಾಬಲ್ಯ ಮೆರೆದ ಭಾರತ

# ಫೈನಲ್‌ಗೆ ಅರುಂಧತಿ, ಜೈಸ್ಮಿನ್, ಜಾದುಮಣಿ

ಗ್ಲಾಸ್ಗೊ (ಪಿಟಿಐ): ಭಾರತದ ಬಾಕ್ಸರ್‌ಗಳು ಕಾಮನ್‌ವೆಲ್ತ್ ಕ್ರೀಡೆಗಳಲ್ಲಿ ಶುಕ್ರವಾರ ಪ್ರಾಬಲ್ಯ ಮೆರೆದರು. ಅರುಂಧತಿ ಚೌಧರಿ ಅವರು ಮಹಿಳೆಯರ 70 ಕೆ.ಜಿ. ವಿಭಾಗದಲ್ಲಿ ಹಾಲಿ ಚಾಂಪಿಯನ್ ರೋಸಿ ಎಕ್ಲೆಸ್ (ವೇಲ್ಸ್) ಅವರಿಗೆ ಆಘಾತ



Publication Date
01/08/2026

Presented by

# ಡಿಸ್ಕಸ್ ಥ್ರೋನಲ್ಲಿ ಕಂಚು ಗೆದ್ದ 'ಸೂಪರ್ ಮದರ್'

ಗ್ಲಾಸ್ಗೊ (ಪಿಟಿಐ): 'ಸೂಪರ್ ಮದರ್' ಸೀಮಾ ಕಾಲಿರಮನ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಕಂಚಿನ ಪದಕ ಜಯಿಸಿದ್ದಾರೆ. ಒಂದು ಮಗುವಿನ ತಾಯಿಯಾದ ಮೇಲೆ ಕಣಕ್ಕೆ ಮರಳಿದ ನಂತರ ಇದು ಅವರ ಉತ್ತಮ ಸಾಧನೆಯಾಗಿದೆ.

ಗುರುವಾರ ತಡರಾತ್ರಿ ನಡೆದ ಮಹಿಳೆಯರ ಡಿಸ್ಕಸ್ ಥ್ರೋ ಸ್ಪರ್ಧೆಯಲ್ಲಿ 58.65 ಮೀಟರ್ಸ್ ದೂರ ಎಸೆತದ ಸಾಧನೆ ಮಾಡಿದರು. ಕಂಚಿನ ಪದಕ ಜಯಿಸಿದರು. ಹರಿಯಾಣದ ಸೀಮಾ ಅವರು ಆರು ಅವಕಾಶಗಳಲ್ಲಿ ಅವರು ಮೂರನೇ ಸುತ್ತಿನ ಥ್ರೋನಲ್ಲಿ ಕಂಚು ಖಚಿತಪಡಿಸಿಕೊಂಡರು. ಆದರೆ ನಾಲ್ಕು, ಐದು ಮತ್ತು ಆರನೇ ಅವಕಾಶಗಳಲ್ಲಿ ಫೌಲ್ ಮಾಡಿಕೊಂಡರು.

ಕ್ಯಾಮರಾನ್‌ನ ಮೋನಿ ನೊರಾ ಅತಿಮ್ ಅವರು ತಮ್ಮ ಅಂತಿಮ ಥ್ರೋನಲ್ಲಿ ನಿರೀಕ್ಷಿತ ದೂರದ ಥ್ರೋ ಮಾಡುವಲ್ಲಿ ವಿಫಲರಾದರು. ಅವರು ಕೇವಲ 11.18 ಮೀ ದೂರ ಎಸೆದು ಕಂಚು ತಪ್ಪಿಸಿಕೊಂಡರು. ಅವರಿಗಿಂತ ಉತ್ತಮವಾಗಿದ್ದ ಸೀಮಾ ಪದಕ ಪಡೆದರು. ಜಮೈಕಾದ ಸಮಂತಾ ಹಾಲ್ (61.66 ಮೀ) ಮತ್ತು ಕೆನಡಾದ ಜೂಲಿಯಾ ಟಂಕ್ಸ್ (60. 67 ಮೀ) ಅವರು ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಗಳಿಸಿದರು.

ಕೆಲವು ವರ್ಷಗಳ ಹಿಂದೆ ಸೀಮಾ ಅವರು ಮಗು ಜನಿಸಿದ ನಂತರ ಕ್ರೀಡಾಕಣಕ್ಕೆ ಮರಳಿದ್ದರು. ಅಲ್ಲದೇ 2025ರ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಜಯಿಸಿದ್ದರು. 27 ವರ್ಷದ ಸೀಮಾ ಅವರು ಪಿಎಚ್. ಡಿ ವ್ಯಾಸಂಗ ಕೂಡ ಮಾಡುತ್ತಿದ್ದಾರೆ.

ಕಾಮನ್‌ವೆಲ್ ಕೂಟದಲ್ಲಿ ಅವರ ಪ್ರದರ್ಶನವು ಉತ್ತಮವಾಗಿತ್ತು. ಸತತ ಫೌಲ್‌ಗಳ ನಂತರವೂ ಅವರು ಪುಟಿದೆದ್ದು ಪದಕ ಜಯಿಸಿದರು.

ಈ ಸ್ಪರ್ಧೆಯಲ್ಲಿದ್ದ ಭಾರತದ ಮತ್ತೊಬ್ಬ ಸ್ಪರ್ಧಿ ನಿಧಿ ರಾಣಿ ಅವರು ನಾಲ್ಕನೇ ಸ್ಥಾನ ಪಡೆದರು. ನಿಧಿ ಅವರು ಮೊದಲ ಅವಕಾಶದಲ್ಲಿ 53.19 ಮೀ ದೂರ ಡಿಸ್ಕಸ್ ಎಸೆದರು. ಅವರನ್ನು ನೈಜೀರಿಯಾದ ಒಬ್ಬೆಗೆರಿ ಪಮೆಲೆ ಅಮೇಚಿ (53.68ಮೀ) ಮತ್ತು ಉಗಾಂಡದ ಮೋನಿ ನೊರಾ ಅತಿಮ್ (55.37ಮೀ) ಅವರಿಬ್ಬರೂ ಹಿಂದಿಕ್ಕಿದರು. ಆದರೆ ಟಂಕ್ಸ್ ಅವರು ತಮ್ಮ ಚೊಚ್ಚಲ ಥ್ರೋನಲ್ಲಿಯೇ 58.21 ಮೀ ದೂರ ಥ್ರೋ ಮಾಡಿ ಉಳಿದವರನ್ನು ಹಿಂದಿಕ್ಕಿದರು. ಆದರೆ ಅವರ ಸಾಮರ್ಥ್ಯವನ್ನು ಸಮಂತಾ ಹಾಲ್ (59.27ಮೀ) ಮೀರಿ ನಿಂತರು.

ಎರಡನೇ ಸುತ್ತಿನಲ್ಲಿ ನಿಧಿ 55.67 ಮೀ ಒಗೆದು ಸುಧಾರಿತ ಪ್ರದರ್ಶನ ನೀಡಿದರು. ನಿಧಿಯನ್ನು ಹಿಂದಿಕ್ಕಿದ ಸೀಮಾ ಅವರು 57.32 ಮೀ ಥ್ರೋ ದಾಖಲಿಸಿದರು. ಈ ಸುತ್ತಲ್ಲಿ ಟಂಕ್ಸ್ 60.67 ಮೀ ಸಾಧನೆ ಮಾಡಿ ಬೆಳ್ಳಿ ಪದಕ ಖಚಿತಪಡಿಸಿಕೊಂಡರು. ಅವರನ್ನೂ ಹಿಂದಿಕ್ಕಿದ ಸಮಂತಾ ಚಿನ್ನಕ್ಕೆ ಕೊರಳೊಡ್ಡಿದರು.

Publication Date
01/08/2026

Presented by ಪ್ರಜಾವಾಣಿ

# ಬಾಕ್ಸಿಂಗ್‌ನಲ್ಲಿ ಪ್ರಾಬಲ್ಯ ಮೆರೆದ ಭಾರತ

# ಫೈನಲ್‌ಗೆ ಅರುಂಧತಿ, ಜೈಸ್ಮಿನ್, ಜಾದುಮಣಿ

ಗ್ಲಾಸ್ಗೊ (ಪಿಟಿಐ): ಭಾರತದ ಬಾಕ್ಸರ್‌ಗಳು ಕಾಮನ್‌ವೆಲ್ತ್ ಕ್ರೀಡೆಗಳಲ್ಲಿ ಶುಕ್ರವಾರ ಪ್ರಾಬಲ್ಯ ಮೆರೆದರು. ಅರುಂಧತಿ ಚೌಧರಿ ಅವರು ಮಹಿಳೆಯರ 70 ಕೆ.ಜಿ. ವಿಭಾಗದಲ್ಲಿ ಹಾಲಿ ಚಾಂಪಿಯನ್ ರೋಸಿ ಎಕ್ಲೆಸ್ (ವೇಲ್ಸ್) ಅವರಿಗೆ ಆಘಾತ ನೀಡಿದರು. ವಿಶ್ವ ಚಾಂಪಿಯನ್ ಜೈಸ್ಮಿನ್ ಲಂಬೋರಿಯಾ ಸೇರಿದಂತೆ ಭಾರತದ ಒಟ್ಟು ಆರು ಮಂದಿ ಬಾಕ್ಸಿಂಗ್ ಸ್ಪರ್ಧೆಗಳ ಫೈನಲ್‌ಗೆ ಲಗ್ಗೆಯಿಟ್ಟರು.

ಪ್ರೀತಿ ಪವಾರ್ (ಮಹಿಳೆಯರ 54 ಕೆ.ಜಿ), ಸಾಕ್ಷಿ ಚೌಧರಿ (ಮಹಿಳೆಯರ 51 ಕೆ.ಜಿ) ಅಂಕುಶ್ ಪಂಘಲ್ (ಪುರುಷರ 80 ಕೆ.ಜಿ) ಮತ್ತು ಜಾದುಮಣಿ ಸಿಂಗ್ (ಪುರುಷರ 55 ಕೆ.ಜಿ) ಅವರು ಫೈನಲ್ ತಲುಪಿದ ಇತರ ನಾಲ್ವರು.

ಮಹಿಳೆಯರ 70 ಕೆ.ಜಿ. ವಿಭಾಗದ ಸೆಮಿಫೈನಲ್ ಹಣಾಹಣಿ ಕೋಪ- ತಾಪಗಳನ್ನು ಕಂಡು, ಅರುಂಧತಿ ಅವರು ವೇಲ್ಸ್‌ನ ಎದುರಾಳಿಯನ್ನು 4–0 ಯಿಂದ ಸೋಲಿಸಿದರು. ಮೊದಲ ಎರಡು ಸುತ್ತುಗಳಲ್ಲಿ ಅರುಂಧತಿ ಉತ್ತಮ ಪ್ರದರ್ಶನ ನೀಡಿದರು. ರೋಸಿ ಈ ಅವಧಿಯಲ್ಲಿ ಒಮ್ಮೆ 'ಸ್ಟ್ಯಾಂಡಿಂಗ್ ಕೌಂಟ್' ಎದುರಿಸಬೇಕಾಯಿತು.

ಮಹಿಳೆಯರ 57 ಕೆ.ಜಿ. ವಿಭಾಗದಲ್ಲಿ ಜೈಸ್ಮಿನ್ ಲಂಬೋರಿಯಾ ಅವರಂತೂ ಅಧಿಕಾರಯುತ ಗೆಲುವು ಸಾಧಿಸಿದರು. ಎರಡನೇ ಸುತ್ತು ಮುಗಿಯಲು ಕ್ಷಣಗಳಿರುವಂತೆ ಲೆಸೊತೊ ದೇಶದ ಎದುರಾಳಿ ಮೂರನೇ ಬಾರಿ 'ಸ್ಟ್ಯಾಂಡಿಂಗ್ ಕೌಂಟ್' ಎದುರಿಸಿದರು. ಈ ಹಂತದಲ್ಲಿ 'ರೆಫ್ರಿ ಸ್ಟಾಪ್ಸ್ ಕಂಟೆಸ್ಟ್' (ಆರ್‌ಎಸ್‌ಸಿ) ಆಧಾರದಲ್ಲಿ ಜೈಸ್ಮಿನ್ ಜಯಗಳಿಸಿದರು.

ಪ್ರೀತಿ ಪವಾರ್ ಅವರ ಬಲಿಷ್ಠ ಪ್ರಹಾರಗಳ ಎದುರು ಜಾಂಬಿಯಾದ ಕ್ಯಾಥರಿನ್ ಎಂವಾಪೆ ನಿರುತ್ತರರಾದರು. ಸೆಮಿ-ಫೈನಲ್‌ನಲ್ಲಿ ಪ್ರೀತಿ 5–0 ಗೆಲುವು ಪಡೆದರು. ಏಷ್ಯನ್ ಗೇಮ್ಸ್ ಕಂಚಿನ ಪದಕ ವಿಜೇತೆಯಾಗಿರುವ 22 ವರ್ಷ ವಯಸ್ಸಿನ ಭಿವಾನಿಯ ಬಾಕ್ಸರ್, ಚಿನ್ನದ ಪದಕದ ಸೆಣಸಾಟದಲ್ಲಿ ಕೆನಡಾದ ಸ್ಕಾರ್ಲೆಟ್ ಡೆಲ್ಗಾಡೊ ಅವರನ್ನು ಎದುರಿಸಲಿದ್ದಾರೆ. ಸ್ಕಾರ್ಲೆಟ್ ಇನ್ನೊಂದು ಸೆಮಿಫೈನಲ್‌ನಲ್ಲಿ ಇಂಗ್ಲೆಂಡ್‌ನ ಲಾರೆನ್ ಮ್ಯಾಕಿ ಅವರನ್ನು 4–1 ರಿಂದ ಸೋಲಿಸಿದರು.

ಜಾದುಮಣಿ ಸಿಂಗ್ ಪುರುಷರ 55 ಕೆ.ಜಿ. ವಿಭಾಗದಲ್ಲಿ ನಮೀಬಿಯಾದ ಪಿ.ಪಿ.ಎಂ.ಹಾವೊಸೆಬ್ ಅವರನ್ನು 5–0 ಸರ್ವಾನುಮತದ ತೀರ್ಪಿನಲ್ಲಿ ಸೋಲಿಸಿದರು. ಅಂಕುಶ್ ಸೆಮಿಫೈನಲ್‌ನಲ್ಲಿ ಇದೇ ಅಂತರದಿಂದ ಕೆನಡಾದ ಜೋಶುವಾ ಒಫ್ಪೋರಿ ಅವರನ್ನು ಸದೆಬಡಿದರು.

ಸಾಕ್ಷಿ ಅವರು ಸೆಮಿಫೈನಲ್‌ನಲ್ಲಿ ಸಾಕ್ಷಿ 5–0ಯಿಂದ ಅಂಬರ್ ಜೇನ್ ವಾಲ್ ಅವರನ್ನು ಸೋಲಿಸಿ ಫೈನಲ್‌ಗೆ ಪ್ರವೇಶಿಸಿದರು.



ಗೆಲುವಿನ ನಂತರ ಸಂಭ್ರಮಪಟ್ಟ ಪ್ರೀತಿ ಪವಾರ್



ಎದುರಾಳಿಗೆ ಪಂಚ್ ನೀಡಿದ ಜಾದುಮಣಿ ಸಿಂಗ್ (ಬಲ)

Publication Date
01/08/2026

Presented by ಪ್ರಜಾವಾಣಿ

# ಭಾರತದ ಮಿಶ್ರ 4x400 ಮೀ. ರಿಲೇ ತಂಡ ಫೈನಲ್‌ಗೆ

ಗ್ಲಾಸ್ಗೊ (ಪಿಟಿಐ): ಭಾರತದ ಮಿಶ್ರ 4x400 ಮೀ. ರಿಲೇ ತಂಡವು ಕಾಮನ್‌ವೆಲ್ತ್ ಗೇಮ್ಸ್‌ನ ಹೀಟ್‌ಗಳಲ್ಲಿ ಒಟ್ಟಾರೆಯಾಗಿ ಏಳನೇ ಸ್ಥಾನ ಪಡೆದು ಫೈನಲ್‌ಗೆ ಅರ್ಹತೆ ಪಡೆಯಿತು.

ವಿಶಾಲ್ ಟಿ.ಕೆ, ಅನಿಸಾ ಬಾಬು, ರಾಜೇಶ್ ರಮೇಶ್ ಮತ್ತು ರಶ್‌ದೀಪ್ ಕೌರ್ ಅವರನ್ನು ಒಳಗೊಂಡ ಭಾರತ ತಂಡವು 3 ನಿಮಿಷ 20.98 ಸೆಕೆಂಡ್‌ಗಳಲ್ಲಿ ಗುರಿ ತಲುಪಿ, ಎರಡನೇ ಹೀಟ್ಸ್‌ನಲ್ಲಿ ನಾಲ್ಕನೇ ಸ್ಥಾನ ಪಡೆಯಿತು.

ಒಟ್ಟು ಎಂಟು ತಂಡಗಳು ಫೈನಲ್ ಪ್ರವೇಶಿಸಿವೆ. ಅಂತಿಮ ಸ್ಪರ್ಧೆ ಶನಿವಾರ ನಿಗದಿಯಾಗಿದೆ. ನೈಜೀರಿಯಾ, ಮೊದಲ ಹೀಟ್ಸ್‌ನಲ್ಲಿ 3 ನಿಮಿಷ 14.58 ಸೆಕೆಂಡ್‌ಲ್ಲಿ ಗುರಿ ತಲುಪಿ ಅಗ್ರಸ್ಥಾನ ಪಡೆದುಕೊಂಡಿತು. ಇಂಗ್ಲೆಂಡ್ (3:15.11) ಮತ್ತು ಆಸ್ಟ್ರೇಲಿಯಾ (3:15.21) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದವು. ಭಾರತ ತಂಡದ ಹಾಲಿ ಋತುವಿನ ಅತ್ಯುತ್ತಮ ಸಮಯ 3ನಿ.17.06 ಸೆ. ಆಗಿದ್ದರೆ, ರಾಷ್ಟ್ರೀಯ ದಾಖಲೆಯ ಸಮಯ 3ನಿ. 12.87ಸೆ. ಆಗಿದೆ.

Publication Date
01/08/2026

Presented by ಪ್ರಜಾವಾಣಿ

---------------------------------------------ಶುಭವಂದನೆಗಳು---------------------------------------------

Dr. Rajkumar IAS/KAS Academy